ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 42
ಅಕ್ಟೋಬರ್ 19, 2014

ಪುಟ 16 ರೂ. 10/-





'ಅರಣ್ಯ ಭೂಮಿ ಸಾಗುವಳಿ' ಸಕ್ರಮಗೊಳ್ಳಲಿ

ಬಗರ್ ಹುಕುಂ ಸಾಗುವಳಿ ಜಮೀನು :

ಬಡ ರೈತರ ಬದುಕಿಗೋ ? ಇಲ್ಲಾ, ಬಹುರಾಷ್ಟ್ರೀಯ ಕಂಪನಿಗಳ ಬಾಯಿಗೋ ?

ಕಾನೂನು ತಿದ್ದುಪಡಿ ತುರ್ತು ಅಗತ್ಯ.



ಭಾರತ–ಅಮೆರಿಕಾ ರಕ್ಷಣಾ ಒಪ್ಪಂದ: ನವೀಕರಣ ಬೇಡ–ರದ್ದಾಗಲಿ

ಅರಣ್ಯ ಭೂಮಿ ಸಾಗುವಳಿ ಸಕ್ರಮಕ್ಕಾಗಿ ಕಾನೂನು ತಿದ್ದುಪಡಿ ಒಂದು ಗಂಭೀರ ತುರ್ತು ಪ್ರಶ್ನೆ

ಜಿ.ಸಿ. ಬಯ್ಯಾರೆಡ್ಡಿ

ಅದು ಕರ್ನಾಟಕದ ವ್ಯಾಪ್ತಿಯಲ್ಲೇ ಇರಲಿ, ಭಾರತದ ವ್ಯಾಪ್ತಿಯಲ್ಲೇ ಇರಲಿ ಬಡತನ ನೀಗುವ ಪ್ರಮುಖ ಸಾಧನಗಳಲ್ಲಿ ಭೂಮಿ ಹಂಚಿಕೆ ಪ್ರಧಾನವಾದದ್ದು. ಅದು ಜನರನ್ನು ಸ್ವಾವಲಂಬಿಗಳನ್ನಾಗಿಸಿ ದೇಶದ ಆಹಾರ ಉತ್ಪಾದನೆಯನ್ನು, ಕೃಷಿ ಉತ್ಪಾದನೆಯನ್ನು ಹೆಚ್ಚಿಸುತ್ತದೆ.

ಬಗರ್ ಹುಕುಂ ಸಾಗುವಳಿಯನ್ನು ಸಕ್ರಮ ಮಾಡಬೇಕೆನ್ನುವಾಗ ಅದರಲ್ಲಿ ಗಣನೀಯ ಭಾಗ 'ಅರಣ್ಯ ಭೂಮಿ' ಎಂದು ಕರೆಯಲಾಗುವ ಭೂಮಿಯಲ್ಲಿನ ಸಾಗುವಳಿ ಸಕ್ರಮದ ಪ್ರಶ್ನೆಯೂ ಒಂದು ಪ್ರಧಾನ ಪ್ರಶ್ನೆಯಾಗಿ ಬರುತ್ತದೆ.

ಗ್ರಾಮಗಳ ಅಂಚಿನ, ಅರಣ್ಯ ಭೂಮಿಯೆನ್ನುವ ಕುರುಚಲು ಕಾಡು, ಬಂಜರು ಭೂಮಿ, ಕರಾಬು ಭೂಮಿ ಇತ್ಯಾದಿಗಳಲ್ಲಿ ಗಿಡಗಂಟೆ ಸವರಿ ಬಡ ರೈತರು ಭತ್ತ, ರಾಗಿ ಅಥವಾ ಬೇಳೆ ಕಾಳು ಇತ್ಯಾದಿ ಏನಾದರೂ ಬೆಳೆ ಬೆಳೆಯುತ್ತಾ ಬರುತ್ತಿರುತ್ತಾರೆ. ಇದು ಒಂದು ಬಗೆ. ಆದಿವಾಸಿಗಳು ಅಥವಾ ಬುಡಕಟ್ಟು ಜನರು ಪಾರಂಪರಿಕವಾಗಿ ಅರಣ್ಯದಲ್ಲಿಯೇ ವಾಸಿಸುತ್ತಾ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿಕೊಂಡು ಕಾಡಿಗೆ ಹೊಂದಿಕೊಂಡು ಜೀವನ ನಡೆಸುತ್ತಾ ಇರುತ್ತಾ ಜೊತೆಗೆ ಒಂದಷ್ಟು ಭೂಮಿಯಲ್ಲಿ ಕೃಷಿಯನ್ನು ನಡೆಸಿಕೊಂಡು ಬರುತ್ತಿರುತ್ತಾರೆ. ತಾವು ನಡೆಸುತ್ತಿರುವ ಸಾಗುವಳಿ ಭೂಮಿಗೆ ಕಾನೂನುಬದ್ಧವಾದ ಹಕ್ಕಿಲ್ಲದೇ ಅತಂತ್ರ ಸ್ಥಿತಿಯಲ್ಲಿ ನಾನಾ ರೀತಿಯ ಕಿರುಕುಳಗಳಿಗೆ ತುತ್ತಾಗುತ್ತಿರುವ ದೇಶದ ಇಂತಹ ಸುಮಾರು 9 ಕೋಟಿ ಜನರ ಬದುಕಿಗೆ ಕಾನೂನು ಬದ್ಧವಾದ ಭೂಮಿ ಹಕ್ಕನ್ನು ಕೊಟ್ಟು ಅವರ ಬದುಕಿಗೆ ಭದ್ರತೆ ಒದಗಿಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ 'ಅರಣ್ಯ ಹಕ್ಕು ಕಾಯ್ದೆ'ಗೆ ಚಾಲನೆ ಬಂದಿತು. ಅರಣ್ಯವಾಸಿಗಳ ಬದುಕಿನ ಪ್ರಶ್ನೆಯನ್ನು ಭೂಮಿಯ ಬೇಡಿಕೆಯ ಪ್ರಶ್ನೆಯನ್ನು ಹುಸಿ ಪರಿಸರವಾದಿಗಳ ದೃಷ್ಟಿಯಿಂದ ನೋಡುವುದು ಗಂಭೀರವಾದ ಪ್ರಮಾದವಾಗುತ್ತದೆ. ಆದಿವಾಸಿಗಳು, ಬಡ-ರೈತರು ಒಂದು ಪಕ್ಷ ಅರಣ್ಯದ ನಡುವೆಯೇ ಕೃಷಿ ಮಾಡುತ್ತಿದ್ದರೂ ಅದು ಸುತ್ತ ಮುತ್ತಲ ಹಸಿರು ಪರಿಸರಕ್ಕೆ ಹೊಂದಿಕೊಂಡ ತುಂಡುಭೂಮಿಯ ವ್ಯವಸಾಯ. ಅದು ಸಹ ಪರಿಸರಕ್ಕೆ ಹಸಿರು ತುಂಬುವಂತದ್ದೇ ಆಗಿರುತ್ತದೆ. ಅರಣ್ಯ ಸಂಪತ್ತನ್ನು ಲೂಟಿ ಹೊಡೆಯುವವರು ಕಾಂಟ್ರಾಕ್ಟದಾರರು. ಪರಿಸರವನ್ನು ಹಾಳುಗೆಡಹುವವರು ಗಣಿ ಲೂಟಿ-ಕೋರರು. ದೈತ್ಯ ಯಂತ್ರೋಪಕರಣಗಳನ್ನು ಬಳಸುವ ಬಹುರಾಷ್ಟ್ರೀಯ ಕಂಪನಿಗಳೆಂಬ ಬಕಾಸುರರು. ಅಗತ್ಯ ಮೀರಿ ಕಾಡು ಕಡಿದು ದೊಡ್ಡ ದೊಡ್ಡ ಎಸ್ಟೇಟು, ತೋಟ ಮಾಡುವವರು ಬಾರಿ ಶ್ರೀಮಂತರೇ ಹೊರತು ಆದಿವಾಸಿಗಳಲ್ಲ. ಬಡ ರೈತರಲ್ಲ. ಬಡ ರೈತರು ಸಣ್ಣ ಪುಟ್ಟ ಗಿಡ ಮರ ಸವರಿ ತೋಟ ಮಾಡಿದ್ದರೂ ಅಲ್ಲಿ ಮತ್ತೆ ತೆಂಗಿನ ಮರವೋ, ಅಡಿಕೆ ಮರವೋ ನಿಂತು ಹಸಿರಾಗಿ ಕಂಗೊಳಿಸುತ್ತದೆ.

ಇಂತಹ ಹಿನ್ನಲೆಯಲ್ಲಿಯೇ ದೇಶದಲ್ಲಿ ಎಡಪಕ್ಷಗಳು ಎಡ ಶಕ್ತಿಗಳು ಅರಣ್ಯವಾಸಿಗಳಾದ ಬುಡಕಟ್ಟು ಜನರು ಮತ್ತು ಇತರ ಬಡ ರೈತರು ಸಾಗುವಳಿ ಮಾಡುತ್ತಿರುವ ಅರಣ್ಯ ಭೂಮಿಗೆ ಕಾನೂನು ಬದ್ಧವಾದ ಹಕ್ಕು ಸಿಗಬೇಕೆಂದು ಹೋರಾಟ ಮಾಡುತ್ತಾ ಬಂದಿದ್ದವು. ಈ ಪ್ರಶ್ನೆ ಹಲವಾರು ದಶಕಗಳಿಂದ ಇತ್ಯರ್ಥವಾಗದೇ ಬಾಕಿ ಉಳಿದ ಪ್ರಶ್ನೆಯಾಗಿತ್ತು. ಎಡಪಕ್ಷಗಳು ಒಂದು ಸಮಗ್ರವಾದ ಶಾಸನದ ಮೂಲಕ ಈ ಪ್ರಶ್ನೆಯನ್ನು ಸಮರ್ಪಕವಾಗಿ ಇತ್ಯರ್ಥ ಪಡಿಸಲು ಬಯಸಿದ್ದವು. 2004ರ ಲೋಕಸಭಾ ಚುನಾವಣೆಯ ನಂತರ ಕೇಂದ್ರದ ಯುಪಿಎ ಸರ್ಕಾರವು ಎಡಪಕ್ಷಗಳ ಬೆಂಬಲವಿಲ್ಲದೇ ಸರ್ಕಾರ ನಡೆಸಲಾರದ ಒಂದು ಸನ್ನಿವೇಶ ಬಂದಾಗ ಜನಪರ ಸಂಘಟನೆಗಳು ಬೀದಿಗಿಳಿದು ಚಳುವಳಿ ನಡೆಸಿದರೆ, ಎಡಪಕ್ಷಗಳು ಕಾಯ್ದೆಗಾಗಿ ಬಿಗಿಪಟ್ಟು ಹಿಡಿದವು. ಈ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ 'ಅರಣ್ಯ ಹಕ್ಕು ಕಾಯ್ದೆ' ಎಂದು ಕರೆಯಲಾಗುವ 'ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006.' ಎಂಬ ಮಸೂದೆಯು ಕಾಯ್ದೆಯಾಗಿ ಅಂಗೀಕಾರವಾಯಿತು. ಸಂಸತ್ತಿನಲ್ಲಿ ಕಾಯ್ದೆ ಅಂಗೀಕಾರವಾದ ಮೇಲೆ ಸೂಕ್ತ ಕಾನೂನುಗಳ ರಚನೆಯೊಂದಿಗೆ ಅದು 2008 ರಲ್ಲಿ ಅಧಿಕೃತವಾಗಿ ಜಾರಿಗೆ ಬಂದಿತು. ಭಾರತ ದೇಶದ ಇಂತಹದ್ದೊಂದು ಕಾಯ್ದೆ ಜಾರಿಗೆ ಬಂದ ಕೂಡಲೇ ಅದರ ಪ್ರಯೋಜನವನ್ನು ಜನತೆಗೆ ಮೊತ್ತ ಮೊದಲು ನೀಡಿದ್ದು ಈಶಾನ್ಯ ಭಾಗದ ತ್ರಿಪುರ ರಾಜ್ಯ. ಬುಡಕಟ್ಟು ಜನರು ಗಣನೀಯ ಪ್ರಮಾಣದಲ್ಲಿರುವ ತ್ರಿಪುರ ರಾಜ್ಯದ ಎಡರಂಗ ಸರ್ಕಾರವು ಇಡೀ ದೇಶಕ್ಕೆ ಮಾದರಿ ಎನ್ನುವಂತೆ ಕಾಯ್ದೆಯ ಜಾರಿಗೆ ಮುಂದಾಯಿತು. ತಲೆತಲಾಂತರದಿಂದ ಅರಣ್ಯ ಕಾಪಾಡುತ್ತಾ ಬಂದ-ಅರಣ್ಯದೊಂದಿಗೇ ಬದುಕು ರೂಪಿಸಿಕೊಂಡಿರುವ ಜನರಿಗೆ ಅರಣ್ಯ ಉತ್ಪನ್ನಗಳ ಸಂಗ್ರಹ ಹಕ್ಕು ನೀಡುವ- ಅರಣ್ಯ ಭೂಮಿಯಲ್ಲಿ ಅಷ್ಟಿಷ್ಟು ಸಾಗುವಳಿ ಮಾಡುವ ಹಕ್ಕು ನೀಡಲು ಎಡರಂಗ ಸರ್ಕಾರಕ್ಕೆ ಸಂತೋಷವಿತ್ತೇ ವಿನಹ ಯಾವ ಸಂಕಟವೂ ಇರಲಿಲ್ಲ. ಆದರೆ ದೇಶದ ಬಹುತೇಕ ಭಾಗದಲ್ಲಿ ಈ ಕಾಯ್ದೆ ಸಮರ್ಪಕವಾಗಿ ಜಾರಿಗೆ ಬರಲೇ ಇಲ್ಲ. ಕರ್ನಾಟಕ ರಾಜ್ಯದಲ್ಲಾಗಲೀ ಕೇಂದ್ರದಲ್ಲಾಗಲೀ ಆಗ ಇದ್ದ ಮತ್ತು ಈ ನಡುವೆ ಬಂದು ಹೋದ ಸರ್ಕಾರಗಳಿಗೆ ಈ ಮಹತ್ತದ ಕಾಯ್ದೆಯನ್ನು ಜಾರಿ ಮಾಡಬೇಕೆಂಬ ರಾಜಕೀಯ ಇಚ್ಛಾಶಕ್ತಿಯಾಗಲೀ, ಸಣ್ಣ ಆಸೆಯಾಗಲೀ ಇರಲೇ ಇಲ್ಲ. ಸಮಾಜದ ತಳ ಹಂತದಿಂದ ಮೇಲಿನ ಹಂತದವರೆಗಿನ ಅಧಿಕಾರಶಾಹಿಯಲ್ಲಿ ಈ ಕಾಯ್ದೆಯ ಜಾರಿಯನ್ನು ತಡೆಯುವುದು ಹೇಗೆ ಎಂಬುದೇ ಬಹುತೇಕ ಧೋರಣೆಯಾದದ್ದರಿಂದ ಅಧಿಕಾರಶಾಹಿಯೂ ಈ ಕಾಯ್ದೆಯ ಜಾರಿಗೆ ತಡೆಗೋಡೆಯಂತೆಯೇ ಕೆಲಸ ಮಾಡಿತು. ಇನ್ನು ಸರಿಯಾಗಿ ಹೇಳಬೇಕೆಂದರೆ ನಾನಾ ಹೆಸರುಗಳಲ್ಲಿ ನೆಪಗಳಲ್ಲಿ ಕಾಡಿನಿಂದ ಅಲ್ಲಿನ ಆದಿವಾಸಿಗಳನ್ನು ಮತ್ತು ಇತರ ಅರಣ್ಯವಾಸಿಗಳನ್ನು ಹೊರಕ್ಕೆ ದಬ್ಬುವ ಕೆಲಸಕ್ಕೆ ಬೆಂಬಲವಾಗಿ ನಿಂತಿತು. ಹೀಗಾಗಿ ಈ ಅರಣ್ಯ ಹಕ್ಕುಗಳ ಕಾಯ್ದೆ ಪ್ರಶ್ನೆಯೂ ಈಗಲೂ ಒಂದು ಗಂಭೀರ ಪ್ರಶ್ನೆಯಾಗಿದೆ.

ಕರ್ನಾಟಕ ರಾಜ್ಯದಲ್ಲಿ

ಅರಣ್ಯ ಹಕ್ಕು ಕಾಯ್ದೆ ಅಂಗೀಕಾರವಾದಾಗ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವಿತ್ತು. ಹಗರಣಗಳ ರಾಡಿಯಲ್ಲಿ ಮುಳುಗಿ ಏಳುತ್ತಿದ್ದ ಯಡಿಯೂರಪ್ಪನವರ ಸರ್ಕಾರ-ಕ್ಕೆ ಅರಣ್ಯ ಹಕ್ಕು ಕಾಯ್ದೆ ಜಾರಿ ಮಾಡಬೇಕಾದ ಒಂದು ಪ್ರಶ್ನೆಯಂತೆಯೇ ಕಾಣಲಿಲ್ಲ. ಸಮಸ್ಯೆ ಹಾಗೇ ಉಳಿಯಿತು. ಅರಣ್ಯ ಹಕ್ಕು ಪಡೆದುಕೊಳ್ಳುವ ಕೆಲಸಕ್ಕೆ ಮತ್ತೊಂದು ಸಮಸ್ಯೆ ಎದುರಾಗಿದೆ. ಅದು ಕಸ್ತೂರಿ ರಂಗನ್ ಸಮಿತಿ ವರದಿ. ದೇಶದ ಸು. 80 ಜಿಲ್ಲೆಗಳಲ್ಲಿ ಹಬ್ಬಿಕೊಂಡಿರುವ ಪಶ್ಚಿಮ ಘಟ್ಟದ ಪರಿಸರವನ್ನು ಸಂರಕ್ಷಿಸಬೇಕೆಂಬ ವರದಿ.

ಕರ್ನಾಟಕದಲ್ಲಿ ಈ ಕಡೆ ಚಾಮರಾಜನಗರದಿಂದ ಆರಂಭಗೊಂಡು ಮೈಸೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಬೆಳಗಾವಿ ಮುಂತಾದ ಜಿಲ್ಲೆಗಳಲ್ಲಿ ಹಾದು ಹೋಗುವ ಪಶ್ಚಿಮ ಘಟ್ಟದ ಆಸುಪಾಸಿನ ಜಿಲ್ಲೆಗಳಲ್ಲಿ ಸೂಕ್ಷ್ಮ ಜೀವ ವೈವಿಧ್ಯವನ್ನು ಮತ್ತು ಅರಣ್ಯವನ್ನು ಕಾಪಾಡಬೇಕು, ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸಬೇಕು ಎನ್ನುವ 'ಕಸ್ತೂರಿ ರಂಗನ್ ಸಮಿತಿ'ಯ ಶಿಫಾರಸ್ಸಿನ ಉರುಳೂ ಈಗ ಹೊಸದಾಗಿ ಸೇರಿಕೊಂಡಿದೆ. ಇನ್ನು ರಾಮನಗರ ಸೇರಿದಂತೆ ಅರಣ್ಯ ಭೂಮಿಯ ಪ್ರಶ್ನೆ ಬಯಲು ಸೀಮೆ, ಮುಂಬೈ ಕರ್ನಾಟಕ-ಹೈದರಾಬಾದ್ ಕರ್ನಾಟಕ.. ಹೀಗೆ ಎಲ್ಲ ಭಾಗಗಳಲ್ಲೂ ಎಲ್ಲ ಜಿಲ್ಲೆಗಳಲ್ಲೂ ಜನರನ್ನು ಕಾಡುವ ಪ್ರಶ್ನೆಯಾಗಿದೆ.

ಕಾಯ್ದೆಯ ಅವಕಾಶಗಳ ಬಳಕೆ ಹೇಗೆ?



ಬಡ ರೈತರಿಗೆ ಮತ್ತು ಅರಣ್ಯಗಳ ನಡುವೆ ಬದುಕಿದ್ದವರಿಗೆ ತಾವು ಸಾಗುವಳಿ ಮಾಡುತ್ತಿರುವ ಭೂಮಿಯ ಮೇಲೆ ತಮಗೆ ಕಾನೂನು ಬದ್ಧ ಹಕ್ಕು ಬಂದಿದೆ ಎಂದು ತಿಳಿಸಿಕೊಡುವ ಕೆಲಸ ಆಗಬೇಕಿತ್ತು. ಮತ್ತು ಈ ಹಕ್ಕು ಗಳಿಸಿಕೊಳ್ಳಲು ಏನು ಮಾಡಬೇಕು ಎಂಬುದನ್ನೂ ಅವರಿಗೆ ಹೇಳಿಕೊಡಬೇಕಿತ್ತು. ಅದು ಸಕಾಲದಲ್ಲಿ ಆಗಲಿಲ್ಲ. ಈಗಲಾದರೂ ಆ ಕೆಲಸ ಆಗಬೇಕಿದೆ.

ಅರಣ್ಯ ಹಕ್ಕು ಸಮಿತಿ

ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡುವವರು ಗ್ರಾಮ ಮಟ್ಟದ 'ಅರಣ್ಯ ಹಕ್ಕು ಸಮಿತಿ'ಗೆ ಅರ್ಜಿ ಕೊಡಬೇಕು. ಈ ಸಮಿತಿಯು ಮೇಲಿನ ಎ.ಸಿ. ಅಂದರೆ ಸಹಾಯಕ ಜಿಲ್ಲಾಧಿಕಾರಿಗಳ ಮಟ್ಟದ ಸಮಿತಿಗೆ ಅರ್ಜಿಯನ್ನು ಕಳುಹಿಸಿಕೊಡುತ್ತದೆ. ಈ ಹಂತದಲ್ಲಿ ಸಮಿತಿಯು ತಾನು ಪರಿಶೀಲನೆ ನಡೆಸಿ ಭೂಮಿಯನ್ನು ಮಂಜೂರು ಮಾಡಿ ಅಂತಿಮಗೊಳಿಸಬಹುದು ಅಥವಾ ತಿರಸ್ಕರಿಸಬಹುದು. ಈ ಹಂತದಲ್ಲಿ ಇತ್ಯರ್ಥವಾಗದಿದ್ದರೆ ಮುಂದಿನ ಹಂತ ಜಿಲ್ಲಾಧಿಕಾರಿಗಳ ಹಂತ. ಇನ್ನು ಮೇಲಿನ ಹಂತವೆಂದರೆ ಈ ಒಟ್ಟು ಪ್ರಶ್ನೆಗಳ ಕುರಿತು ಮೇಲ್ವಿಚಾರಣೆ ನಡೆಸುವ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಹಂತದ ಸಮಿತಿ.

ಕಾಯ್ದೆ ಪ್ರಕಾರ ಆದಿವಾಸಿಗಳು ಡಿಸೆಂಬರ್ 13, 2005 ರಂದು ಆ ಭೂಮಿಯ ಸ್ವಾಧೀನದಲ್ಲಿದ್ದರೆ ಅಂತಹವರು ಭೂಮಿಯ ಮೇಲಿನ ಹಕ್ಕು ಪಡೆದುಕೊಳ್ಳಲು ಅರ್ಹರಾಗುತ್ತಾರೆ. ಮನೆಯೂ ಸೇರಿ 10 ಎಕರೆಯವರೆಗೆ ಭೂಮಿಯನ್ನು ಮಂಜೂರು ಮಾಡಬಹುದು. 2012 ರಲ್ಲಿ ಈ ವಿಷಯಕ್ಕೆ ಒಂದು ತಿದ್ದುಪಡಿ ಬಂದಿದೆ. ಇಂತಹ ಸೌಲಭ್ಯವು ಪಟ್ಟಣವಾಸಿಗಳು ಮತ್ತು ನಗರವಾಸಿಗಳಿಗೆ ಸಹ ವಿಸ್ತರಿಸಲಾಗಿದೆ.

ಜಾರಿ ಏನಾಗಿದೆ?

ಪುಸ್ತಕದ ಬದನೆಕಾಯಿಯು ಸಾರಿಗೆ ಸಿಗುವುದಿಲ್ಲ. ಅಡುಗೆಗೆ ತೋಟದ ಬದನೆಯೇ ಆಗಬೇಕು. ಕರ್ನಾಟಕ ರಾಜ್ಯದಲ್ಲಿ ಕಾಯ್ದೆ ಜಾರಿ ಆಗಿರುವ ಪರಿ ನೋಡೋಣ.

ಅರಣ್ಯ ಭೂಮಿ ಸಾಗುವಳಿ ಸಕ್ರಮಕೋರಿ ಆದಿವಾಸಿ(ಎಸ್.ಟಿ.)ಗಳಿಂದ ಜುಲೈ 2014 ರವರೆಗೆ ರಾಜ್ಯದ 16 ಜಿಲ್ಲೆಗಳಲ್ಲಿ ಒಟ್ಟಾರೆ 35,230 ಅರ್ಜಿಗಳ ಸಲ್ಲಿಕೆಯಾಗಿದೆ. ಆದರೆ ಇವುಗಳಲ್ಲಿ ಭೂಮಿಗೆ 'ಟೈಟಲ್ ಡೀಡ್' ಎನ್ನಲಾಗುವ 'ಸಾಗುವಳಿ ಪತ್ರ' ಕೊಟ್ಟಿರುವುದು ಕೇವಲ 6,721 ಕುಟುಂಬಗಳಿಗೆ ಮಾತ್ರ. ಈ ಲೆಕ್ಕದಲ್ಲಿ ಮಂಜೂರು ಮಾಡಿರುವ ಭೂಮಿ ಒಟ್ಟು 9,266 ಎಕರೆ ಮಾತ್ರ. 6,182 ಅರ್ಜಿಗಳನ್ನು ಇತ್ಯರ್ಥಗೊಳಿಸದೇ ಬಾಕಿ ಇರಿಸಿಕೊಳ್ಳಲಾಗಿದೆ. ಆದಿವಾಸಿಗಳ ಒಟ್ಟು 22,327 ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಎಷ್ಟೋ ಆದಿವಾಸಿಗಳು, ಸಾಗುವಳಿದಾರರು ತಮ್ಮ ಭೂಮಿ ಹಕ್ಕು ಕೇಳಿ ಅರ್ಜಿ ಹಾಕುವುದೇ ಸಾಧ್ಯವಾಗಿಲ್ಲ. ಕಾಡಿನಿಂದ ಹೊರಕ್ಕೆ ನಗರ, ಪಟ್ಟಣಗಳಿಗೆ ಬಂದು ಹೋಗುವುದಕ್ಕೇ ಅಂಜುವ ಆದಿವಾಸಿಗಳು, ಇದಕ್ಕಿಂತ ಕೊಂಚ ಮಾತ್ರವೇ ಮೇಲಿರುವ ಬಡರೈತರು ಭೂಮಿಗಾಗಿ ಅರ್ಜಿ ಹಾಕಲು ಸರಕಾರದ ಯಂತ್ರ ಸಹಾಯ ಮಾಡಬೇಕಿತ್ತು. ಮಾಡಿಲ್ಲ. ಕೆಲವೆಡೆ ಸಂಘಸಂಸ್ಥೆಗಳು ಸಹಾಯಕ್ಕೆ ಮುಂದಾಗಿದ್ದರೂ ಸಹ ಅದು ತುಂಬಾ ಸೀಮಿತವಾದದ್ದು. ಈಗಲಾದರೂ ಸರಕಾರ ಮತ್ತು ಸಂಘ ಸಂಸ್ಥೆಗಳು ಈ ಕೆಲಸಕ್ಕೆ ತುರ್ತಾಗಿ ಮುಂದಾಗಬೇಕಿದೆ.

ಅರಣ್ಯ ಭೂಮಿ ಸಾಗುವಳಿ ಸಂಬಂಧ ಬುಡಕಟ್ಟೇತರ ಸಾಗುವಳಿದಾರರಿಂದ ಜುಲೈ 2014 ರವರೆಗೆ ಒಟ್ಟಾರೆ 2,18,496 ಅರ್ಜಿಗಳು ಬಂದಿವೆ. ಇದರಲ್ಲಿ 1,48,516 ಅರ್ಜಿಗಳು ತಿರಸ್ಕಾರಗೊಂಡಿವೆ. ಈ ವಿಭಾಗದಲ್ಲಿ ಭೂಮಿ ಹಕ್ಕು ನೀಡಲಾಗಿರುವುದು ಇಡೀ ರಾಜ್ಯದಲ್ಲಿ ಕೇವಲ 367 ಕುಟುಂಬಗಳಿಗೆ ಮಾತ್ರ!! ಇದು ಕೇವಲ ಎರಡೇ ಜಿಲ್ಲೆಗಳಲ್ಲಿ. ಅಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ 212 ಕುಟುಂಬಗಳಿಗೆ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಕೇವಲ 75 ಕುಟುಂಬಗಳಿಗೆ!!!

ಇನ್ನು ಗ್ರಾಮಗಳಲ್ಲಿ ಮತ್ತು ಅರಣ್ಯ ಪ್ರದೇಶದಲ್ಲಿ ಶಾಲೆ, ಆಸ್ಪತ್ರೆ ಇತ್ಯಾದಿ ಸಮುದಾಯದ ಅಗತ್ಯಗಳ ಸಂಬಂಧ ಬಳಕೆಯಾಗಿರುವ ಭೂಮಿಯ ಹಕ್ಕಿಗಾಗಿ 'ಸಮುದಾಯ ಭೂಮಿ'ಯ ವಿಭಾಗದಲ್ಲಿ 4,575 ಅರ್ಜಿಗಳ ಸಲ್ಲಿಕೆಯಾಗಿವೆ. ಆದರೆ ಅದರಲ್ಲಿ 2,239 ಅರ್ಜಿ ತಿರಸ್ಕೃತಗೊಂಡಿವೆ. 2,240 ಅರ್ಜಿಗಳನ್ನು ಬಾಕಿ ಇಡಲಾಗಿದೆ. ಅಂಗೀಕಾರವಾಗಿರುವುದು ಕೇವಲ 96 ಅರ್ಜಿಗಳು. ಈ ಸಂಬಂಧ ಹಕ್ಕು ನೀಡಲಾಗಿರುವುದು 26,242 ಎಕರೆಗಳಿಗೆ ಮಾತ್ರ.

ಇದೆಲ್ಲದರ ಒಟ್ಟು ಅರ್ಥ ಎಂದರೆ ಕಾಯ್ದೆಯು ರೂಪುಗೊಂಡಿದ್ದರ ಹಿಂದಿನ ಕೇಂದ್ರ ಉದ್ದೇಶ ಈಡೇರುತ್ತಿಲ್ಲ. ಭೂಹೀನರಿಗೆ, ಅನ್ನ ಬೆಳೆಯುವ ರೈತರಿಗೆ, ನಿಜಕ್ಕೂ ಭೂಮಿ ಅಗತ್ಯವಾಗಿ-ಅದನ್ನೇ ಅವಲಂಬಿಸಿ ಬದುಕುತ್ತಿರುವವರಿಗೆ ಭೂಮಿ ನೀಡಬೇಕೆಂಬ ಕಾಯ್ದೆ ಹಿಂದಿನ ಮೂಲ ಆಶಯ ಮೂಲೆಗುಂಪಾಗಿದೆ. ತಾಂತ್ರಿಕ ಪ್ರಶ್ನೆಗಳನ್ನು ಅಡ್ಡ ಇಟ್ಟುಕೊಂಡು ಅರ್ಜಿಗಳನ್ನು ತಿರಸ್ಕರಿಸುವ ಕೆಲಸ ಮಾತ್ರ ನಡೆದಿದೆ. ಕಾಯ್ದೆಯೊಳಗಿನ ಹಲವು ಅಂಶಗಳು ಅರ್ಜಿ ನಿರಾಕರಿಸಲು ಸಹಕಾರಿಯಾಗಿಯೇ ಇವೆ. ಹಾಗೆ ಅವನ್ನು ರೂಪಿಸಲಾಗಿದೆ.

ಭೂಮಿ ಸ್ವಾಧೀನತೆಯ ಅವಧಿಯ ಷರತ್ತು ರದ್ದಾಗಲಿ

ಬುಡಕಟ್ಟೇತರ ಅರಣ್ಯ ಭೂಮಿ ಸಾಗುವಳಿದಾರರಿಗೆ ಸಾಗುವಳಿ ಪತ್ರ ಸಿಗಬೇಕಾದಲ್ಲಿ 75 ವರ್ಷಗಳ ಕಾಲ ಆ ಭೂಮಿಯು ಅವರ ಸ್ವಾಧೀನದಲ್ಲಿದ್ದುದಕ್ಕೆ ಅಂದರೆ ಸಾಗುವಳಿ ಮಾಡಿರುವುದಕ್ಕೆ ದಾಖಲೆ ಕೊಡಬೇಕು ಎಂದು

ಪುಟ 12 ಕ್ಕೆ

ಸಂಪಾದಕೀಯ

ಭೂ ಸುಧಾರಣೆ ಜನಾಭಿವೃದ್ಧಿಯ ಮೊದಲ ಮೆಟ್ಟಿಲು



▌ನಿತ್ಯಾನಂದಸ್ವಾಮಿ

ಇಂದು ಭಾರತದ ಅಭಿವೃದ್ಧಿಗಾಗಿ ಹೊಸ ಮಾದರಿಯೊಂದನ್ನು ಜನತೆಯ ಮುಂದೆ ಇಡಲಾಗುತ್ತಿದೆ. ಅದನ್ನು 'ಗುಜರಾತ್ ಮಾದರಿ' ಎಂದೂ 'ಮೋದಿ ಮಾದರಿ' ಎಂದೂ ಬಿಂಬಿಸಲಾಗುತ್ತಿದೆ. 'ದೇಶಕ್ಕೆ ಬಂಡವಾಳ ಹರಿದು ಬರಬೇಕು. ಹೂಡಿಕೆ ಹೆಚ್ಚಾಗಬೇಕು. ಅದನ್ನು ತಡೆಯುವ ಕಾನೂನಾತ್ಮಕ ಅಡೆತಡೆಗಳನ್ನು ಕಿತ್ತು ಹಾಕಬೇಕು. ಹೂಡಿಕೆದಾರರಿಗೆ ಭೂಮಿ ಕೊಡಬೇಕು. ರಿಯಾಯ್ತಿಗಳನ್ನು ಕೊಡಬೇಕು. ಹೂಡಿಕೆದಾರರನ್ನು ಆಕರ್ಷಿಸಲು ಏನು ಬೇಕೋ ಅದೆಲ್ಲವನ್ನು ಮಾಡಬೇಕು' ಎಂಬುದೇ ಈ ಹೊಸ ಮಾದರಿಯ ಮೂಲ ಮಂತ್ರ!

ಕಳೆದ ಎರಡು ಮೂರು ದಶಕಗಳಿಂದ ದೇಶದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸುತ್ತಾ ಬಂದವರಿಗೆ ಈ ಹೊಸ ಮಾದರಿಯಲ್ಲಿ ಹೊಸದೇನೂ ಕಾಣಲಿಕ್ಕಿಲ್ಲ. ಇದು ಅಂದಿನ ಮಹಾ ಮೌನಿ ಮನಮೋಹನಸಿಂಗರ ಮಾದರಿಯ ಮುಂದುವರಿಕೆಯೇ ಆಗಿದೆ ಎಂದು ಗುರುತಿಸಲು ಅಷ್ಟೇನು ಕಷ್ಟವಾಗದು. ಹಳೆಯ ಮದ್ಯ, ಹೊಸ ಬಾಟಲಿಯಲ್ಲಿ! ಹೂಡಿಕೆದಾರರಿಗೆ ಉದಾರವಾಗಿರಬೇಕು ಎಂಬುದೇ ಅದರೊಳಗಿನ ಹೂರಣ!

ಒಂದು ದೇಶದ ಅಭಿವೃದ್ಧಿ ಹೂಡಿಕೆಯನ್ನು ಅವಲಂಭಿಸಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಹೂಡಿಕೆಯಿಂದಾಗಿ ಉದ್ಯೋಗದ ಅವಕಾಶಗಳು ಗಣನೀಯವಾಗಿ ಹೆಚ್ಚಾಗಬೇಕು, ಜನಸಾಮಾನ್ಯರ ಆದಾಯ ಹೆಚ್ಚಾಗಬೇಕು, ಅವರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಗಬೇಕು. ಆಗ ಮಾತ್ರ ಅದು ಜನಾಭಿವೃದ್ಧಿ. ಆದರೆ, ಒಬ್ಬ ಖಾಸಗಿ ಹೂಡಿಕೆದಾರ ಜನಾಭಿವೃದ್ಧಿಗಾಗಿ ಬಂಡವಾಳವನ್ನು ಹೂಡುವುದಿಲ್ಲ. ಆತ ತನ್ನ ಖಾಸಗಿ ಲಾಭಕ್ಕಾಗಿ ಮಾತ್ರ ಬಂಡವಾಳ ಹೂಡುತ್ತಾನೆ. ಜನರಿಗೆ ಹೆಚ್ಚೆಚ್ಚು ಉದ್ಯೋಗಗಳನ್ನು ಒದಗಿಸುವುದಾಗಲಿ, ಅವರ ಆದಾಯ ಹೆಚ್ಚಿಸುವುದಾಗಲಿ ಆತನ ಹೂಡಿಕೆಗೆ ಪ್ರೇರಣೆಯಾಗಲು ಸಾಧ್ಯವಿಲ್ಲ. ಖಾಸಗಿ ಹೂಡಿಕೆದಾರರ ಹೂಡಿಕೆಯಿಂದ ಹೂಡಿಕೆದಾರರ ಅಭಿವೃದ್ಧಿಯಾಗುತ್ತದೆ. ಆದರೆ ಅದು ಜನಾವೃದ್ಧಿ ಆಗಿರುವುದಿಲ್ಲ.

ಹಾಗಾದರೆ, ಜನಾಭಿವೃದ್ಧಿಯ ಮೂಲ ಸೋಪಾನ ಯಾವುದು? ಭೂಮಿಯೇ ಎಲ್ಲ ಅಭಿವೃದ್ಧಿಯ ಮೂಲ, ಭೂಮಿ ಮತ್ತು ಭೂಮಿಯಲ್ಲಿ ಲಭ್ಯವಿರುವ ಭೌತ ವಸ್ತುಗಳ ಮೇಲೆ ಮಾನವ ತನ್ನ ಶ್ರಮಶಕ್ತಿಯನ್ನು ಪ್ರಯೋಗಿಸಿದಾಗ ಸಂಪತ್ತಿನ ಸೃಷ್ಟಿಯಾಗುತ್ತದೆ. ಭೂಮಿ ಎಂಬ ಉತ್ಪಾದನಾ ಸಾಧನದ ಒಡೆತನ ಕೆಲವೇ ಕೆಲವು ಭೂಮಾಲಿಕರ ವಶದಲ್ಲಿದ್ದರೆ ಇಲ್ಲಿ ಸೃಷ್ಟಿಯಾಗುವ ಸಂಪತ್ತಿಗೆ ಅವರೇ ಕೆಲವರು ಒಡೆಯರಾಗುತ್ತಾರೆ. ಭೂಮಿಯ ಒಡೆತನ ಜನರ ಕೈಯಲ್ಲಿದ್ದರೆ ಅಲ್ಲಿ ಸೃಷ್ಟಿಯಾಗುವ ಸಂಪತ್ತಿಗೆ ಜನರೇ ಒಡೆಯರಾಗುತ್ತಾರೆ.

ಭೂಮಿಯ ಒಡೆತನ ಕೆಲವರ ಕೈಯಲ್ಲಿ ಕೇಂದ್ರೀಕೃತಗೊಂಡಿರುವ ಪದ್ಧತಿಗೆ ಭೂಮಾಲಕ ಪದ್ಧತಿ ಎನ್ನುತ್ತಾರೆ. ಭೂಮಾಲಕ ಪದ್ಧತಿ ಜನರ ಅಭಿವೃದ್ಧಿಯನ್ನು ತಡೆಯುವ ಪ್ರತಿಗಾಮಿ ಪದ್ಧತಿಯಾಗಿದೆ. ಭೂಮಾಲಿಕರ ಭೂ ಒಡೆತನಕ್ಕೆ ಒಂದು ಮಿತಿಯನ್ನು ಹೇರಿ, ಅವರ ಹೆಚ್ಚುವರಿ ಭೂಮಿಯನ್ನು ಭೂರಹಿತ ಗೇಣಿದಾರರಿಗೆ, ಕೂಲಿಕಾರರಿಗೆ ವಿತರಣೆ ಮಾಡುವ ಕ್ರಮವನ್ನು 'ಭೂಸುಧಾರಣೆ' ಎನ್ನುತ್ತಾರೆ. ಪ್ರಗತಿಪರ ಭೂಸುಧಾರಣೆಗಳ ಅನುಷ್ಠಾನವೇ ಒಂದು ದೇಶದ ಅಭಿವೃದ್ಧಿಗೆ ನಾಂದಿಯಾಗುತ್ತದೆ.

ಭೂಸುಧಾರಣೆಗಳ ಮೂಲಕ ಭೂಮಿಯ ಸಮರ್ಪಕ ಮರು ವಿತರಣೆ ಸಾಧ್ಯವಾದರೆ ಅದು ಗ್ರಾಮೀಣ ಬಡತನ, ನಿರುದ್ಯೋಗವನ್ನು ತೊಲಗಿಸುತ್ತದೆ. ಕೃಷಿ ಉತ್ಪಾದನೆ ಗಣನೀಯವಾಗಿ ಹೆಚ್ಚಾಗುತ್ತದೆ. ಜನರ ಕೊಂಡುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸುತ್ತದೆ. ಕೈಗಾರಿಕಾ ಸರಕುಗಳ ಬೇಡಿಕೆಯನ್ನು ವೃದ್ಧಿಸುತ್ತದೆ. ತೀವ್ರ ಕೈಗಾರೀಕರಣಕ್ಕೆ ದಾರಿಯಾಗುತ್ತದೆ. ಒಂದು ದೇಶದ ಅಥವ ಒಂದು ರಾಜ್ಯದ ಜನತೆಯ ನಿಜವಾದ ಅಭಿವೃದ್ಧಿ ಸಾಧಿಸುವುದು ಸರ್ಕಾರದ ಆದ್ಯತೆಯಾಗಿದ್ದರೆ ಅದು ಮಾಡಬೇಕಾದ ಮೊಟ್ಟ ಮೊದಲ ಕೆಲಸವೇ ಭೂಸುಧಾರಣೆ, ಭೂಸುಧಾರಣೆ ಅಲ್ಲದೆ ಮತ್ತೇನೂ ಅಲ್ಲ.

ಆದರೆ ಕೇಂದ್ರದ ಮೋದಿ ಸರ್ಕಾರಕ್ಕಾಗಲಿ, ರಾಜ್ಯದ ಸಿದ್ದರಾಮಯ್ಯ ಸರ್ಕಾರಕ್ಕಾಗಲಿ ಜನಾಭಿವೃದ್ಧಿ ಪ್ರಥಮ ಆದ್ಯತೆಯಾಗಿಲ್ಲ. ಕೇಂದ್ರದ ಬಿಜೆಪಿ ಸರ್ಕಾರವಾಗಲಿ, ರಾಜ್ಯದ ಕಾಂಗ್ರೆಸ್ ಸರ್ಕಾರವಾಗಲಿ ಭೂರಹಿತ ಬಡವರಿಗೆ ಭೂಮಿಯನ್ನು ವಿತರಿಸುವ ಬದಲು ದೊಡ್ಡ ದೊಡ್ಡ ಕಂಪೆನಿಗಳಿಗೆ, ವಿದೇಶಿ ಕಾರ್ಪೋರೇಟ್ ಕಂಪನಿಗಳಿಗೆ ಅಮೂಲ್ಯವಾದ ಭೂಮಿಯನ್ನು ಹಸ್ತಾಂತರಿಸಲು ಮುಂದಾಗಿವೆ. ರೈತರ ಕೃಷಿ ಭೂಮಿಯನ್ನು ಸಹ ಬಲವಂತವಾಗಿ ಸ್ವಾಧೀನಪಡಿಸಿ ಕಂಪೆನಿಗಳಿಗೆ ನೀಡಲು ಸಾಧ್ಯವಾಗುವಂತೆ ಕಾನೂನುಗಳನ್ನು ತಿದ್ದುಪಡಿ ಮಾಡುತ್ತಿವೆ.


2013ರ ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ತಂದು ಕೇವಲ 50% ರಷ್ಟು ರೈತರ ಒಪ್ಪಿಗೆಯೊಂದಿಗೆ ಒಂದು ಪ್ರದೇಶದ ರೈತರ ಭೂಮಿಯನ್ನು ಸ್ವಾಧೀನಪಡಿಸಲು ಮೋದಿ ಸರ್ಕಾರ ಹೊರಟಿದ್ದರೆ ಇತ್ತ ಸಿದ್ದರಾಮಯ್ಯ ಸರ್ಕಾರ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು ಭೂಮಿಯನ್ನು ಕೊಳ್ಳಲು ಇನ್ನು ಮುಂದೆ ಆದಾಯದ ಮಿತಿಯನ್ನೇ ರದ್ದುಪಡಿಸಲು ಮುಂದಾಗಿದೆ. ಇದರಿಂದಾಗಿ ಕಾರ್ಪೋರೇಟ್ ಕಂಪನಿಗಳು ಭೂ ಒಡೆತನವನ್ನು ಹೊಂದಲು ಅರ್ಹವಾಗಲಿವೆ. ಈ ಬೆಳವಣಿಗೆಗಳನ್ನು ಗಮನಿಸಿದರೆ, ಭಾರತದಲ್ಲಿ 'ಕಾರ್ಪೋರೇಟ್ ಕೃಷಿ' ದೂರವಿಲ್ಲ ಎಂದು ಸ್ಪಷ್ಟವಾಗುತ್ತಿದೆ.

ಇನ್ನು ಕರ್ನಾಟಕ ಸರ್ಕಾರದ ಲಕ್ಷಾಂತರ ಎಕರೆ ಭೂಮಿಯನ್ನು ಭೂಗಳ್ಳರು ಕಬಳಿಸಿದ್ದಾರೆ. ಅವರಿಂದ ಕಬಳಿಸಲ್ಪಟ್ಟ ಸರ್ಕಾರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕದ ಇದುವರೆಗಿನ ಸರ್ಕಾರಗಳು ಕ್ರಮ ಕೈಗೊಂಡಿಲ್ಲ. ಆದರೆ ಭೂರಹಿತ ಬಡವರು ಹೊಟ್ಟೆಪಾಡಿಗಾಗಿ ಅನೇಕ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಭೂಮಿಯಿಂದ ಅವರನ್ನು ಹೊರದಬ್ಬುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಭೂಗಳ್ಳರು ಯಾರು, ಬಗರ್ ಹುಕುಂ ಸಾಗುವಳಿದಾರರು ಯಾರು ಎಂಬ ವ್ಯತ್ಯಾಸವನ್ನು ಗುರುತಿಸಲು ಈ ಸರ್ಕಾರ ಗಮನ ನೀಡದಿರುವುದು ಖಂಡನಾರ್ಹ. ಬಡವರನ್ನು ಒಕ್ಕಲೆಬ್ಬಿಸುವ ಸರ್ಕಾರದ ನೀತಿಯ ವಿರುದ್ಧ ಪ್ರಬಲವಾದ ಹೋರಾಟವೊಂದು ನಡೆಯಬೇಕಾಗಿದೆ. ನ್ಯಾಯಾಲಯಗಳಿಗೆ ನೈಜ ಪರಿಸ್ಥಿತಿಯನ್ನು ಮನವರಿಕೆ ಮಾಡುವುದೂ ಆಗಬೇಕಾಗಿದೆ.

ಭೂಗಳ್ಳರ ಇದುರಿನಲ್ಲಿ ಭೂಮಿಯಿಲ್ಲದವರ ಕಾಯುವವರಾರು?

ಕಳೆದ ಒಂದು ತಿಂಗಳಿನಿಂದ ಬೆಂಗಳೂರಿನ ಪುರಭವನದ ಬಳಿ 'ಎ.ಟಿ.ರಾಮಸ್ವಾಮಿ ನೇತೃತ್ವದ ಸದನ ಸಮಿತಿಯ ವರದಿ' ಮತ್ತು 'ಡಾ.ಬಾಲಸುಬ್ರಹ್ಮಣ್ಯ ವರದಿ ಜಾರಿಯಾಗಲಿ' ಎಂದು ಭೂಗಳ್ಳರಿಂದ ಭೂಮಿ ಮರು ವಶ ಪಡೆಯಲು ನಿರಂತರ ಧರಣಿ ನಡೆದಿದೆ. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ, ಎ.ಟಿ.ರಾಮಸ್ವಾಮಿ ಮುಂತಾದವರು ನೇತೃತ್ವ ವಹಿಸಿಕೊಂಡಿದ್ದಾರೆ. ನ್ಯಾ.ಸಂತೋಷ ಹೆಗಡೆ, ಎಸ್.ಆರ್.ಹಿರೇಮಠ್‌ರಂತಹವರು ಭಾಗವಹಿಸಿದ್ದಾರೆ. ಇದನ್ನು ಹಲವಾರು ಸಂಘ-ಸಂಸ್ಥೆಗಳು ಬೆಂಬಲಿಸಿವೆ.

ಇದು ಸಹ ಅತ್ಯಂತ ಪ್ರಮುಖ ವಿಷಯಗಳ ಸುತ್ತ ನಡೆಯುತ್ತಿರುವ ಹೋರಾಟ ಎಂಬುದರಲ್ಲಿ ಅನುಮಾನವಿಲ್ಲ. ಮೇಲಿನ ಎರಡೂ ಸಮಿತಿಗಳ ವರದಿಗಳು ರಾಜ್ಯದಲ್ಲಿ ನಡೆದಿರುವ ಭೂ ಕಬಳಿಕೆಯ ಕುರಿತು ವಿಸ್ತೃತವಾದ ಬೆಳಕು ಚೆಲ್ಲಿವೆ, ಹಲವಾರು ಪುರಾವೆಗಳನ್ನು ನೀಡಿವೆ, ಇವುಗಳ ಆಧಾರದಲ್ಲಿ ಕ್ರಮ ವಹಿಸಬೇಕು ಎಂಬುದು ಅವರ ಒತ್ತಾಯ.



ಹಿಂದೆ ಜೆಡಿ-ಎಸ್ ಮತ್ತು ಬಿಜೆಪಿ ಸರಕಾರ ಅಧಿಕಾರದಲ್ಲಿರುವಾಗ ಸದನದೊಳಗೆ ಬೆಂಗಳೂರು ನಗರ ವ್ಯಾಪ್ತಿಯೊಳಗೆ ನಡೆದಿರುವ ಸರಕಾರಿ ಭೂಮಿಯ ಕಬಳಿಕೆ ಕುರಿತು ನಡೆದ ಗಂಭೀರ ಚರ್ಚೆಯಿಂದಾಗಿ ಸಿಪಿಐ (ಎಂ)ನ ಶಾಸಕರಾಗಿದ್ದ ಜಿ.ವಿ.ಶ್ರೀರಾಮರೆಡ್ಡಿ ಯವರೂ ಸೇರಿ 14 ವಿಧಾನ ಸಭಾ ಸದಸ್ಯರು, 6 ವಿಧಾನ ಪರಿಷತ್ ಸದಸ್ಯರುಳ್ಳ ಜಂಟಿ ಸದನ ಸಮಿತಿಯನ್ನು ಜೂನ್ 2006ರಲ್ಲಿ ರಚಿಸಲಾಗಿತ್ತು. ಈ ಸಮಿತಿಯು 2007 ರಲ್ಲಿ ವರದಿಯನ್ನು ಸಲ್ಲಿಸಿತು. ಅದರಂತೆ ನಗರ ಜಿಲ್ಲೆಯಲ್ಲಿಯೇ ಆಸ್ಪತ್ರೆ, ಅರಣ್ಯ, ಕಂದಾಯ ಇಲಾಖೆ, ಬಿ.ಡಿ.ಎ., ವಕ್ಫ್ ಬೋರ್ಡ್, ಕೆರೆ, ಸುಡುಗಾಡು, ಪಾರ್ಕ್‌ನಂತಹ ಉದ್ದೇಶಕ್ಕೆಂದು ಇದ್ದ ಸುಮಾರು 41,000 ಎಕರೆಯನ್ನು ಭೂಮಿಯನ್ನು ಅತ್ಯಂತ ಪ್ರಭಾವಿಗಳು ಕಬಳಿಸಿರುವುದನ್ನು ಸಮಿತಿ ಪತ್ತೆ ಹಚ್ಚಿತು. ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಭೂ ಅಕ್ರಮಗಳನ್ನು ನಡೆಸುವಲ್ಲಿ ಉನ್ನತ ಅಧಿಕಾರಿಗಳು ಶಾಮೀಲಾಗಿರುವುದು, ಉದ್ಯಮಿಗಳು, ಭೂ ದಂಧೆಗಾರರು, ಅಧಿಕಾರಿಗಳು, ರಾಜಕೀಯ ಮುಖಂಡರು, ಆಶ್ರಮಗಳ ಗುರೂಜಿಗಳು ಹೀಗೆ ಸುಮಾರು 45,863 ಭೂಗಳ್ಳರು ತೊಡಗಿದ್ದು, 3 ಲಕ್ಷದಷ್ಟು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿದ್ದು ಹೊರಬಂತು. ಈ ಎಲ್ಲಾ ಹಿನ್ನೆಲೆಯಲ್ಲಿ ಭೂಕಬಳಿಕೆದಾರರ ನಿರ್ಬಂಧ ಮಸೂದೆಯನ್ನು ಕುಮಾರಸ್ವಾಮಿ ಸರಕಾರ ಅದೇ 2007 ರಲ್ಲಿ ತಂದು ಉಭಯ ಸದನಗಳಲ್ಲಿ ಅಂಗೀಕಾರವಾಗಿ 2011 ರಲ್ಲಿ ರಾಷ್ಟ್ರಪತಿಗಳ ಅಂಗೀಕಾರಕ್ಕೆ ಕಳುಹಿಸಲಾಗಿದೆ. (ಅವರು ಕಣ್ತೆರೆದು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ.) ನಂತರ ಬಿಜೆಪಿ ಸರಕಾರ ಮೂರು ಮುಖ್ಯಮಂತ್ರಿಗಳನ್ನು ಕಂಡು, ಹಾಲಿಯಾಗಿ ಕಾಂಗ್ರೆಸ್ ಸಿದ್ದರಾಮಯ್ಯನವರ 'ಅಹಿಂದ' ಸರಕಾರ ಬಂದರೂ ಯಾರ ಮೇಲೆಯೂ ಕ್ರಮವಿಲ್ಲದಿರುವುದು ಭೂ ಮಾಫಿಯಾದ ಲಾಬಿಯ ಬಲವನ್ನು ತೋರಿಸುತ್ತದೆ.

ಹಾಗೆಯೇ ಸೆಪ್ಟೆಂಬರ್ 2009ರಲ್ಲಿ ಬಿ.ಎಸ್.ವೈ. ಮುಖ್ಯಮಂತ್ರಿಯಾಗಿರುವಾಗ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿವಿಧ ಸ್ವರೂಪದ ಭೂಮಿಯನ್ನು ಹಲವಾರು ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದು ಅದರ ಅಧ್ಯಯನಕ್ಕೆ ರಚಿಸಲಾದ ಡಾ.ಬಾಲಸುಬ್ರಹ್ಮಣ್ಯರವರ ನೇತೃತ್ವದ ಸಮಿತಿ 20 ತಿಂಗಳು ವ್ಯಾಪಕವಾಗಿ ಅಧ್ಯಯನ ಮಾಡಿ ರಾಜ್ಯದಲ್ಲಿ ಸುಮಾರು 13 ಲಕ್ಷ ಎಕರೆಯಷ್ಟು ಭೂಮಿಯನ್ನು ಅತಿಕ್ರಮಿಸಲಾಗಿರುವುದಾಗಿ ವರದಿ ನೀಡಿತು. ಇಲ್ಲಿಯೂ ಬಹುದೊಡ್ಡ ಭೂ ಮಾಲೀಕರು, ಮಾಫಿಯಾಗಳೂ ಇವೆಯೆಂದು ತಿಳಿಸಿತು.

ಈ ವರದಿಗಳಲ್ಲಿನ ಶಿಫಾರಸ್ಸುಗಳನ್ನು ಜಾರಿ ಮಾಡಬೇಕು ಎಂಬುದು ನಿಜವಾದರೂ ಎರಡೂ ವರದಿಗಳಲ್ಲಿ ಭಿನ್ನತೆಗಳು ಮತ್ತು ಭೂ ಕಬಳಿಕೆದಾರರು ಎನ್ನಲಾಗುತ್ತಿರುವವರಲ್ಲಿ ವ್ಯತ್ಯಾಸಗಳೂ ಇರುವುದನ್ನು ಗುರುತಿಸದೇ ನಿರ್ಲಕ್ಷಿಸುವುದು ಅತ್ಯಂತ ಅಪಾಯಕಾರಿಯಾಗಿದೆ. ಮೊದಲನೆಯದಾಗಿ ಎ.ಟಿ.ರಾಮಸ್ವಾಮಿ ವರದಿಯು ಮುಖ್ಯವಾಗಿ ಬೆಂಗಳೂರು ನಗರ ವ್ಯಾಪ್ತಿಗೇ ಸಂಬಂಧಿಸಿದೆ. ಇಲ್ಲಿನ ಕಬಳಿಕೆ ಪಕ್ಕಾ ಭೂ ದಂಧೆಗಾರರು ಅಥವಾ ಬಲಾಢ್ಯ ಅತಿಕ್ರಮಣದಾರರ ಕೃತ್ಯವಾಗಿದೆ. ಉದಾರೀಕರಣದ ಈ ದಿನಗಳಲ್ಲಿ ಇಲ್ಲಿನ ಭೂಮಿಗೆ ಬಂದ ವಿಪರೀತ ಬೇಡಿಕೆ, ಭೂ ಮಾಫಿಯಾಗಳ ಭೂ ನುಂಗುವ ದಾಹವಿಲ್ಲಿದೆ. ಆದರೆ ಡಾ.ಬಾಲಸುಬ್ರಹ್ಮಣ್ಯಂ ಸಮಿತಿ ಗುರುತಿಸಿರುವ ಭೂಮಿ ಬಹುತೇಕ ಕೃಷಿ ಚಟುವಟಿಕೆಗೆ ಒಳಗಾದದ್ದು. ಇಲ್ಲಿ ಭೂಮಿ ನುಂಗುವುದರಲ್ಲಿ ದೊಡ್ಡ ಜಮೀನುದಾರರ ಪಡೆಯೇ ಇರುವಾಗಲೇ ಜೀವನೋಪಾಯಕ್ಕಾಗಿ ಕೃಷಿ ಮಾಡಿಕೊಂಡ ಲಕ್ಷಾಂತರ ಸಣ್ಣ ಕೃಷಿಕರು ಇದ್ದಾರೆ. ಅವರಿಂದಲೂ ಭೂಮಿಯನ್ನು ಕಸಿದುಕೊಂಡರೆ ಅವರೆಲ್ಲಾ ಬೀದಿ ಪಾಲಾಗುವುದು ನಿಶ್ಚಿತ.

ರಾಮಸ್ವಾಮಿ ಸಮಿತಿಯ ಶಿಫಾರಸುಗಳನ್ನು ಬಿಗಿಯಾಗಿ ಜಾರಿಗೆ ತರುವುದು ಅಗತ್ಯ. ಆದರೆ ಬಾಲಸುಬ್ರಹ್ಮಣ್ಯರ ವರದಿ ಸಂಬಂಧ ದೊಡ್ಡ ಭೂ ಮಾಲೀಕರಿಂದ ಅತಿಕ್ರಮಿತ ಭೂಮಿಯನ್ನು ವಶಪಡಿಸಿಕೊಳ್ಳಬೇಕೇ ಹೊರತು ಸಣ್ಣ ಕೃಷಿಕರಿಂದ ಅಲ್ಲ.

ಈ ವಿಷಯವನ್ನು ದೊರೆಸ್ವಾಮಿಯವರ ನೇತೃತ್ವದಲ್ಲಿ ನಡೆಯುತ್ತಿರುವ ಚಳುವಳಿ ಅಷ್ಟು ಗಂಭೀರವಾಗಿ ಪರಿಗಣಿಸಿಲ್ಲದಿರುವುದು ಕಾಣುತ್ತದೆ. ಅವರು ಹಾಗೇನಿಲ್ಲ ನಮಗೂ ಸಣ್ಣ ರೈತರ ಹಿತ ರಕ್ಷಿಸುವ ಕಾಳಜಿ ಇದೆಯೆಂದು ಹೇಳಿದರೂ ಈ ಹೋರಾಟದಲ್ಲಿ ಅದು ಒಂದು ಪ್ರಮುಖ ಬೇಡಿಕೆಯೇ ಆಗಿಲ್ಲ. ನಿರ್ದಿಷ್ಟವಾಗಿ ಬೇಡಿಕೆಗಳನ್ನು ಎತ್ತದೇ ಕೇವಲ ವರದಿ ಜಾರಿ ಮಾಡಿ ಎಂದು ಆಗ್ರಹಿಸುವುದು ಹಲವಾರು ಅನರ್ಥಗಳನ್ನು ಹೊರಡಿಸುತ್ತಿದ್ದು, ಅನಾಹುತಗಳನ್ನು ತರದೇ ಇರದು.

ಇದರೊಂದಿಗೆ ಹೀಗೆ ವಶಪಡಿಸಿಕೊಂಡ ಭೂಮಿಯನ್ನು ಯಾವ ಉದ್ದೇಶಕ್ಕೆ ಬಳಸಬೇಕು? ಈಗಾಗಲೇ ಸರಕಾರ ಭೂ ಬ್ಯಾಂಕನ್ನು ರಚಿಸಿ ಇಂತಹ ಭೂಮಿಯನ್ನು ಅಲ್ಲಿಗೆ ಡಿಪಾಸಿಟ್ ಮಾಡಿ ವಿದೇಶ ಮತ್ತು ಸ್ವದೇಶಿ ಬಂಡವಾಳಗಾರರಿಗೆ ಧಾರೆ ಎರೆಯಲು ಉತ್ಸುಕವಾಗಿರುವಾಗ ವಶಪಡಿಸಿಕೊಂಡ ಭೂಮಿ ಅಲ್ಲಿಗೇ ತಳ್ಳಿದರೆ ನಿಜಕ್ಕೂ ಯಾರ ಹಿತಕಾಯ್ದಂತೆ ಆದೀತು? ಈ ಭೂಮಿ ಬಡವರಿಗೆ, ಅಗತ್ಯವಿರುವ ಸಾಮಾನ್ಯರಿಗೆ ಸಿಗಬೇಕು ಎಂಬುದು ಚಳುವಳಿಗಾರರ ಬದ್ಧತೆಯಾಗಬೇಕು.

ಈ ನಡುವೆ ಈ ವಿಷಯ ನ್ಯಾಯಾಲಯದ ಮೆಟ್ಟಿಲೇರಿದ್ದು ಅತಿಕ್ರಮಿತ ಭೂಮಿಯನ್ನು ಮರು ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ ಎಂದು ರಾಜ್ಯ ಸರಕಾರ ಅಫಿಡೆವಿಟ್‌ನ್ನು ನೀಡಿರುವುದು ಅತ್ಯಂತ ಆತಂಕ ಹುಟ್ಟಿಸಿದೆ. ಈಗ ಎತ್ತಂಗಡಿ ಮಾಡಲಾಗುತ್ತಿರುವವರು ಬಹುತೇಕ ಬಡ ರೈತರು, ಸಣ್ಣ ಸಾಗುವಳಿದಾರರು. ದೊಡ್ಡವರು ಆರಾಮವಾಗಿಯೇ ಇದ್ದಾರೆ. ಮೇಲಾಗಿ ಈಗ

ಪುಟ 15 ಕ್ಕೆ

ಹಾಸನ: ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ

ಹಲವು ವರ್ಷಗಳಿಂದ ಜೀವನೋಪಾಯಕ್ಕಾಗಿ ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡಿ ಕೃಷಿ ಚಟುವಟಿಕೆ ನಡೆಸುತ್ತಿರುವ ಬಡ ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸಲು ತಹಸಿಲ್ದಾರ್ ನೇತೃತ್ವದಲ್ಲಿ ರೈತರಿಗೆ ನೋಟೀಸ್ ಜಾರಿಮಾಡಿರುವ ಕ್ರಮ ಅತ್ಯಂತ ರೈತ ವಿರೊಧಿಯಾಗಿದ್ದು, ಈ ರೈತರು ಭೂಮಿಯನ್ನು ಕಳೆದುಕೊಂಡರೆ ರಾಜ್ಯದಲ್ಲಿ ಕೃಷಿ ಬಿಕ್ಕಟ್ಟು ಉಲ್ಬಣಗೊಳ್ಳುತ್ತದೆ. ಆದ್ದರಿಂದ ಸಾಗುವಳಿದಾರರಿಗೆ ಭೂಮಿ ನೀಡುವಲ್ಲಿ ಅಡ್ಡಿಯಾಗಿರುವ ಕಾನೂನುಗಳಿಗೆ ಜನಪರವಾದ ಸೂಕ್ತ ತಿದ್ದುಪಡಿಗಳನ್ನು ಮಾಡಿ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಮಾಡಬೇಕು ಮತ್ತು ಈಗ ನೀಡಿರುವ ನೋಟೀಸ್‌ಗಳನ್ನು ವಾಪಸ್ ಪಡೆದು, ಭೂಮಿಯಿಂದ ರೈತರನ್ನು ತೆರವುಗೊಳಿಸುವ ಪ್ರಕ್ರಿಯೆಯನ್ನು ಕೈಬಿಡಬೇಕೆಂದು ಒತ್ತಾಯಿಸಿ ಹಾಸನ ಜಿಲ್ಲಾ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಬಗರ್ ಹುಕುಂ ಸಾಗುವಳಿದಾರರ ಹೋರಾಟ ಸಮಿತಿ ನೇತೃತ್ವದಲ್ಲಿ ಅಕ್ಟೋಬರ್ 7, 2014 ರಂದು ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಅಂದು ಹೇಮಾವತಿ ಪ್ರತಿಮೆಯಿಂದ ಹೊರಟು ನಗರದ ಮುಖ್ಯರಸ್ತೆಗಳನ್ನು ಹಾದು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನೆ ನಡೆಸಿ ಹಾಸನ ಜಿಲ್ಲಾಧಿಕಾರಿಗಳ ಮುಖೇನ ರಾಜ್ಯದ ಮುಖ್ಯ ಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಹಾಸನ ತಹಸೀಲ್ದಾರ ಕಚೇರಿ ಮುಂದೆ ಸಹ ಪ್ರತಿಭಟನೆ ನಡೆಸಿ ಅವರಿಗೆ ಸಹ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಪ್ರಾಂತ ರೈತಸಂಘದ ಜಿಲ್ಲಾ ಸಂಚಾಲಕ ಎಚ್. ಆರ್. ನವೀನ್‌ಕುಮಾರ್, ಹಾಸನ ತಾಲ್ಲೂಕು ಕಾರ್ಯದರ್ಶಿ ಪ್ರಕಾಶ್, ಅಧ್ಯಕ್ಷರಾದ ನಂಜೇಗೌಡ, ಸಕಲೇಶಪುರ ತಾಲ್ಲೂಕು ಸಮಿತಿ ಕಾರ್ಯದರ್ಶಿ ವಿರೂಪಾಕ್ಷ, ಅಧ್ಯಕ್ಷ ಶಂಕರ್ ಮುಂತಾದವರು ವಹಿಸಿದ್ದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಅವರು ಹೋರಾಟವನ್ನು ಬೆಂಬಲಿಸಿ ಮಾತನಾಡಿದರು.

ವಾಹನ ಜಾಥಾಗಳು

ಬಗರ್ ಹುಕುಂ ಸಾಗುವಳಿ ಭೂಮಿ ಪ್ರಶ್ನೆ ಬಡರೈತರ ಜೀವನದ ಗಂಭೀರ ಪ್ರಶ್ನೆಯಾಗಿದೆ. ಈ ಹಿನ್ನೆಲೆಯಲ್ಲಿ ಈ ಕುರಿತು ರೈತರಲ್ಲಿ ಜಾಗೃತಿ ಮೂಡಿಸಲು ಹಾಸನದ ನಾಲ್ಕು ತಾಲ್ಲೂಕಿನಲ್ಲಿ ವಾಹನ ಜಾಥಾಗಳನ್ನು ನಡೆಸಲಾಗುತ್ತಿದೆ. ಸಕಲೇಶಪುರ ತಲ್ಲೂಕಿನಲ್ಲಿ ಒಟ್ಟು 4 ಜಾಥಾಗಳು ಸಂಚರಿಸಿವೆ. ಹಾಸನ, ಬೇಲೂರು, ಅರಸಿಕೇರೆ ತಾಲ್ಲೂಕುಗಳಲ್ಲಿ ತಲಾ ಒಂದೊಂದು ಜಾಥಾಗಳು ಸಂಚರಿಸಿವೆ. ●



ಕಲಘಟಗಿ: ಬಗರ್‌ಹುಕುಂ ಸಾಗುವಳಿದಾರರ ಪಾದಯಾತ್ರೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ



ಕಲಘಟಗಿ ತಾಲೂಕಿನ ವಿವಿಧ ಗ್ರಾಮಗಳ ಬಗರ್‌ಹುಕುಂ ಸಾಗುವಳಿದಾರರು ಕರ್ನಾಟಕ ಪ್ರಾಂತ ರೈತ ಸಂಘ ಧಾರವಾಡ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಸೆಪ್ಟಂಬರ್ 4, 2014 ರಂದು ತಾವು ಅನೇಕ ವರ್ಷಗಳಿಂದ ಉಳುಮೆ ಮಾಡುತ್ತಿರುವ ಭೂಮಿಗೆ ಹಕ್ಕು ಪತ್ರ ನೀಡಬೇಕೆಂದು, ಉಳುಮೆ ಮಾಡುವ ಭೂಮಿಗೆ ಹಕ್ಕು ಪತ್ರ ನೀಡುವಂತೆ ಹಾಗೂ ಒಕ್ಕಲೆಬ್ಬಿಸದಂತೆ ಒತ್ತಾಯಿಸಿ ಧಾರವಾಡ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿದರು. ರೈತರ ಪಾದಯಾತ್ರೆ ಗೆ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯಾದ್ಯಕ್ಷರಾದ ನಿತ್ಯಾನಂದಸ್ವಾಮಿಯವರು ಚಾಲನೆ ನೀಡಿ "ರಾಜ್ಯದಲ್ಲಿ ಲಕ್ಷಾಂತರ ಬಡ ಮತ್ತು ಭೂಹೀನ ರೈತರು ಸರ್ಕಾರಿ ಪಡಾ-ಹುಲ್ಲುಗಾವಲು ಮತ್ತು ಅರಣ್ಯಭೂಮಿಯಲ್ಲಿ ಬಹುತೇಕ ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಇವರಿಗೆ ಇಲ್ಲಿಯವರೆಗೆ ಹಕ್ಕುಪತ್ರ ಸಿಕ್ಕಿರುವುದಿಲ್ಲ, ಇಲ್ಲಿಯತನಕ ಆಳಿರುವ ಎಲ್ಲಾ ಸರ್ಕಾರಗಳು ರೈತರ ಕೃಷಿಯೋಗ್ಯ ಭೂಮಿಯನ್ನು ಕಸಿದುಕೊಂಡು ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಾಟ ಮಾಡಲಿಕ್ಕೆ ಮುಂದಾಗಿವೆ. ಇದು ರೈತರ ರಕ್ಷಣೆಯ ಕಾಳಜಿ ಅವುಗಳಿಗೆ ಎಳ್ಳಷ್ಟು ಇಲ್ಲದೆ ಇರುವುದನ್ನು ತೋರಿಸುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಇವುಗಳ ನೇತೃತ್ವದಲ್ಲಿ ಈ ಬಡ ಬಗರ್‌ಹುಕುಂ ಸಾಗುವಳಿದಾರರ ರಕ್ಷಣೆಗಾಗಿ ಅಕ್ಟೋಬರ್ 13 ರಿಂದ ಬೆಂಗಳೂರಿನ ವಿಧಾನ ಸೌಧದ ಎದುರು ಅನಿರ್ದಿಷ್ಟ ಬೃಹತ್ ಧರಣಿ ನಡೆಸಲಾಗುವುದು. ರೈತರು ಇದರ ಯಶಸ್ವಿಗೆ ಸಿದ್ಧರಾಗಬೇಕು.' ಎಂದು ಹೇಳಿದರು.

ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕೆಪಿಆರ್‌ಎಸ್‌ನ ಜಿಲ್ಲಾಧ್ಯಕ್ಷರಾದ ಬಿ.ಎಸ್.ಸೊಪ್ಪಿನ ರಾಜ್ಯದಲ್ಲಿ ಭೂ-ಸುಧಾರಣೆ ಕಾನೂನು ಸಮರ್ಪಕವಾಗಿ ಜಾರಿಗೆ ಬರದೆ ಇದ್ದುದ್ದರಿಂದ ಭೂಹೀನರು ಸರ್ಕಾರಿ ಜಮೀನಿನಲ್ಲಿ ಕೃಷಿ ಮಾಡುತ್ತಿರುವುದು ಅನಿವಾರ್ಯವೆಂದರು. ಸಭೆಯ ಅಧ್ಯಕ್ಷತೆಯನ್ನು ನೀಲಕಂಠಪ್ಪ ಸಿಂಪಿಗೇರ ವಹಿಸಿದ್ದರು. ನಂತರ ಕಲಘಟಗಿಯ ಎಪಿಎಂಸಿ ಅವರಣದಿಂದ ಅನೇಕ ಘೋಷಣೆಗಳೊಂದಿಗೆ ಕಾಲ್ನಡಿಗೆಯ ಪಾದಯಾತ್ರೆಯನ್ನು ಪ್ರಾರಂಭಿಸಿದರು.

ಜಡಿಮಳೆಗೂ ಜಗ್ಗದ ಬಡ ರೈತರು

ವಯಸ್ಸಾದವರು ಮಹಿಳೆಯರು ಸೇರಿದಂತೆ ನೂರಾರು ಬಡ ರೈತರು ಜಡಿ ಮಳೆಗೆ ಜಗ್ಗದೆ ಕಾಲ್ನಡಿಗೆಯಲ್ಲಿ 34 ಕಿ.ಮೀ. ಹಾದಿಯನ್ನು ಕ್ರಮಿಸಿದರು. ಮಧ್ಯ ದುಮ್ಮವಾಡ ಗ್ರಾಮದಲ್ಲಿ ಸಭೆ ನಡೆಸಿ ವಸತಿ ಮಾಡಲಾಯಿತು. ಹಾದಿಯಲ್ಲಿರುವ ಹಳ್ಳಿಗಳ ರೈತರು ಇದರಿಂದ ಸ್ಫೂರ್ತಿಗೊಂಡ ಸರಕಾರದ ನೀತಿಯ ವಿರುದ್ದ ತಮ್ಮ ಆಕ್ರೋಶ ವ್ಯಕ್ತಪಡಿಸುವದರೊಂದಿಗೆ ಪಾದಯಾತ್ರೆಗೆ ತಮ್ಮ ಬೆಂಬಲ ಸೂಚಿಸುತ್ತಿದ್ದುದು ಕಂಡು ಬಂತು. ಮರುದಿನ ಸೆಪ್ಟೆಂಬರ್ 5 ರಂದು ಜಿಲ್ಲಾಧಿಕಾರಿ ಕಛೇರಿಗೆ ಆಗಮಿಸಿದ ಪಾದಯಾತ್ರೆ ನಂತರ ಧರಣಿ ನಡೆಸಿ ಜಿಲ್ಲಾಧಿಕಾರಿಗಳಿಗೆ ಹಾಗೂ ಸರ್ಕಾರ-ಕ್ಕೆ ಮನವಿ ಸಲ್ಲಿಸಿ ರೈತರನ್ನು ಒಕ್ಕಲೆಬ್ಬಿಸದಂತೆ ಎಚ್ಚರಿಸಲಾಯಿತು.

ವಿಮಾ ನೌಕರರ ಸಂಘಟನೆಯ ಬಿ.ಎನ್. ಪೂಜಾರಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಮಹೇಶ ಪತ್ತಾರ, ಸಿಐಟಿಯು ಜಿಲ್ಲಾಧ್ಯಕ್ಷರಾದ ಬಿ.ಐ.ಈಳಿಗೇರ, ಸಮುದಾಯದ ಗಂಗಾ ಧರ ಗಢಾದ, ಡಿವೈಎಫ್‌ಐ ಮುಖಂಡ ಮಾರುತಿ ಅಂಬಿಗೇರ, ಎಸ್‌ಎಫ್‌ಐ ಮುಖಂಡ ಈರಪ್ಪ ನಾಯ್ಕ

ಪುಟ 15 ಕ್ಕೆ

'ಅರಣ್ಯ ಭೂಮಿ ಸಾಗುವಳಿದಾರರಿಗೆ ಭಾರಿ ಅನ್ಯಾಯ'

– ಶಾಂತಾರಾಮ ನಾಯಕ್

ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಸರ್ಕಾರಗಳು ಬದಲಾಗಿವೆಯಾದರೂ ಬಡ ಅತಿಕ್ರಮಣದಾರರಿಗೆ ನ್ಯಾಯ ಸಿಗುತ್ತಿಲ್ಲ. 40–50 ವರ್ಷಗಳಿಂದ ಮತ್ತು ಅದಕ್ಕೂ ಹಿಂದಿನಿಂದಲೂ ಜೀವನೋಪಾಯಕ್ಕಾಗಿ ಸಾಗುವಳಿ ಯೋಗ್ಯ ಅರಣ್ಯ ಭೂಮಿ ಅತಿಕ್ರಮಣ ಮಾಡಿ, ಉಪಜೀವನಕ್ಕೆ ಮನೆ ಕಟ್ಟಿ ಕೊಂಡರೂ ಹಕ್ಕು ಪತ್ರ ಇನ್ನೂ ಸಿಕ್ಕಿಲ್ಲ. ಹತ್ತಾರು ಸಲ ಅರ್ಜಿಗಳನ್ನು ಸ್ವೀಕರಿಸಿ ಸಾವಿರಾರು ರೂಪಾಯಿ ಖರ್ಚು ಮಾಡಿಸಿದ ಸರ್ಕಾರ ಭೂಮಿ ಪಟ್ಟಾ ನೀಡುವುದಾಗಿ ಹೇಳಿ ವಂಚಿಸುತ್ತಿದೆ. ಹೊಸ ಹೊಸ ಸುತ್ತೋಲೆ ಹೊರಡಿಸಿ ಅರಣ್ಯ ಭೂಮಿ ಸಾಗುವಳಿದರರ ಭೂಮಿ ಕಸಿದುಕೊಳ್ಳುವ ಪ್ರಯತ್ನ ನಡೆಸುತ್ತಿದೆ. ಇಂಥ ಸರ್ಕಾರಗಳ ನೀತಿ ಖಂಡಿಸಿ ಡಿಸೆಂಬರ್ 13ರಿಂದ ವಿಧಾನ ಸೌಧ ಚಲೋ ನಡೆಸಿ ಅನಿರ್ಧಿಷ್ಟಾವಧಿ ಧರಣ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ. ಸಾವಿರಾರು ಸಂಖ್ಯೆಯಲ್ಲಿ ಜಿಲ್ಲೆಯ ರೈತರು ಭಾಗವಹಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಕರೆ ನೀಡಿದರು.

ಅವರು ಕಾರವಾರ ತಾಲೂಕಾ ಅರಣ್ಯ ಭೂಮಿ ಸಾಗುವಳಿದಾರರ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಮನೆ ನಿವೇಶನ, ಜನತಾಮನೆ, ಅರಣ್ಯ ಅತಿಕ್ರಮಣ ಭೂಮಿಗಳಿಗೆ ಪಟ್ಟಾ ನೀಡಲು ಆಗ್ರಹಿಸಿ, ಬಗರ್ ಹುಕುಂ ಸಾಗುವಳಿ ಖಾಯಮಾತಿಗಾಗಿ ಅನಿರ್ಧಿಷ್ಟಾವಧಿ ಮಹಾಧರಣದಲ್ಲಿ 50 ಸಾವಿರಕ್ಕೂ ಹೆಚ್ಚು ಜನರನ್ನು ಸೇರಿಸಲು ರಾಜ್ಯ ಸಮಿತಿ ತೀರ್ಮಾನಿಸಿದೆ. ಮುಖ್ಯಮಂತ್ರಿಗಳು ಹೋರಾಟನಿರತರಿಗೆ ಭೂಮಿ ಹಕ್ಕು ನೀಡುವ ನಿಖರ ಭರವಸೆ ನೀಡಿದನಂತರವೇ ಧರಣ-ಹೋರಾಟ ಹಿಂಪಡೆಯಲಾಗುವುದು ಎಂದರು.

ಅತಿಥಿಗಳಾಗಿ ಆಗಮಿಸಿದ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ



ಗಾಂವ್ಕರ್ ಹೋರಾಟಕ್ಕೆ ಬೆಂಬಲಿಸಿ ಮಾತನಾಡಿ ದೇಶವಾಸಿಯಾಗಿದ್ದೂ ಕೂಡ ಭೂಮಿ ಹೆಸರಿಗೆ ಇಲ್ಲವೆಂದರೆ ಸರ್ಕಾರದ ಯಾವುದೇ ಸೌಲಭ್ಯಕ್ಕೆ ಫಲಾನುಭವಿಯಾಗುವಂತಿಲ್ಲ. ಆದ-ರೆ ವಿದೇಶದವರಿಗೆ ಭಾರತದಲ್ಲಿ ಬಂಡವಾಳ ಹೂಡಲು ದುಂಬಾಲು ಬಿದ್ದು ಕರೆದು ಪುಕ್ಕಟೆ-ಯಾಗಿ ಭೂಮಿ ನೀಡುವ ಸರ್ಕಾರಗಳು ದೇಶದ ಆದಾಯ ಹೆಚ್ಚಿಸುವ ಬಡರೈತ-ಕೂಲಿಕಾರರಿಗೇಕೆ ಭೂಮಿ ಹಕ್ಕು ನೀಡುತ್ತಿಲ್ಲ? ಎಂದು ಪ್ರಶ್ನಿಸಿದ ಅವರು ಜನರನ್ನು ವಂಚಿಸುವ ಸರ್ಕಾರಗಳ ಭೂ ನೀತಿಯನ್ನು ಖಂಡಿಸಿದರು.

ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ವಿಷ್ಣು ಶಂಕರ ನಾಯ್ಕ (ಮಾಸ್ತರ್) ಮಾತನಾಡಿ ಕಾರವಾರದ ರೈತರ ಎಲ್ಲಾ ರೀತಿಯ ಭೂಮಿ ಸಮಸ್ಯೆ ಆಧಾರದಲ್ಲಿ ನೂರಾರು ಸಂಖ್ಯೆಯಲ್ಲಿ ಬೆಂಗಳೂರಿಗೆ ತೆರಳಲಿದ್ದಾರೆ ಎಂದರು. ವಿವಿಧ ಪಂಚಾಯ್ತಿಗಳಿಂದ ಆಗಮಿಸಿದ ರೈತರು ತಮ್ಮ ಸಮಸ್ಯೆಗಳನ್ನು ಹಂಚಿಕೊಂಡರು. ತಾಲೂಕಾ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ ಸ್ವಾಗತಕೋರಿ ಕಾರ್ಯಕ್ರಮ ನಿರ್ವಹಿಸಿದರು. ವೇದಿಕೆಯ ಮೇಲೆ ತಾಲೂಕಾ ಸಮಿತಿಯ ಕಸ್ತೂರಿ ಕಿಮಾನಿ, ಸಂತೋಷ ನಾಯ್ಕ, ಮತ್ತು ಪ್ರೇಮಾ ಸಾಳ್ಗಾಂವ್ಕರ್ ಉಪಸ್ಥಿತರಿದ್ದರು. ●

‘ಉಳುವವನೇ ಭೂ ಒಡೆಯ’ ಬಗರ್ ಹುಕುಂ ಸಾಗುವಳಿದಾರರಿಗೆ ಭೂ ಮಂಜೂರಾತಿ ಪ್ರಶ್ನೆ
ಕೋರ್ಟಿನಲ್ಲಿ ಅರ್ಜಿಗಳು, ಕಾನೂನು ತೊಡಕು ಮತ್ತು ಸರ್ಕಾರದ ನಿಲುವು ಕುರಿತು ಬೆಂಗಳೂರಿನಲ್ಲಿ ದುಂಡು ಮೇಜಿನ ಸಭೆ

‘ಭೂಗಳ್ಳರು ಮತ್ತು ಭೂಮಿ ತಾಯಿಯ ಮಕ್ಕಳು ಇಬ್ಬರೂ ಒಂದೇ ಅಲ್ಲ –

‘ಒಕ್ಕಲೆಬ್ಬಿಸುವಿಕೆ ನಿಲ್ಲಿಸಿ – ಸೂಕ್ತ ಕಾನೂನು ತಿದ್ದುಪಡಿ ತನ್ನಿ’ – ಒಕ್ಕೊರಲ ಆಗ್ರಹ

ರಾಜ್ಯ ಸರ್ಕಾರ ಬಗರ್ ಹುಕುಂ ಸಾಗುವಳಿದಾರರನ್ನು ಭೂಗಳ್ಳ ಒತ್ತುವರಿದಾರರ ಸಾಲಿಗೆ ಸೇರಿಸದೆ ಬಡ ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಪತ್ರಗಳನ್ನು ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಒತ್ತಾಯಿಸಿದರು. ಬೆಂಗಳೂರಿನ ಶಾಸಕರ ಭವನ ಸಭಾಂಗಣದಲ್ಲಿ ಅಕ್ಟೋಬರ್ 06, 2014 ರಂದು ಕರ್ನಾಟಕ ಪ್ರಾಂತ ರೈತ ಸಂಘದಿಂದ ಆಯೋಜಿಸಲಾಗಿದ್ದ ‘ಉಳುವವನೇ ಭೂಮಿಯ ಒಡೆ-ಯ- ಒಂದು ಕಣ್ನೋಟ’ ‘ಬಗರ್ ಹುಕುಂ ಸಾಗುವಳಿದಾರರಿಗೆ ಭೂ ಮಂಜೂರಾತಿ ಪ್ರಶ್ನೆ

ಕೋರ್ಟಿನಲ್ಲಿ ಅರ್ಜಿಗಳು, ಕಾನೂನು ತೊ ಡಕು ಮತ್ತು ಸರ್ಕಾರದ ನಿಲುವು’ ಎಂಬ ವಿಷಯದ ಮೇಲಿನ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ಕಾಂಗ್ರೆಸ್ ಸರ್ಕಾರದ ಕಂದಾಯ ಮತ್ತು ಅರಣ್ಯ ಇಲಾಖೆಯ ಸಚಿವರುಗಳು ಬಗರ್ ಹುಕುಂ ಸಾಗುವಳಿದಾರರ ಹಿತ ಕಾಪಾಡಲಾಗುವುದೆಂದು ಭರವಸೆ ನೀಡಿದ್ದಾರೆ. ಆದರೆ ರಾಜ್ಯದ ತಾಲೂಕು ತಹಶೀಲ್ದಾರರುಗಳು ಭೂ ಒತ್ತುವರಿದಾರರ ಸಾಲಿಗೆ ಬಗರ್ ಹುಕುಂ ಸಾಗುವಳಿದಾರರನ್ನೂ ಭೂಕಬಳಿಕೆದಾರರೆಂದು ಸೇರಿಸಿ ಹೈಕೋರ್ಟ್‌ಗೆ ಪ್ರಮಾಣ ಪತ್ರ-ಅಫಿಡವಿಟ್ ಸಲ್ಲಿಸಿದ್ದಾರೆ. ಇದ-ರಿಂದ ಬಗರ್ ಹುಕುಂ ಸಾಗುವಳಿದಾರರು ತಲೆ ಮೇಲೆ ಕೈಹೊತ್ತುಕೊಂಡು ಕುಳಿತಿದ್ದಾರೆ. ಭೂಗಳ್ಳರು ಮತ್ತು ಭೂಮಿ ತಾಯಿಯ ಮಕ್ಕಳು ಇಬ್ಬರು ಒಂದೇ ಎಂದು ಈ ಪ್ರಮಾಣ ಪತ್ರ ಹೇಳುವಂತಿದೆ.

ಸಂಸದ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಭೂಗಳ್ಳರು ಹಾಗೂ ಬಡ ಬಗರ್‌ಹುಕುಂ ಸಾಗುವಳಿದಾರರು ಒಂದೇ ಎಂದು ಹೊಸ ಕಾನೂನೊಂದನ್ನು ವಿಧಾನ ಸಭೆಯಲ್ಲಿ ಅಂಗೀಕರಿಸಲಾಗಿದೆ. ಆದ-ರೆ ಇದೇ ಯಡಿಯೂರಪ್ಪ ವಿರೋಧ ಪಕ್ಷದ ನಾಯಕರಾಗಿದ್ದಾಗ ಶಿವಮೊಗ್ಗದ ಶಿಕಾರಿಪುರದಿಂದ ಬೆಂಗಳೂರಿಗೆ ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸುವಂತೆ ಒತ್ತಾಯಿಸಿ ಪಾದಯಾತ್ರೆ ನಡೆಸಿದ್ದರು. ಆದರೆ ಮಂತ್ರಿಗಳಾದ ತಕ್ಷಣ ಸಾಗುವಳಿದಾರರ ಹಿತವನ್ನು ಬಲಿಕೊಡುವಂತಹ ಕಾನೂನನ್ನು ರೂಪಿಸಿದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯದಲ್ಲಿ ಸುಮಾರು 80ರ ದಶಕದಿಂದಲೂ ಅರ್ಜಿ ನಮೂನೆ 50 ಮತ್ತು ಅರ್ಜಿ ನಮೂನೆ 53ರ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದ ಲಕ್ಷಾಂತರ ಜನರು ಸರ್ಕಾರಿ ಭೂಮಿ, ಗೋಮಾಳ, ಅಮೃತ್‌ಮಹಲ್ ಕಾವಲು, ಗುಂಡು ತೋಪು, ಬಂಜರು ಭೂಮಿ ಸೇರಿದಂತೆ ಇತ್ಯಾದಿ ಹೆಸರಿನಲ್ಲಿ ಭೂಮಿಗಳನ್ನು ಬಡ ರೈತರು, ಕೂಲಿಕಾರರು ಸಾಗುವಳಿ ಮಾಡುತ್ತಿದ್ದಾರೆ.

ಇದನ್ನು ಸಕ್ರಮಗೊಳಿಸಲು ತ್ವರಿತ ಕ್ರಮ ಕೈಗೊಳ್ಳಬೇಕಾದ ಸರ್ಕಾರ ರೈತರಿಂದ ಭೂಮಿಯನ್ನು ಕಿತ್ತುಕೊಂಡು, ಜಾಗತಿಕ ಬಂಡವಾಳದಾರರ ಸಮಾವೇಶಗಳ ಹೆಸರಿನಲ್ಲಿ, ನಗರಗಳ ವಿಸ್ತರಣೆಯ



ಹೆಸರಿನಲ್ಲಿ ಭೂಸ್ವಾಧೀನ ಮಾಡಿ ಭೂಮಾಫಿಯಾ ಮತ್ತು ರಿಯಲ್ ಎಸ್ಟೇಟ್‌ದಾರರ ಕೈಗೆ ರೈತರ ಕೃಷಿ ಭೂಮಿಯನ್ನು ಕೊಡುವ ವ್ಯವಸ್ಥಿತ ಹುನ್ನಾರ ನಡೆಸುತ್ತಿದೆ ಎಂದು ಟೀಕಿಸಿದರು.

ಬಿಬಿಎಂಪಿ, ನಗರ ಪಾಲಿಕೆ, ನಗರ ಸಭೆ ಮತ್ತಿತರ ವ್ಯಾಪ್ತಿ ಒಳಗಿನ ಬಡ ಸಾಗುವಳಿದಾರರ ಹಾಗೂ ಅನಧಿಕೃತ ಬಡ ವಸತಿದಾರರ ಸರ್ಕಾರಿ ಜಮೀನಿಗೆ ಹಕ್ಕು ಪತ್ರ ಸಿಗದಂತೆ ಕಾನೂನುಗಳನ್ನು ರೂಪಿಸುತ್ತಿದೆ. ಇದರಲ್ಲಿ ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ, ಗುಲ್ಬರ್ಗಾ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಯ ಸಾಗುವಳಿದಾರರಿಗೆ ದೊಡ್ಡ ಪ್ರಮಾಣದಲ್ಲಿ ಅನ್ಯಾಯವಾಗಲಿದೆ. ಆದರೆ ಇದೇ ಕಾನೂನು ನೈಸ್ ಕಂಪೆನಿಯ ಅಶೋಕ್ ಖೇಣಿಗೆ ಮತ್ತು ಭೂಗಳ್ಳರಿಗೆ ಭೂಮಿಯನ್ನು ಮಂಜೂರು ಮಾಡುವಾಗ ಅಡ್ಡಿಯಾಗುವುದಿಲ್ಲ. ಆದರೆ, ಬಡ ಸಾಗುವಳಿದಾರರಿಗೆ ಭೂಮಿಯನ್ನು ಮಂಜೂರು ಮಾಡುವಾಗ ಮಾತ್ರ ಅಡ್ಡಿಯಾಗುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.


ಸಭೆಯಲ್ಲಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕವಾದ)ಯ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ಅವರು ಮಾತನಾಡಿ ದಲಿತ ಸಂಘರ್ಷ ಸಮಿತಿ ಸಹ ಬಡ ರೈತರಿಗೆ, ದಲಿತರಿಗೆ ಭೂಮಿ ಮಂಜೂರು ಮಾಡಬೇಕೆಂದು, ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಬೇಕೆಂದು ದಲಿತ ಸಂಘರ್ಷ ಸಮಿತಿ ಹಲವಾರು ಹೋರಾಟಗಳನ್ನು ನಡೆಸುತ್ತ ಬಂದಿದೆ. ವ್ಯಾಪಕ ಭೂ ಹೋರಾಟಗಳ ನಂತರ 70 ರ ದಶಕದಲ್ಲಿ ದೇವರಾಜ ಅರಸು ಅವರ ಕಾಲದಲ್ಲಿ ಉಳುವವರಿಗೆ ಒಂದಷ್ಟು ಭೂಮಿ ದೊರೆಯಿತು. ಆದರೆ ಆ ನಂತರ ಬಗರ್ ಹುಕುಂ ಸಾಗುವಳಿದಾರರಿಗೆ, ದಲಿತರಿಗೆ ಭೂಮಿ ದೊರೆತಿಲ್ಲ. ಚಿಕ್ಕಮಗಳೂರು ಮುಂತಾದ ಕಡೆ ದೊಡ್ಡ ದೊಡ್ಡ ಕಾಫಿ ಪ್ಲಾಂಟರುಗಳ ಅಕ್ರಮ ಅರಣ್ಯ ಒತ್ತುವರಿಯನ್ನು ಸಕ್ರಮ ಮಾಡುವ ಪ್ರಯತ್ನವನ್ನು ಸರ್ಕಾರಗಳು ಮಾಡಿದವು. ದ.ಸಂ.ಸ. ಇತರರು ಈ ನೀತಿಯನ್ನು ತೀವ್ರವಾಗಿ ವಿರೋಧಿಸಿದ್ದರಿಂದಾಗಿ ಈ ಭೂಮಿ ದೊಡ್ಡ ಪ್ಲಾಂಟರುಗಳ ಬಾಯಿಗೆ ಹೋಗುವುದು ತಪ್ಪಿತು ಎಂದರು. ಸರ್ಕಾರಗಳಿಗೆ ಬಡವರು, ದಲಿತರ ಭೂಮಿಯ ಅಗತ್ಯದ ಬಗೆಗೆ ಕಾಳಜಿ ಇಲ್ಲ. ಭೂಮಿಯ ಹಕ್ಕಿಗಾಗಿ ನಾವಿಂದು ಹೋರಾಟವನ್ನು ತೀವ್ರಗೊಳಿಸಬೇಕು ಎಂದರು. ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಪಿ.ವಿ. ಲೋಕೇಶ್ ಅವರು ಮಾತನಾಡಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮತ್ತು ಇತರ ಹಲವು ಕಡೆಗಳಲ್ಲಿ ಬಗರ್ ಹುಕುಂ ರೈತರೊಂದಿಗೆ ಜಿಲ್ಲಾಧಿಕಾರಿಗಳನ್ನು, ಅಧಿಕಾರಿಗಳನ್ನು ಭೇಟಿಯಾದಾಗ ಅವರು ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಇರುವ ಕಾನೂನು ತೊಡಕುಗಳನ್ನು, ನ್ಯಾಯಾಲಯದ ಆದೇಶದ ವಿಷಯವನ್ನು ನಮ್ಮ ಮುಂದಿಡುತ್ತಿದ್ದಾರೆ. ಸರ್ಕಾರದ ಶಾಲೆ, ಆಸ್ಪತ್ರೆ ನಿರ್ಮಾಣಕ್ಕೆ ಸರ್ಕಾರಕ್ಕೆ ಸಹ ಭೂಮಿ ವಶ ಪಡಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ ಎಂದು ನಮ್ಮ ಬಳಿ ಅಳಲು ತೋಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರಗಳು ಅಗತ್ಯ ಕಾನೂನು ತಿದ್ದುಪಡಿ ತಂದು ಬಡ ಬಹರ್ ಹುಕುಂ ಸಾಗುವಳಿದಾರರ ಹಿತ ಕಾಪಾಡಬೇಕು ಎಂದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್ ಮಾತನಾಡಿ 1930-40 ರ ದಶಕದಲ್ಲೇ ಬ್ರೀಟಿಷರ ಕಾಲದಲ್ಲೇ ಆಹಾರದ ತೀವ್ರ ಅಭಾವವುಂಟಾಗಿ ಬ್ರಿಟಿಷ್ ಆಡಳಿತವು ‘ಗ್ರೋ ಮೋರ್’ ಅಂದರೆ ‘ಹೆಚ್ಚು ಬೆಳೆಯಿರಿ’ ಎಂಬ ಘೊಷಣೆ ನೀಡಿ ಸರ್ಕಾರಿ ಜಮೀನಿನಲ್ಲಿ ರೈತರು ಸಾಗುವಳಿ ಮಾಡಲು ಕರೆ ನೀಡಿತ್ತು. ಎರಡನೇ ಮಹಾಯುದ್ಧ ಕಾಲದಲ್ಲೂ ತೀವ್ರ ಆಹಾರ ಅಭಾವದಿಂದ ತುರ್ತಾಗಿ ಇದೇ ರೀತಿ ಆಹಾರ ಧಾನ್ಯ ಬೆಳೆಯಲು ಹೇಳಲಾಯಿತು. ‘ಇಂದೇ ಬೆಳೆಯಿರಿ.. ಈಗಲೇ ಬೆಳೆಯಿರಿ’ ಎಂದು ಒತ್ತಾಯಿಸಲಾಗಿತ್ತು. ಆದರೆ ಅಂತಹ ಭೂಮಿಗೆ ಸಹ ಇಂದು ಸರ್ಕಾರಗಳು ಸಾಗುವಳಿ ಚೀಟಿ ಕೊಡದೆ, ಸಕ್ರಮಗೊಳಿಸದೇ ರೈತರಿಗೆ ಅನ್ಯಾಯವೆಸಗುತ್ತಿವೆ ಎಂದರು. 1993 ರಲ್ಲಿ ಬಂಗಾರಪ್ಪನವರ ಕಾಲದಲ್ಲಿ ಕಾನೂನು ತಿದ್ದುಪಡಿ ತಂದ ಮೇಲೆ ತತ್‌ಕ್ಷಣ ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಿಬಿಟ್ಟಿದ್ದಿದ್ದರೆ ಈಗ ಬಂದಿರುವ ಕಾನೂನು ತೊಡಕುಗಳು ಎದುರಾಗುವ ಸಂದರ್ಭವೇ ಬರುತ್ತಿರಲಿಲ್ಲ. ಆದರೆ ಆಳುವ ಸರ್ಕಾರಗಳಿಗೆ ಈ ವಿಷಯದಲ್ಲಿ ರಾಜಕೀಯ ಇಚ್ಛಾಶಕ್ತಿ ಇಲ್ಲ ಎಂದೂ ಜಿ.ಎನ್. ನಾಗರಾಜ್‌ರವರು ಹೇಳಿದರು.

‘ಭೂ ಹಕ್ಕುದಾರರ ವೇದಿಕೆ’ಯ ಜಿ.ಎನ್. ರಾಜಶೇಖರ ನಾಯ್ಡು ಅವರು ಮಾತನಾಡಿ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಭೂ ಮಂಜೂರಾತಿ ಸಮಿತಿಗಳನ್ನೇ ರಚಿಸಲಾಗಿಲ್ಲ. ಕರ್ನಾಟಕದ 224 ವಿಧಾನ ಸಭಾ ಕ್ಷೇತ್ರಗಳ ಪೈಕಿ 13 ಕಡೆಗಳಲ್ಲಿ ಮಾತ್ರ ಸಮಿತಿ ರಚನೆಯಾಗಿದೆ. ಈ 13 ಸಮಿತಿಗಳಲ್ಲಿ ಕೇವಲ ಒಂದೇ ಒಂದು ಸಮಿತಿ ಮಾತ್ರ ಇಲ್ಲಿಯವರೆಗೆ ಸಭೆ ಸೇರಿದೆ. ಆ ಸಭೆ ಕೂಡ ಕೇವಲ 45 ನಿಮಿಷ ಮಾತ್ರ ಸೇರಿತ್ತು. ಹೀಗಾಗಿ ಭೂ ಮಂಜೂರಾತಿ ಸಮಿತಿಗಳು ಎಲ್ಲೆಡೆ ಆಗಬೇಕು. ಯಾವ ಶಾಸಕರೂ ಬಡ ಬಗರ್ ಹುಕುಂ ಸಾಗುವಳಿದಾರರಿಗೆ ರೈತರಿಗೆ ಭೂಮಿ ಕೊಡುವುದನ್ನು ಬಹಿರಂಗವಾಗಿ ವಿರೋಧಿಸಲಾರರು. ಆದ್ದರಿಂದ ಬಗರ್ ಹುಕುಂ ಸಾಗುವಳಿದಾರರಿಗೆ ಅವರ ಭೂಮಿಯ ಮೇಲೆ ಕಾನೂನುಬದ್ಧ ಹಕ್ಕು ನೀಡಬೇಕೆಂಬ ಮನವಿಗೆ 224 ಶಾಸಕರ ಸಹಿ ಸಂಗ್ರಹಿಸಿ ನ್ಯಾಯಾಲಕ್ಕೆ ಸಲ್ಲಿಸಿದರೆ ನ್ಯಾಯಾಲಯವು ಶಾಸಕರ ಅಭಿಪ್ರಾಯವನ್ನು ಪರಿಗಣಿಸಬೇಕಾಗುತ್ತದೆ. ಮತ್ತು ಒಕ್ಕಲೆಬ್ಬಿಸುವಿಕೆ ಕುರಿತ ತೀರ್ಪಿನ ಪುನರ್ ಪರಿಶೀಲನೆ ಪ್ರಕ್ರಿಯೆಗೆ ಇದರಿಂದ ಅನುಕೂಲವಾಗುತ್ತದೆ ಎಂದರು.

ಆರಂಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು. ಬಸವ ರಾಜರವರು ಪ್ರಸ್ತಾವಿಕವಾಗಿ ಮಾತನಾಡಿದರು. ಕರ್ನಾಟಕ ರಾಜ್ಯದಲ್ಲಿ ರೈತರನ್ನು ಭೂಮಿಯಿಂದ ಮತ್ತು ಕೃಷಿ ಕ್ಷೇತ್ರದಿಂದಲೇ ಹೊರಹಾಕುವ ವ್ಯವಸ್ಥಿತವಾದ ಹನ್ನಾರಗಳು ನಡೆಯುತ್ತಿವೆ. ಅದ್ಕಕಾಗಿ ವಿಶ್ವ ಬಂಡವಾಳಿಗರ ಸಮಾವೇಶ ಇತ್ಯಾದಿಗಳ ಹೆಸರಿನಲ್ಲಿ ರೈತರ ಭೂಮಿಯನ್ನು ಅಗ್ಗವಾಗಿ ದೊರಕಿಸಿಕೊಡುವ ಭರವಸೆಯನ್ನು ಸರ್ಕಾರಗಳು ನೀಡುತ್ತಿವೆ. ಕರ್ನಾಟಕ ಸರ್ಕಾರದ ವಿಷನ್ – 2020 ದಾಖಲೆಯಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ರೈತರ ಪ್ರಮಾಣವನ್ನು ಶೇ. 50 ತರುವುದಾಗಿ ಹೇಳಲಾಗಿದೆ. ಇದು ಸಹ ರೈತರ ಭೂಮಿ ಕಿತ್ತುಕೊಳ್ಳುವ ಹುನ್ನಾರ ಒಂದು ಭಾಗ ಎಂದು ಹೇಳಿದರು. ದಲಿತ ಹಕ್ಕುಗಳ ಸಮಿತಿ ಸಂಚಾಲಕರಾದ ಗೋಪಾಲ ಕೃಷ್ಣ ಅರಳಹಳ್ಳಿ, ಡಿವೈಎಫ್‌ನ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಎನ್. ವೆಂಕಟಾಚಲಯ್ಯ. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಲಕ್ಷ್ಮಿ ಮುಂತಾದವರು ಪಾಲ್ಗೊಂಡಿದ್ದರು. ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಬಗರ್ ಹುಕುಂ ಸಾಗುವಳಿದಾರರು ಭಾಗವಹಿಸಿದ್ದರು.

ಮಾರುತಿ ಮಾನ್ಪಡೆಯವರು ಸಭೆಯ ಆಧ್ಯಕ್ಷತೆ ವಹಿಸಿದ್ದರು. ಅಕ್ಟೋಬರ್ 13, 2014 ರಂದು ಬಗರ್ ಹುಕುಂ ಸಕ್ರಮ ಮತ್ತು ಭೂಮಿಯ ಪ್ರಶ್ನೆಯ ಆಧಾರದಲ್ಲಿ ಬೆಂಗಳೂರಿನಲ್ಲಿ ಒಂದು ಬೃಹತ್ತಾದ ಅನಿರ್ಧಿಷ್ಟಾವಧಿ ಧರಣ ನಡೆಸಲು ಉದ್ದೇಶಿಸಲಾಗಿದ್ದು ಆ ಹೋರಾಟವನ್ನು ಎಲ್ಲರೂ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರದ ರಕ್ಷಣೆ ಹೆಸರಿನಲ್ಲಿ ಕಸ್ತೂರಿ ರಂಗನ್ ಸಮಿತಿಯು ಮಾಡಿರುವ ಶಿಫಾರಸ್ಸುಗಳು ರಾಜ್ಯದ ಸುಮಾರು 10-12 ಜಿಲ್ಲೆಗಳ ಬಗರ್ ಹುಕುಂ ಸಾಗುವಳಿದಾರರು ಮತ್ತು ಅರಣ್ಯವಾಸಿಗಳ ಬದುಕಿಗೆ ಮಾರಕವಾಗಿದ್ದು ಕರ್ನಾಟಕ ರಾಜ್ಯ ಸರ್ಕಾರ ಈ ವಿಷಯದಲ್ಲಿ ಏನನ್ನೂ ಮಾಡಿಲ್ಲ. ಕೇರಳ ರಾಜ್ಯದಲ್ಲಿ ಕಸ್ತೂರಿ ರಂಗನ್ ಸಮಿತಿಯ ಶಿಫಾರಸ್ಸಿನ ವಿರುದ್ಧ ನಡೆದ ತೀವ್ರ ಆಂದೋಲನದಿಂದಾಗಿ ಕೇಂದ್ರ ಸರ್ಕಾರವು ಕೇರಳ ರಾಜ್ಯಕ್ಕೆ ಸಮಿತಿ ಶಿಫಾರಸ್ಸಿನಿಂದ ವಿನಾಯಿತಿ ನೀಡಿದೆ. ಇಂತಹದ್ದೇ ಪ್ರಬಲ ಹೋರಾಟ ಕರ್ನಾಟಕದಲ್ಲಿಯೂ ಮೂಡಿಬರಬೇಕು ಮತ್ತು ರಾಜ್ಯ ಸರ್ಕಾರವು ಸಹ ಈ ವಿಷಯದಲ್ಲಿ ಸೂಕ್ತ ಕ್ರಮ ವಹಿಸಬೇಕು. ಅಕ್ಟೋಬರ್ 13 ರಂದು ಆರಂಭವಾಗುವ ಅನಿರ್ಧಿಷ್ಟಾವಧಿ ಧರಣ ಕೇವಲ ಸಾಂಕೇತಿಕವಲ್ಲ. ಬೇಡಿಕೆಗಳು ಈಡೇರುವವರೆಗೆ ರೈತರು ಸ್ಥಳದಿಂದ ಕದಲುವುದಿಲ್ಲ ಎಂದರು.



'ರಾಕ್ ಸ್ಟಾರ್ ಪ್ರಸಿದ್ಧಿ'ಯ ಭೇಟಿಯೆಂದು ಆಳುವ ಮಂದಿ ಮತ್ತು ಕಾರ್ಪೊರೇಟ್ ಭಟ್ಟಂಗಿಗಳು ವರ್ಣಿಸಿರುವ ನಮ್ಮ ಪ್ರಧಾನ ಮಂತ್ರಿಗಳ ಅಮೆರಿಕಾ ಭೇಟಿ ಎರಡು ದೇಶಗಳ ನಡುವಿನ ಸಂಬಂಧಗಳಲ್ಲಿ ಗಮನಾರ್ಹ ಮುನ್ನಡೆಯನ್ನೇನೂ ತೋರಿಸಿಲ್ಲ. ಬದಲಿಗೆ, ಭಾರತೀಯ ಮಾರುಕಟ್ಟೆಯನ್ನು, ಸಂಪನ್ಮೂಲಗಳನ್ನು ಮತ್ತು ಅಗ್ಗದ ಶ್ರಮಶಕ್ತಿಯನ್ನು ವಿದೇಶಿಯರ ಗರಿಷ್ಟ ಲಾಭಗಳಿಗಾಗಿ ತೆರೆದು ಕೊಡುವ ಅಪಾಯ ಕಾಣಬಂದಿದೆ. ಅಷ್ಟೇಅಲ್ಲ, ಇದು ತನ್ನ ಯಜಮಾನಿಕೆಯಲ್ಲಿ ಒಂದು ಏಕಧ್ರುವೀಯ ಜಗತ್ತನ್ನು ನಿರ್ಮಿಸುವ ಅಮೆರಿಕಾದ ಹುನ್ನಾರಗಳಲ್ಲಿ ಭಾರತ ತನ್ನನ್ನು ಒಂದು ಅಡಿಯಾಳು ಸಮರ ಮಿತ್ರನಾಗಿ ಬೆಸೆದುಕೊಳ್ಳುವ ಅಪಾಯವೂ ಇದೆ.



ಅಮೆರಿಕನ್ ಅಧ್ಯಕ್ಷರೊಂದಿಗೆ ಸೆಲ್ಫಿ, 'ದಿ ಹಿಂದೂ'ನಲ್ಲಿ ಕೇಶವ್ ಅವರ ವ್ಯಂಗ್ಯ

ನ್ಯೂಯಾರ್ಕ್ ಮತ್ತು ವಾಶಿಂಗ್ಟನ್‌ನಲ್ಲಿ ಭಾರತದ ಪ್ರಧಾನಿಗಳು

ಸತ್ವಹೀನ ಮತ್ತು ಅಪಾಯದ ಲಕ್ಷಣಗಳನ್ನು ತೋರುವ ಭೇಟಿ

ಸೀತಾರಾಮ್ ಯೆಚೂರಿ

ಪ್ರಧಾನ ಮಂತ್ರಿಗಳು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವಾರ್ಷಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಲು ಹೋದ ಸಂದರ್ಭದಲ್ಲಿ ನ್ಯೂಯಾರ್ಕ್ ಮತ್ತು ವಾಶಿಂಗ್ಟನ್‌ಗೆ ನೀಡಿದ ಭೇಟಿಗಳು 'ರಾಕ್ ಸ್ಟಾರ್ ಪ್ರಸಿದ್ಧಿ'ಯ ಸ್ವರೂಪಕ್ಕೆ ತಿರುಗಿತು ಎಂದು ಪಿಟಿಐ ವರದಿ ಮಾಡಿದೆ. ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ಮತ್ತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದ ಸಂದರ್ಭದಲ್ಲಿ ನ್ಯೂಯಾರ್ಕಿನ ಸೆಂಟ್ರಲ್ ಪಾರ್ಕಿನಲ್ಲಿ ಪ್ರತಿವರ್ಷದಂತೆ ನಡೆದ ರಾಕ್ ಸ್ಟಾರ್ ಆಚರಣೆಗಳಲ್ಲಿ ಅವರ ಭಾಷಣಗಳು ಚುನಾವಣಾ ಪ್ರಚಾರದ ಮಾನಸಿಕತೆ ನಮ್ಮ ಪ್ರಧಾನ ಮಂತ್ರಿಗಳಲ್ಲಿ ಇನ್ನೂ ಮುಂದುವರೆದಿದೆ ಎಂಬುದನ್ನು ದೃಢಪಡಿಸಿವೆ. ಅವರಿನ್ನೂ ಚುನಾವಣೆಯ ಗುಂಗಿನಿಂದ ಹೊರಬಂದಿಲ್ಲ ಎಂದು ಈ ಹಿಂದೆ ಕೆಂಪು ಕೋಟೆಯಿಂದ ಅವರು ಮಾಡಿದ ಮೊದಲ ಸ್ವಾತಂತ್ರ್ಯ ದಿನದ ಭಾಷಣದ ಬಗ್ಗೆ ಟಿಪ್ಪಣಿ ಮಾಡುತ್ತ ಈ ಅಂಕಣದಲ್ಲಿ ಹೇಳಿದ್ದೆವು. ಚುನಾವಣೆಗಳು ಮುಗಿದಿವೆ, ಅವರೀಗ ತಾವು ನುಡಿದಂತೆ ನಡೆಯಬೇಕಾಗಿದೆ ಎಂದು ಜನ ನಿರೀಕ್ಷಿಸುತ್ತಾರೆ ಎಂದು ನಮ್ರತೆಯಿಂದ ಅವರಿಗೆ ಹೇಳಬೇಕು ಎಂದು ನಾವು ಸೂಚಿಸಿದ್ದೆವು. ಆದರೂ ನುಡಿಗಳು ಮುಂದುವರಿದಿವೆ, ಟೋಕಿಯೋದ ನಂತರ ಅದು ನ್ಯೂಯಾರ್ಕ್ ತಲುಪಿದೆ.

ಪ್ರಧಾನ ಮಂತ್ರಿಗಳ ಜಾಗತಿಕ ಸಂವಹನಗಳ ಬಗ್ಗೆ ಟಿಪ್ಪಣಿ ಮಾಡುವುದು ಈಗ ಈ ಅಂಕಣದಲ್ಲಿ ಒಂದು ಹವ್ಯಾಸವಾಗಿ ಬಿಟ್ಟಿದೆ. ಅವರ ಟೋಕಿಯೋ ಭೇಟಿ, ನಂತರ ಭಾರತದಲ್ಲಿ ಚೀನೀ ಅಧ್ಯಕ್ಷರೊಂದಿಗೆ ಮಾತುಕತೆ, ಈಗ ಅವರ ಅಮೆರಿಕಾ ಭೇಟಿಯ ಸರದಿ. ಪ್ರಧಾನ ಮಂತ್ರಿಗಳ ವಿದೇಶ ಪ್ರಯಾಣಗಳ ವೇಳಾಪಟ್ಟಿ ಎಷ್ಟೊಂದು ತುಂಬಿ ತುಳುಕುತ್ತಿದೆಯೆಂದರೆ, ನೇಪಾಳ ಮತ್ತು ಭೂತಾನಕ್ಕೆ ಅವರ ಭೇಟಿಗಳು ಮತ್ತು ನವದೆಹಲಿಯಲ್ಲಿ ಆಸ್ಟ್ರೇಲಿಯನ್ ಪ್ರಧಾನ ಮಂತ್ರಿಗಳೊಂದಿಗೆ ಅವರ ಮಾತುಕತೆಗಳ ಬಗ್ಗೆ ಟಿಪ್ಪಣಿಗಳನ್ನು ಹೇಗಾದರೂ ತುಂಬಲು ನಮಗೆ ಸಾಧ್ಯವಾಗಲೇ ಇಲ್ಲ. ತಮಾಷೆಯ ಸಂಗತಿಯೆಂದರೆ ಹಿಂದಿನ ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಅವರು ಹಾಕಿಕೊಟ್ಟಿರುವ ಜಾಗತಿಕ ಸಂವಹನಗಳ ವೇಗವನ್ನು ಮೋದಿಯವರು ಚಾಚೂ ತಪ್ಪದೆ ಪಾಲಿಸುತ್ತಿದ್ದಾರೆ. ಆದರೂ ಕೂಡ ಹಿಂದಿನ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ ಅಡಿಯಲ್ಲಿ ಸರಕಾರಕ್ಕೆ ಬಡಿದ 'ಲಕ್ವಾ'ದಿಂದ ಭಾರತವನ್ನು 'ಮುಕ್ತ'ಗೊಳಿಸುವ ಕೆಲಸವನ್ನು ಪ್ರಧಾನ ಮಂತ್ರಿ ಮೋದಿ ಕೈಗೆತ್ತಿಕೊಂಡಿರುವುದಾಗಿ ನಮಗೆ ಬೇಸರ ತರಿಸುವಷ್ಟು ಬಾರಿ ಮತ್ತೆ-ಮತ್ತೆ ಹೇಳಲಾಗುತ್ತಿದೆ.

ಪ್ರಧಾನ ಮಂತ್ರಿಗಳು ಭಾರತದ ಜನತೆಯ ದುಗುಡಗಳನ್ನು ಉಪೇಕ್ಷಿಸುತ್ತಿದ್ದಾರೆ ಎಂಬ ಆಪಾದನೆ ಬರದಿರಲಿ ಎಂದು ಪ್ರಧಾನ ಮಂತ್ರಿಗಳು ಅಕ್ಟೋಬರ್ 3ರಂದು ರೇಡಿಯೋದಲ್ಲಿ ದೇಶವನ್ನು ಉದ್ದೇಶಿಸಿ ಮಾತಾಡುತ್ತಾರೆ ಎಂಬ ಅಧಿಕೃತ ಜಾಹೀರಾತುಗಳ ಭರಾಟೆಯನ್ನೇ ನಾವು ಕೇಳಬೇಕಾಗಿ ಬಂತು. ಈ ಭಾಷಣ ಗಾಂಧಿ ಜಯಂತಿ ಪ್ರಯುಕ್ತ ಎಂಬುದು ಅಧಿಕೃತ ಪ್ರಚಾರ. ಆದರೆ ಗಾಂಧಿ ಜಯಂತಿ ಅಕ್ಟೋಬರ್ 2ರಂದು, ಮರುದಿನ ಅಕ್ಟೋಬರ್ 3 ವಿಜಯ ದಶಮಿ-ದಸರಾ. ಆರೆಸ್ಸೆಸ್ ಸ್ಥಾಪನೆಯಾದಂದಿನಿಂದ ವಿಜಯದಶಮಿಯ ದಿನ ಕೇಸರಿ ಬಾವುಟ ಹಾರಿಸುವ, ತದನಂತರ ಆರೆಸ್ಸೆಸ್ ಸರಸಂಘಚಾಲಕರು ಸ್ವಯಂಸೇವಕರನ್ನು (ಈಗಿನ ಸಂದರ್ಭದಲ್ಲಿ ದೇಶವನ್ನು!)ಉದ್ದೇಶಿಸಿ ಮಾತನಾಡುವ ರೂಢಿ ಮಾಡಿಕೊಂಡಿದೆ ಎಂಬುದನ್ನು ನೆನಪಿಸಿಕೊಳ್ಳಿ.

ಗಮನಾರ್ಹ ಮುನ್ನಡೆಯಿಲ್ಲ

ಭಾರತ-ಅಮೆರಿಕಾ ಜಂಟಿ ಹೇಳಿಕೆಯಲ್ಲಿ ಎರಡು ದೇಶಗಳ ನಡುವಿನ ಆಯಕಟ್ಟಿನ ಸಂಬಂಧಗಳನ್ನು ಪುನರುಚ್ಚರಿಸುವ ಎಂದಿನ ಸಂಗತಿ ಇದೆ. ಅಲ್ಲದೆ ಆರ್ಥಿಕ ಮತ್ತು ವ್ಯಾಪಾರ ಸಹಕಾರ, ಆರೋಗ್ಯ ಸಹಕಾರ, ಆಯಕಟ್ಟಿನ ಸಮಾಲೋಚನೆಗಳ ಮುಂದುವರಿಕೆ, ಅಭಿವೃದ್ಧಿಯಲ್ಲಿ ಸಹಕಾರ, ಭದ್ರತಾ ಪಾಲುದಾರಿಕೆಯನ್ನು ಆಳಗೊಳಿಸುವುದು, ನಾಗರಿಕ ಬಾಹ್ಯಾಕಾಶ ಮತ್ತು ತಂತ್ರಜ್ಞಾನ ಸಹಕಾರ, ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ, ವಿದ್ಯುತ್ ಮತ್ತು ವಾತಾವರಣ ಬದಲಾವಣೆ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಆಳಗೊಳಿಸುವುದು ಈ ವಿಷಯಗಳ ಮೇಲೆ ಒಂಬತ್ತು ಪ್ರತ್ಯೇಕ ಹೇಳಿಕೆಗಳನ್ನು ಬಿಡುಗಡೆ ಮಾಡಲಾಗಿದೆ.

ಈ ಎಲ್ಲ ವಿಷಯಗಳಲ್ಲಿ ಈಗಾಗಲೇ ಬಾರತ ಮತ್ತು ಅಮೆರಿಕಾ ನಡುವೆ ಆಗಿರುವ ಒಪ್ಪಂದಗಳಿಗಿಂತ ಯಾವುದೇ ಗಮನಾರ್ಹ ಮುನ್ನಡೆಯೇನೂ ಸಂಭವಿಸಿಲ್ಲ. ಆದರೆ ಇವೆಲ್ಲದರಲ್ಲಿ ಒಂದು ಸಾಮಾನ್ಯ ಎಳೆಯಿದ್ದಂತೆ ಕಾಣುತ್ತದೆ-ಅದೆಂದರೆ ಈ ಎಲ್ಲ ವಲಯಗಳಲ್ಲಿ ಅಮೆರಿಕಾದ ಆಯಕಟ್ಟಿನ ಹಿತಗಳ ಸುಳಿಯೊಳಗೆ ಭಾರತವನ್ನು ಇನ್ನೂ ಹೆಚ್ಚಾಗಿ ಸೆಳೆಯುವ ಹೆಚ್ಚಿನ ಒತ್ತಡಗಳು. ಇದರ ಉದ್ದೇಶವನ್ನು ನಿಕೊಲಸ್ ಬರ್ನ್ಸ್ 'ವಾಶಿಂಗ್ಟನ್ ಪೋಸ್ಟ್' ಪತ್ರಿಕೆಗೆ(ಸಪ್ಟಂಬರ್ 28) ಸ್ಪಷ್ಟವಾಗಿಯೇ ವ್ಯಕ್ತಪಡಿಸಿದ್ದಾರೆ-"ಏಶ್ಯಾದಲ್ಲಿ ಚೀನೀ ಪಟ್ಟನ್ನು ಸೀಮಿತಗೊಳಿಸಲು ಪ್ರಯತ್ನಿಸುವ ಅಮೆರಿಕಾದ ಅತ್ಯಂತ ಮಹತ್ವದ ಭಾಗೀದಾರ ದೇಶವಾದ ಜಪಾನಿನೊಂದಿಗೆ ಆಯಕಟ್ಟಿನ ವಿಷಯದಲ್ಲಿ ವಾಶಿಂಗ್ಟನ್‌ಗೆ ಹಿಂದೂ ಮಹಾಸಾಗರ ಪ್ರದೇಶದಲ್ಲಿ ಪ್ರಬಲ ಶಕ್ತಿಯಾಗಿರುವ ಭಾರತಕ್ಕಿಂತ ಹೆಚ್ಚು ಮಹತ್ವದ ದೇಶ ಕೆಲವೇ ಕೆಲವು" ಎಂದು. ಅವರು ಹೇಳಿದ್ದಾರೆ.

ಹಿಂದಿನ ಸೋವಿಯತ್ ಒಕ್ಕೂಟದೊಂದಿಗೆ ಶೀತಲ ಸಮರ ಕೊನೆಗೊಂಡ ಮೇಲೆ ಅಮೆರಿಕಾದ ಆಯಕಟ್ಟಿನ ಗುರಿಯೆಂದರೆ "ಚೀನಾವನ್ನು ತಡೆಹಿಡಿಯುವುದು". ಇದು ಅದರ ದಸ್ತಾವೇಜುಗಳಲ್ಲಿ ಅಧಿಕೃತವಾಗಿ ವ್ಯಕ್ತಗೊಂಡಿರುವ ಸಂಗತಿ. ವಾಶಿಂಗ್ಟನ್‌ನೊಂದಿಗೆ ಸಂಬಂಧಗಳನ್ನು ನವೀಕರಿಸುವುದು ಪ್ರಧಾನ ಮಂತ್ರಿ ಮೋದಿಯವರ ಒಂದು ಪ್ರಾಥಮಿಕ ಆಕಾಂಕ್ಷೆ ಎಂಬ ವಾಶಿಂಗ್ಟನ್ ಪೋಸ್ಟ್‌ನ ಅಂದಾಜಿನ ಆಧಾರದಲ್ಲಿ ಅಧ್ಯಕ್ಷ ಒಬಾಮ ಈ ಗುರಿಸಾಧನೆಯಲ್ಲಿ ಭರದಿಂದ ತೊಡಗಿದ್ದಾರೆ.

ಅಶುಭಕಾರೀ ಸಂಕೇತಗಳು

ಇದನ್ನು ಅದೇ ಪತ್ರಿಕೆಯಲ್ಲಿ ಅಧ್ಯಕ್ಷ ಒಬಾಮ ಮತ್ತು ಪ್ರಧಾನ ಮಂತ್ರಿ ಮೋದಿಯವರ ಜಂಟಿ ಸಂಪಾದಕೀಯವಾಗಿ "ಚಲೇಂ ಸಾಥ್ ಸಾಥ್: ಫಾರ್ವರ್ಡ್ ಟುಗೆದರ್ ವಿ ಗೋ"(ಒಂದಿಗೇ ಮುನ್ನಡೆಯುತ್ತೇವೆ) ಎಂಬ ಶಿರೋನಾಮೆಯಲ್ಲಿ ಪ್ರಕಟವಾದ 'ಜಂಟಿ ಕಣ್ಣೋಟದ ಹೇಳಿಕೆ' ಅನುಮೋದಿಸುವಂತೆ ಕಾಣುತ್ತದೆ. 'ಚಲೇಂಗೆ ಸಾಥ್ ಸಾಥ್' ಎಂಬುದು ಮಾರ್ಟಿನ್ ಲೂಥರ್ ಕಿಂಗ್ ಜನಪ್ರಿಯಗೊಳಿಸಿದ 'ವಿ ಶಲ್ ಓವರ್‌ಕಂ'(ಗೆದ್ದೆ ಗೆಲ್ಲುವೆವು)ಎಂಬ ಆಫ್ರಿಕನ್ ಅಮೆರಿಕನ್ನರ ಹಾಡಿನ ಹಿಂದಿ ಅನುವಾದದ ಸಾಲು ಎಂಬುದನ್ನು ಇಲ್ಲಿ ಗಮನಿಸಬೇಕು. ಒಂದು ರೀತಿಯಲ್ಲಿ ಇದು ಅಶುಭಕರ ಸಂಗತಿ. ಏಕೆಂದರೆ ಈ ಹಿಂದಿ ಹಾಡನ್ನು ಭಾರತದಲ್ಲಿ ಪ್ರಜಾಪ್ರಭುತ್ವವನ್ನು, ಪ್ರಜಾಪ್ರಭುತ್ವ ಹಕ್ಕುಗಳನ್ನು, ನಾಗರಿಕ ಸ್ವಾತಂತ್ರ್ಯಗಳನ್ನು ರದ್ದು ಮಾಡಿದ್ದ ತುರ್ತು ಪರಿಸ್ಥಿತಿ ಕಾಲದಲ್ಲಿ ಸಂಜಯಗಾಂಧಿ ಇದನ್ನು ಒಂದು ಗೀತೆಯ ಮಟ್ಟಕ್ಕೆ ಏರಿಸಿದ್ದರು.

ತನ್ನ ವಿವಿಧ ಭಾಷಣಗಳಲ್ಲಿ ಭಾರತದ ಪ್ರಧಾನ ಮಂತ್ರಿಗಳು ಭಯೋತ್ಪಾದನೆಯ ವಿರುದ್ಧ ಹೋರಾಟಕ್ಕೆ ಭಾರತ ಬದ್ಧವಾಗಿದೆ ಎಂದು ಒತ್ತಿ ಹೇಳಿದರು. ಭಾರತ 'ಕೆಟ್ಟ ಭಯೋತ್ಪಾದನೆ' ಮತ್ತು 'ಒಳ್ಳೆಯ ಭಯೋತ್ಪಾದನೆ' ಎಂದು ವ್ಯತ್ಯಾಸ ಮಾಡುವುದಿಲ್ಲ ಎಂದರು. ಅದರ ಬೆನ್ನಹಿಂದೆಯೇ ಇಸ್ರೇಲಿ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಹು ಜತೆ ಅವರ ಭೇಟಿ ನಡೆಯಿತು. "ಭಯೋತ್ಪಾದನೆ"ಯ ವಿರುದ್ಧ ಹೋರಾಟದ ಇಂತಹ ನಿರೂಪಣೆ ಮುಗ್ಧ ಪ್ಯಾಲೆಸ್ತೀನಿಯನ್ನರನ್ನು, ಹೆಂಗಸರು, ಮಕ್ಕಳೆನ್ನದೆ ಕೊಲ್ಲುವ ಕ್ರಿಮಿನಲ್ ಮಾನವ-ವಿರೋಧಿ ಇಸ್ರೇಲೀ ದಾಳಿಗಳನ್ನು ಸಮರ್ಥಿಸಿಕೊಳ್ಳುತ್ತದೆ. ದಶಕಗಳ ಕಾಲದಿಂದ ತಮ್ಮ ತಾಯ್ನಾಡನ್ನು ಹೊಂದುವ ಪ್ಯಾಲೆಸ್ತೀನಿಯನ್ನರ ಮೂಲಭೂತ ಹಕ್ಕನ್ನು ಅದು ನಿರಾಕರಿಸಿಕೊಂಡು ಬಂದಿದೆ. ಇದು ಕೂಡ ಇನ್ನೊಂದು ಅಶುಭಕಾರೀ ಸಂಕೇತ.

ಭಾರತ-ಅಮೆರಿಕ ಜಂಟಿ ಹೇಳಿಕೆಯಲ್ಲಿ ಗಮನಾರ್ಹವಾದ ಮುನ್ನಡೆಯನ್ನು ಯಾರಾದರೂ ನಿರೀಕ್ಷಿಸುತ್ತಿದ್ದರೆ, ಅಂತಹದ್ದೇನನ್ನೂ ನಿರೀಕ್ಷಿಸಬೇಕಾಗಿಲ್ಲ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ವಕ್ತಾರರಿಂದ ಮುನ್ನೆಚ್ಚರಿಕೆಯ ಸಂಕೇತ ಆಗಲೇ ಬಂದಿದೆ. ಈ ಶೃಂಗ ಸಭೆಯ ಸಂವಾದದಲ್ಲಿ "ಮೂರು ಪ್ರಮುಖ ಭಾಗಗಳಿದ್ದವು-ಪರಸ್ಪರರೊಂದಿಗೆ ಸಂಪರ್ಕ ಸಾಧಿಸುವುದು, ಸಂಬಂಧಗಳನ್ನು ಕುರಿತಂತೆ ಕಣ್ಣೋಟ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಹಕಾರ" ಎಂದು ಆ ವಕ್ತಾರ ಹೇಳಿದ್ದರು.

ಆದ್ದರಿಂದ ಈ ಭೇಟಿಯಲ್ಲಿ ಕಂಡರಿಸಿದ್ದು ಭಾರತ- ಅಮೆರಿಕ ಆಯಕಟ್ಟಿನ ಭಾಗೀದಾರಿಕೆಯನ್ನು ಆಳಗೊಳಿಸುವುದು. ಅಂದರೆ ಅಮೆರಿಕಾದ ಜಾಗತಿಕ ಕಣ್ಣೋಟವನ್ನು ಜಾರಿಗೊಳಿಸುವಲ್ಲಿ ಭಾರತವನ್ನು ಒಂದು ಆಯಕಟ್ಟಿನ ಅಡಿಯಾಳು ಮಿತ್ರನಾಗಿ ಇನ್ನೂ ಆಳಕ್ಕೆ ಸೆಳೆಯುವುದು. ಭಾರತ ಮತ್ತು ಅಮೆರಿಕ "ಜತೆಗೂಡಿ ಭದ್ರತೆ ಮತ್ತು ಸ್ಥಿರತೆಯನ್ನು ಗಟ್ಟಿಗೊಳಿಸುವ, ಜಾಗತಿಕ ಆರ್ಥಿಕಕ್ಕೆ ಕಾಣಿಕೆ ನೀಡುವ, ನಮ್ಮ ನಾಗರಿಕರಿಗೆ ಮತ್ತು



ಭಾರತದ ಪ್ರಧಾನಮಂತ್ರಿಗಳು ಅಮೆರಿಕಾದ ಅಧ್ಯಕ್ಷರಿಗೆ ಭಗವದ್ಗೀತೆಯನ್ನು ಉಡುಗೊ-ರೆಯಾಗಿ ಕೊಟ್ಟರಂತೆ.

ಥ್ಯಾಂಕ್ಸ್, ಆದರೆ ಯಾವ ಅಮೆರಿಕನ್ ಅಧ್ಯಕ್ಷನಿಗೂ ಜಗತ್ತಿನ ಎಲ್ಲೇ ಆಗಲಿ ಯುದ್ಧ ಆರಂಭಿಸುವ ಮೊದಲು ಇದನ್ನು ಓದುವ ಅಗತ್ಯವಿಲ್ಲ

ಕೃಪೆ: ಮಂಜುಲ್, ಡಿಎನ್‌ಎ

ಜಗತ್ತಿನಾದ್ಯಂತ ಶಾಂತಿ ಮತ್ತು ಸಮೃದ್ಧಿಯನ್ನು ನೀಡುವ ಒಂದು ವಿಶ್ವಾಸಾರ್ಹ ಮತ್ತು ಬಹುಕಾಲ ನಿಲ್ಲುವ ಮಿತ್ರತ್ವಕ್ಕೆ ಯತ್ನಿಸುತ್ತವೆ" ಎಂದು 'ಕಣ್ಣೋಟದ ಹೇಳಿಕೆ' ತಿಳಿಸುತ್ತದೆ.

ಇನ್ನು ಈ ಭೇಟಿಯ ಪ್ರಧಾನ ಉದ್ದೇಶವಾದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ ಬಗ್ಗೆ, ಅಲ್ಲಿ ಮಾಡಿದ ಭಾಷಣದ ಬಗ್ಗೆ ಹೇಳುವುದಾದರೆ, ಭಾರತದ ಪ್ರಧಾನ ಮಂತ್ರಿಗಳ ಭಾಷಣದಲ್ಲಿ ಮಹತ್ವದ ಮುನ್ನಡೆಯಾಗಲೀ, ಕಾಣಿಕೆಯಾಗಲೀ ಇರಲಿಲ್ಲ. ಮೋದಿಯವರ ಮೊತ್ತಮೊದಲ ವಿಶ್ವಸಂಸ್ಥೆಯ ಭಾಷಣ ಸಾಮಾನ್ಯ ಸಭೆಯ ಅಧ್ಯಕ್ಷರು ಮತ್ತು ಸಹ-ಅಧ್ಯಕ್ಷರ ಸಂಭಾಷಣೆ ಅವರಿಗೆ ಅರಿವಿಲ್ಲದೆಯೇ ಮೈಕಿನಲ್ಲಿ ಸೇರಿಕೊಂಡದ್ದರಿಂದ ಯಾರಿಗೂ ಕೇಳಿಸದಿರುವ ಸನ್ನಿವೇಶ ಉಂಟಾಗುವ ಅಪಾಯ ಬಂದಿತ್ತು ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಭಾರತದ ನಿಯೋಗದ ಬಗ್ಗೆ ಮಾತಾಡುತ್ತ ಸ್ವಲ್ಪ ಸೌಜನ್ಯದ ಅಗತ್ಯ ಇದೆ ಎಂದು ಅವರು ಹೇಳುತ್ತಿದ್ದುದು ಕೇಳಬಂತಂತೆ.

ಒಪ್ಪಂದಗಳ ದೊಡ್ಡ ಪಟ್ಟಿಯಷ್ಟೇ

ಅದೇ ರೀತಿ ಮಾಧ್ಯಮ ಟಿಪ್ಪಣಿಗಳ ಪ್ರಕಾರ ಪ್ರಧಾನ ಮಂತ್ರಿ ಮೋದಿ ಮತ್ತು ಅಧ್ಯಕ್ಷ ಒಬಾಮರ ನಡುವೆ ಚರ್ಚೆಗಳು ಹೊಸ ಮುನ್ನಡೆಯೇನೂ ಇರದ, ಎರಡೂ ದೇಶಗಳ ನಡುವಿನ ಒಪ್ಪಂದಗಳ, 'ಜ್ಞಾನ ಭಾಗೀದಾರಿಕೆ'ಯಿಂದ ಹಿಡಿದು ಪರಮಾಣು ಪ್ರಶ್ನೆಗಳ ವರೆಗೆ ಒಂದು ದೊಡ್ಡ ಪಟ್ಟಿಯಷ್ಟೇ ಆಗಿ-ತ್ತು.

ಮಹತ್ವದ ಸಂಗತಿಯೆಂದರೆ, ರಕ್ಷಣಾ ಸಹಕಾರ ಇನ್ನಷ್ಟು ಹೆಚ್ಚಾಗಲಿದೆ. ಏಕೆಂದರೆ ಭಾರತ ಸರಕಾರ ಈಗಾಗಲೇ ಅಮೆರಿಕಾದಿಂದ ದಾಳಿ ಮತ್ತು ಭಾರ ಎತ್ತುವ ಹೆಲಿಕಾಪ್ಟರುಗಳನ್ನು ಖರೀದಿಸಲು ಮಂಜೂರಾತಿ ನೀಡಿದೆ. ಈ ಮೂಲಕ ಕಳೆದ ಐದು ವರ್ಷಗಳಲ್ಲಿ ಅದು ಭಾರತಕ್ಕೆ ಅತಿ ದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರ ದೇಶವಾಗಿದೆ, ಇದಕ್ಕೆ ಮೊದಲು ರಶ್ಯಾ ಆ ಸ್ಥಾನದಲ್ಲಿತ್ತು. ಭಾರತ ಜಗತ್ತಿನಲ್ಲೇ ಅತಿ ದೊಡ್ಡ ಇಸ್ರೇಲಿ ಶಸ್ತ್ರಾಸ್ತ್ರಗಳ ಖರೀದಿದಾರ ದೇಶ ಎಂದೂ ಎನ್ನಿಸಿಕೊಂಡಿದೆ. ಅಂದರೆ ಪ್ಯಾಲೆಸ್ತೀನಿಯನ್ನರ ಮೇಲೆ ದಾಳಿ ನಡೆಸಲು ಅತಿ ಹೆಚ್ಚು ಹಣಕಾಸು ಒದಗಿಸುವ ದೇಶ!

ಈ ಭೇಟಿಯ ಒಂದು ಮುಖ್ಯ ಅಂಶವೆಂದರೆ ಭಾರತದ ಪ್ರಧಾನಮಂತ್ರಿಗಳು ತಮ್ಮ ಸೂತ್ರೀಕರಣದಲ್ಲಿ ಮಾಡಿರುವ ಒಂದು ಮಹತ್ವದ ಬದಲಾವಣೆ. ಕೆಂಪುಕೋಟೆಯ ಭಾಷಣದಲ್ಲಿ ಅವರು 'ಮೇಡ್ ಇನ್ ಇಂಡಿಯಾ' ಘೋಷಣೆ ಕೊಟ್ಟು ಭಾರತವನ್ನು ಒಂದು ಕೈಗಾರಿಕಾ ನಾಭಿಯಾಗಿ ಮಾಡಬೇಕು ಎಂದಿದ್ದರು. ಅಂದರೆ ಭಾರತದ ದೇಶೀ ಕೈಗಾರಿಕಾ ಉತ್ಪಾದನೆಯ ನೆಲೆಯನ್ನು ಬಲಪಡಿಸುವುದು.

ಆದರೆ ಅಮೆರಿಕಾದಲ್ಲಿ ಅವರು ಮತ್ತೆ-ಮತ್ತೆ ಹೇಳಿದ್ದು 'ಮೇಕ್ ಇನ್ ಇಂಡಿಯಾ'. ಅದು ವಿದೇಶಿ ಹೂಡಿಕೆಗಳಿಗೆ, ಅದರಲ್ಲೂ ಅಮೆರಿಕನ್ ಹೂಡಿಕೆಗಳಿಗೆ ನೀಡಿದ ಬಹಿರಂಗ ಆಹ್ವಾನವಾಗಿದೆ. ಈ ಹೂಡಿಕೆಗಳ ಪ್ರಧಾನ ಉದ್ದೇಶ ಭಾರತದ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸುವುದಲ್ಲ, ಬದಲಿಗೆ ಹೂಡಿಕೆದಾರರಿಗೆ ಗರಿಷ್ಟ ಲಾಭಗಳನ್ನು ಕೊಡಿಸುವುದು. ಇದಕ್ಕೆ ಭಾರತ ಸಿದ್ಧವಾಗಿರುವಂತೆ ಕಾಣುತ್ತದೆ. ಇದರಿಂದ ಭಾರತದ ಕಾರ್ಪೊರೇಟ್ ಕುಳಗಳು ಆನಂದ ಪರವಶರಾಗಿದ್ದಾರೆ. ವಿದೇಶಿ ಬಂಡವಾಳಕ್ಕೆ ಅದು ವಿದೇಶಿ ಸಾಂಸ್ಥಿಕ ಹೂಡಿಕೆಗಳ ಮೂಲಕ ಸಟ್ಟಾ ವ್ಯವಹಾರಕ್ಕಿರಲಿ, ಎಫ್‌ಡಿಐಗಾಗಿರಲಿ ಆರ್ಥಿಕವನ್ನು ಇನ್ನಷ್ಟು ಉದಾರೀಕರಿಸಲಾಗುತ್ತದೆ ಎಂಬ ಆನಂದ ಅವರಿಗೆ. ಈ ರೀತಿ ಭಾರತೀಯ ಮಾರುಕಟ್ಟೆಯನ್ನು, ಸಂಪನ್ಮೂಲಗಳನ್ನು ಮತ್ತು ಅಗ್ಗದ ಶ್ರಮಶಕ್ತಿಯನ್ನು ವಿದೇಶಿಯರ ಗರಿಷ್ಟ ಲಾಭಗಳಿಗಾಗಿ ತೆರೆದು ಕೊಡುವುದೆಂದರೆ ಭಾರತೀಯ ಜನತೆಯ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುವುದೆಂದೇ ಅರ್ಥ.

ಸ್ವತಂತ್ರ ಸ್ಥಾನಮಾನಕ್ಕೆ ಸಂಚಕಾರ

ಒಟ್ಟಿನಲ್ಲಿ, ಪ್ರಧಾನ ಮಂತ್ರಿ ಮೋದಿಯವರ ಈ ಅಮೆರಿಕಾ ಭೇಟಿಯ ಫಲಿತಾಂಶವಾಗಿ ಭಾರತ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಅದರ ಜಾಗತಿಕ ಸಾಮರಿಕ(ಸಮರ) ಕಾಳಜಿಗಳ ಒಂದು ಅಡಿಯಾಳು ಮಿತ್ರ ಎಂಬ ಸ್ಥಾನಮಾನ ಇನ್ನಷ್ಟು ಆಳಗೊಳ್ಳಬಹುದು. ಭಾರತ ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಮತ್ತು ಜಗತ್ತಿನ ರಾಷ್ಟ್ರಗಳ ನಡುವೆ ವಿಶಿಷ್ಟ ಸ್ಥಾನ ಪಡೆದಿರುವುದು, ತನ್ನ ಸ್ವತಂತ್ರ ವಿದೇಶಾಂಗ ಧೋರಣೆಯಿಂದಾಗಿ. ಈ ಅಡಿಯಾಳು ಮಿತ್ರ ಎಂಬ ಸ್ಥಾನಮಾನ ಒಳ್ಳೆಯ ಲಕ್ಷಣವಲ್ಲ. ಅಮೆರಿಕಾದ ಯುದ್ಧ ಹಿತಗಳಿಗಾಗಿ ನಮ್ಮ ನೆರೆದೇಶಗಳೊಂದಿಗೆ ಸಂಬಂಧಗಳನ್ನು ಬಿಟ್ಟುಕೊಡುವುದು ಭಾರತಕ್ಕೆ ಹಿತಕರವಲ್ಲ.

ನಿಜ, ಭಾರತದ ಸಾರ್ವಭೌಮತೆ ಮತ್ತು ಭದ್ರತೆಯ ಕಾಳಜಿಗಳ ಬಗ್ಗೆ ರಾಜಿ ಸಾಧ್ಯವಿಲ್ಲ. ಇದನ್ನು ಕಾಪಾಡಿಕೊಂಡೇ, ಜಗತ್ತಿನ ಎಲ್ಲ ದೇಶಗಳೊಂದಿಗೆ ಭಾರತ ಸ್ವತಂತ್ರ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದು ಅಗತ್ಯ; ಎರಡು ಧ್ರುವಗಳ ಶೀತಲ ಸಮರ ಕೊನೆಗೊಂಡ ನಂತರ ಒಂದು ಬಹುಧ್ರುವೀಯ ಜಗತ್ತನ್ನು ನಿರ್ಮಿಸುವಲ್ಲಿ ಇದು ಬಹಳ ಮಹತ್ವದ್ದಾಗಿದೆ.

ಆದರೆ ಈ ಭೇಟಿ ಮತ್ತು ಅದರ ಫಲಿತಾಂಶದಿಂದಾಗಿ ತನ್ನ ಯಜಮಾನಿಕೆಯಲ್ಲಿ ಒಂದು ಏಕಧ್ರುವೀಯ ಜಗತ್ತನ್ನು ನಿರ್ಮಿಸುವ ಅಮೆರಿಕಾದ ಹುನ್ನಾರಗಳಲ್ಲಿ ಭಾರತ ತನ್ನನ್ನು ಒಂದು ಅಡಿಯಾಳು ಸಮರ ಮಿತ್ರವಾಗಿ ಬೆಸೆದುಕೊಳ್ಳುವ ಅಪಾಯವಿದೆ. ಭಾರತದ ಹಿತದೃಷ್ಟಿಯಿಂದ ಈ ರೀತಿ ವಿನಾಶದತ್ತ ಸರಿಯಲು ಬಿಡಬಾರದು. •

ಅಮೆರಿಕಾದ ಪ್ರಖ್ಯಾತ ದೈನಿಕ 'ವಾಶಿಂಗ್ಟನ್ ಪೋಸ್ಟ್'ನಲ್ಲಿ ಅಧ್ಯಕ್ಷ ಒಬಾಮ ಮತ್ತು ಪ್ರಧಾನ ಮಂತ್ರಿ ಒಬಾಮ ಅವರ ಜಂಟಿ ಸಂಪಾದಕೀಯ ಈ ಭೇಟಿಯ ವಿಶಿಷ್ಟತೆ ಎನ್ನಲಾಗಿದೆ. ಈ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಇ.ಪಿ.ಉನ್ನಿಯವರ ಎರಡು ವ್ಯಂಗ್ಯಚಿತ್ರಗಳು




ನೋಡಿ
ಒಂದೇ ಪುಟದಲ್ಲಿ
ಇಬ್ಬರು ಶಬ್ದವೀರರನ್ನು

ನಿಜವಾದ ಪರೀ-ಕ್ಷೆಯೆಂದರೆ ಜಂಟಿ ಸಂಪಾದಕೀಯವನ್ನು ಅನುಸರಿಸಿ ಜಂಟಿ ಕಾರ್ಟೂನ್‌ಗಳು



ಭಾರತ-ಅಮೆರಿಕ ರಕ್ಷಣಾ ಒಪ್ಪಂದದ ನವೀಕರಣವಲ್ಲ, ರದ್ದತಿ ಆಗಬೇಕಾಗಿದೆ



ಅಮೆರಿಕಾದೊಂದಿಗೆ ಹೊಸದೊಂದು ರಕ್ಷಣಾ ಸಹಕಾರದ ಒಪ್ಪಂದ ದೇಶದ ಮೂಲಹಿತಾಸಕ್ತಿಗಳಿಗೆ, ಸ್ವಾಯತ್ತತೆಗೆ ಮತ್ತು ಸ್ವತಂತ್ರ ವಿದೇಶಾಂಗ ಧೋರಣೆಗೆ ವಿರುದ್ಧವಾದದ್ದು. ಭಾರತ ಏಶ್ಯಾದಲ್ಲಿ ಅಮೆರಿಕಾದ ಭೌಗೋಳಿಕ-ರಾಜಕೀಯ ಕಾರ್ಯತಂತ್ರದಲ್ಲಿ ಒಂದು ಅಡಿಯಾಳು ಭಾಗೀದಾರನಾಗಲು ಸಾಧ್ಯವಿಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಈಡೇರಿಸಲಿಕ್ಕಾಗಿ ಭಾರತೀಯ ಸಶಸ್ತ್ರ ಪಡೆಗಳನ್ನು ಅಮೆರಿಕಾದ ಯುದ್ಧಯಂತ್ರದ ನೊಗಕ್ಕೆ ಕಟ್ಟಲು ಸಾಧ್ಯವಿಲ್ಲ.

– ಪ್ರಕಾಶ ಕಾರಟ್

ಒಬಾಮ-ಮೋದಿ ಮಾತುಕತೆಗಳ ನಂತರ ನೀಡಿರುವ ಜಂಟಿ ಹೇಳಿಕೆ 'ರಕ್ಷಣಾ ಚೌಕಟ್ಟು ಒಪ್ಪಂದ'ವನ್ನು ಇನ್ನೊಂದು ಹತ್ತು ವರ್ಷಗಳ ಅವಧಿಗೆ ನವೀಕರಿಸಲಾಗುವುದು ಎಂದು ದೃಢಪಡಿಸಿದೆ. ಈ ಬಗ್ಗೆ ಮಾತುಕತೆಗಳು ನಡೆದು ಜೂನ್ 2015ರ ವೇಳೆಗೆ ಇನ್ನೊಂದು ಚೌಕಟ್ಟು ಒಪ್ಪಂದವನ್ನು ಮುಂದಿನ ಹತ್ತು ವರ್ಷಗಳ ಅವಧಿಗೆ ಮಾಡಿಕೊಳ್ಳುವುದು ಎಂದು ಆಗಸ್ಟ್ ತಿಂಗಳಲ್ಲಿ ಅಮೆರಿಕಾದ ರಕ್ಷಣಾ ಕಾರ್ಯದರ್ಶಿಯ ದಿಲ್ಲಿ ಭೇಟಿಯ ವೇಳೆಯೇ ನಿರ್ಧರಿಸಲಾಗಿತ್ತಂತೆ.

ಜೂನ್ 2005ರಲ್ಲಿ ಯುಪಿಎ-1 ಸರಕಾರದ ಅವಧಿಯಲ್ಲಿ ಈ ಒಪ್ಪಂದವನ್ನು ಗುಟ್ಟಾಗಿ ಮಾಡಿಕೊಳ್ಳಲಾಗಿತ್ತು. ಅದು ಅಮೆರಿಕಾದೊಂದಿಗೆ ಭಾರತದ ಸಮರ ಮೈತ್ರಿಯ ಆರಂಭದ ಸಂಕೇತವಾಗಿತ್ತು. ಇದನ್ನು ಸಿಪಿಐ(ಎಂ) ಮತ್ತು ಎಡಪಕ್ಷಗಳು ಬಲವಾಗಿ ವಿರೋಧಿಸಿದ್ದರಿಂದ ಅದು ಯುಪಿಎ ಮತ್ತು ಎಡಪಕ್ಷಗಳ ನಡುವಿನ ತಿಕ್ಕಾಟದ ಆರಂಭವೂ ಆಗಿತ್ತು.

ಈ ಒಪ್ಪಂದ ನಡೆದದ್ದು ಅಮೆರಿಕನ್ ರಕ್ಷಣಾ ವ್ಯವಸ್ಥೆ ಪೆಂಟಗನ್‌ನ 2002 ರ ಒಂದು ಅಧ್ಯಯನದ ಆಧಾರದಲ್ಲಿ. "2020ರ ವೇಳೆಗೆ ಚೀನಾದ ಬೆದರಿಕೆಯನ್ನು ಎದುರಿಸುವಲ್ಲಿ ಅಮೆರಕನ್ ಸೈನ್ಯಕ್ಕೆ ನೆರವಾಗಬಲ್ಲ ಒಂದು ಮಿತ್ರ ದೇಶ ಬೇಕಾಗಿದೆ. ಭಾರತವು ಚೀನಾಕ್ಕೆ ಎದುರಾಗಿ ಒಂದು ಪ್ರತಿಶಕ್ತಿಯನ್ನು ನಿರ್ಮಿಸುತ್ತದೆ ಎಂಬುದನ್ನು ನಿರಾಕರಿಸುವುದು ಸಾಧ್ಯವಿಲ್ಲ" ಎಂದು ಆ ಅಧ್ಯಯನ ತೀರ್ಮಾನಿಸಿತ್ತು. ಅಂದರೆ ಈ ಒಪ್ಪಂದದ ಉದ್ದೇಶ ಚೀನಾವನ್ನು ಎದುರಿಸಲು ಅಮೆರಿಕಾಕ್ಕೆ ನೆರವಾಗಬಲ್ಲ ಒಬ್ಬ ಅಡಿಯಾಳು ಮಿತ್ರನಾಗಿ ಭಾರತವನ್ನು ಮಾಡುವುದು.

ಭಾರತ ಅದುವರೆಗೆ ಅಲಿಪ್ತ ನಿಲುವನ್ನು ತಳೆದು ಯಾವುದೇ ದೇಶದೊಂದಿಗೆ ಮಿಲಿಟರಿ ಮೈತ್ರಿ ಮಾಡಿಕೊಳ್ಳಲು ನಿರಾಕರಿಸಿತ್ತು. ಆ ಧೋರಣೆಯನ್ನು ಕೈಬಿಡುತ್ತಿರುವುದನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸಿತು. ಈ ಒಪ್ಪಂದದ ಅಡಿಯಲ್ಲಿ ನಡೆಸಿದ ಜಂಟಿ ಸಮರಾಭ್ಯಾಸಗಳಿಗೆ ಪ್ರತಿಭಟನೆಗಳನ್ನು, ಜಾಥಾಗಳನ್ನು ಸಂಘಟಿಸಿತು.

ಭಾರತ ಜಗತ್ತಿನಲ್ಲೇ ಅತಿ ದೊಡ್ಡ ಶಸ್ತ್ರಾಸ್ತ್ರ ಖರೀದಿದಾರ ದೇಶವಾಗಿದ್ದು ಈ ಒಪ್ಪಂದದಿಂದಾಗಿ ಅಮೆರಿಕಾ ಅತಿ ದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರನ ಸ್ಥಾನ ಪಡೆಯುತ್ತಿದೆ. ಅಮೆರಿಕಾ ಭಾರತವನ್ನು ಅದರ ಸೈನಿಕ ವ್ಯವಸ್ಥೆಯಲ್ಲಿ ಹೆಚ್ಚೆಚ್ಚು ಸಮಗ್ರೀಕರಿಸಲು ಪ್ರಯತ್ನಿಸುತ್ತಿದ್ದರೆ, ಭಾರತ ತನ್ನ ಸಶಸ್ತ್ರ ಪಡೆಗಳ ಮೇಲ್‌ಸ್ತರದ ಅಧಿಕಾರಿಗಳು ಅಮೆರಿಕಾದ ಪ್ರಭಾವಕ್ಕೆ ಒಳಗಾಗಲು ಅವಕಾಶ ಒದಗಿಸಿದೆ.

ಈ ಒಂದು ದಶಕದಲ್ಲಿ ಅಮೆರಿಕಾಕ್ಕೆ ಭಾರತವನ್ನು ಒಂದು ನಿಕಟ ಸಂಬಂಧದೊಳಕ್ಕೆ ಸೆಳೆಯಲು ಸಾಧ್ಯವಾಗಿದ್ದರೂ ಒಂದು ಶಾಶ್ವತ ಮಿಲಿಟರಿ ಮೈತ್ರಿಯೊಳಕ್ಕೆ ಸೆಳೆಯುವ ಅದರ ಉದ್ದೇಶ ಪೂರ್ಣವಾಗಿ ಈಡೇರಿಲ್ಲ. ಈಗ ಒಪ್ಪಂದದ ವಿಸ್ತರಣೆಗೆ ಮಾತುಕತೆಗಳ ಸಂದರ್ಭದಲ್ಲಿ ಭಾರತವನ್ನು ಇಂತಹ ಒಂದು ಮಿಲಿಟರಿ ಮೈತ್ರಿಯೊಳಕ್ಕೆ ಇನ್ನೂ ಆಳವಾಗಿ ಸೆಳೆಯುವ ನಿರೀಕ್ಷೆ ಅಮೆರಿಕಾದ್ದು.

ಅಮೆರಿಕಾವು ಏಶ್ಯಾ-ಶಾಂತಸಾಗರ ಪ್ರದೇಶಕ್ಕೆ ಮರು ಸಮತೋಲನ ನಡೆಸುತ್ತಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ರಕ್ಷಣಾ ಒಪ್ಪಂದವನ್ನು ನವೀಕರಿಸುವ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಇದನ್ನು ಜಂಟಿ ಹೇಳಿಕೆಯಲ್ಲಿ ಭಾರತವೂ ಸ್ವೀಕರಿಸಿದೆ. ಚೀನಾವನ್ನು ಅಮೇರಿಕಾ ತನ್ನ ದೀರ್ಘಕಾಲೀನ ಬೆದರಿಕೆ ಎಂದು ಕಾಣುತ್ತಿರುವುದರಿಂದ ಏಶ್ಯಾದಲ್ಲಿ ತನ್ನ ಭೌಗೋಳಿಕ-ರಾಜಕೀಯ ಕಾರ್ಯತಂತ್ರದಲ್ಲಿ ಭಾರತವನ್ನು ಮಿತ್ರನಾಗಿ ಬಳಸಿಕೊಳ್ಳುವುದು ಅಮೆರಿಕಾದ ಆಶಯ. ಚೀನಾವನ್ನು ಎದುರಿಸುವಲ್ಲಿ ಜಪಾನಿನ ನಂತರ ಅದು ಭಾರತಕ್ಕೇ ಒಂದು ಮಹತ್ವದ ಪಾತ್ರದ ಯೋಜನೆ ಹಾಕುತ್ತಿದೆ.

ಭಾರತದ ಕಡೆಯಿಂದ ಈ ರಕ್ಷಣಾ ಶಾಮೀಲನ್ನು ಮುಂದೊಯ್ಯುವಂತದ್ದು ನರೇಂದ್ರ ಮೋದಿ ನೇತೃತ್ವದ ಮೋದಿ ಸರಕಾರ. ಈ ಹಿಂದೆ ಬಿಜೆಪಿ ಪಕ್ಷ ಸರಕಾರದಲ್ಲಿದ್ದಾಗ, ವಾಜಪೇಯಿ ಹೇಳಿದಂತೆ, ಭಾರತ ಅಮೆರಿಕಾದ 'ಸ್ವಾಭಾವಿಕ ಮಿತ್ರ'ನಾಗಬೇಕೆಂದು ಬಯಸಿತ್ತು. ಅಧಿಕಾರ ವಹಿಸಿಕೊಂಡ ಅಲ್ಪಾವಧಿಯಲ್ಲೇ ನರೇಂದ್ರ ಮೋದಿ ಜಪಾನಿಗೆ ಭೇಟಿ ನೀಡಿದರು ಮತ್ತು ಆಸ್ಟ್ರೇಲಿಯಾದ ಪ್ರಧಾನ ಮಂತ್ರಿಯನ್ನು ದಿಲ್ಲಿಯಲ್ಲಿ ಭೇಟಿಯಾದರು. ಇವೆರಡೂ ದೇಶಗಳೊಂದಿಗೆ ಭಾರತವೂ ಸೇರಿ-ಕೊಂಡು ಒಂದು 'ಚತುಷ್ಕೋಣ ಭದ್ರತಾ ಮೈತ್ರಿ' ರಚಿಸಬೇಕೆಂದು ಅಮೆರಿಕಾ ಬಯಸುತ್ತಿದೆ.

ಮೋದಿ ಸರಕಾರ ಅಮೆರಿಕಾ ಶಸ್ತ್ರಾಸ್ತ್ರಗಳ ಜಂಟಿ ಉತ್ಪಾದನೆ ಮತ್ತು ಸಹ-ಅಭಿವೃದ್ಧಿಯನ್ನು ಸ್ವೀಕರಿಸುವಂತೆ ಮಾಡಲು ಕಾತುರವಾಗಿದೆ. ರಕ್ಷಣಾ ಉತ್ಪಾದನೆಯಲ್ಲಿ ಎಫ್‌ಡಿಐ ಮಿತಿಯನ್ನು 26ಶೇ.ದಿಂದ 49ಶೇ.ಕ್ಕೆ ಏರಿಸಿರುವುದರಲ್ಲಿ ಇದನ್ನು ಕಾಣಬಹುದು. ಆದರೆ ಅಮೆರಿಕಾ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಜಂಟಿ ಉತ್ಪಾದನೆಗೆ ಒಪ್ಪಬೇಕಾದರೆ, ಭಾರತ ತನ್ನ ಸಶಸ್ತ್ರ ಪಡೆಗಳನ್ನು ಅಮೆರಿಕಾದ ಪಡೆಗಳೊಂದಿಗೆ ಇನ್ನಷ್ಟು ಸಮಗ್ರೀಕರಿಸಲು ಒಪ್ಪಿಕೊಳ್ಳಬೇಕಾಗುತ್ತದೆ. ಭಾರತ ಇದುವರೆಗೆ ಇದನ್ನು ಒಂದು ಮಿಲಿಟರಿ ಮೈತ್ರಿ ಎಂದು ಹೇಳಲು ಹಿಂಜರಿಯುತ್ತ ಬಂದಿದ್ದರೂ, ಮೋದಿಯವರು ಅಮೆರಿಕಾವನ್ನು 'ಅತಿ ನಿಕಟ ಭಾಗೀದಾರ' ಎಂದು ಕಾಣಲು ಒಪ್ಪಿದ್ದಾರೆ.

ಹೀಗೆ ಮೋದಿ ಸರಕಾರ ಅಮೆರಿಕಾದೊಂದಿಗೆ ಮಿಲಿಟರಿ ಬಲೆಯಲ್ಲಿ ಇನ್ನೂ ಹೆಚ್ಚಾಗಿ ಸಿಲುಕಿಕೊಳ್ಳಲು ಮುಂದಾಗುವ ಅಪಾಯವಿದೆ. ಅಮೆರಿಕಾದೊಂದಿಗೆ ಹೊಸದೊಂದು ರಕ್ಷಣಾ ಸಹಕಾರದ ಒಪ್ಪಂದ ದೇಶದ ಮೂಲಹಿತಾಸಕ್ತಿಗಳಿಗ, ಆಯಕಟ್ಟಿನ ಸ್ವಾ-ಯತ್ತತೆಗೆ ಮತ್ತು ಸ್ವತಂತ್ರ ವಿದೇಶಾಂಗ ಧೋರಣೆಗೆ ವಿರುದ್ಧವಾದದ್ದು. ಭಾರತ ಏಶ್ಯಾದಲ್ಲಿ ಅಮೆರಿಕಾದ ಭೌಗೋಳಿಕ-ರಾಜಕೀಯ ಕಾರ್ಯತಂತ್ರದಲ್ಲಿ ಒಂದು ಅಡಿಯಾಳು ಭಾಗೀದಾರನಾಗಲು ಸಾಧ್ಯವಿಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಈಡೇರಿಸಲಿಕ್ಕಾಗಿ ಭಾರತೀಯ ಸಶಸ್ತ್ರ ಪಡೆಗಳನ್ನು ಅಮೆರಿಕಾದ ಯುದ್ಧಯಂತ್ರದ ನೊಗಕ್ಕೆ ಕಟ್ಟಲು ಸಾಧ್ಯವಿಲ್ಲ. ಆದ್ದರಿಂದ ಈ ರಕ್ಷಣಾ ಚೌಕಟ್ಟು ಒಪ್ಪಂದದ 'ನವೀಕರಣ' ಬೇಕಾಗಿಲ್ಲ, ಬದಲಾಗಿ ಅದನ್ನು ರದ್ದುಮಾಡಬೇಕಾಗಿದೆ.

ಮುಂಬರುವ ತಿಂಗಳುಗಳಲ್ಲಿ ಒಂದು ಹೊಸ ಒಪ್ಪಂದ ಮಾಡಿಕೊಳ್ಳುವ ಸಿದ್ಧತೆ ನಡೆಯುವಾಗ ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ಮಿಲಿಟರಿ ಶಾಮೀಲಿನ ಅಪಾಯಗಳನ್ನು ಎತ್ತಿ ತೋರುವ ಒಂದು ಬಲಿಷ್ಟ ಪ್ರಚಾರ ನಡೆಸಬೇಕಾಗಿದೆ. ಅಮೆರಿಕಾದೊಂದಿಗೆ ಈ ಮಿಲಿಟರಿ ಒಪ್ಪಂದದ ವಿರುದ್ಧ ಎಲ್ಲ ಎಡ, ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಶಕ್ತಿಗಳು ಎದ್ದುನಿಲ್ಲಬೇಕಾಗಿದೆ. ●

ರಾಜ್ಯದ ಬಗರ್ ಹುಕುಂ ಜಮೀನು

ಬಡ ಸಾಗುವಳಿದಾರರಿಗೋ? ಅಥವಾ ಬಹುರಾಷ್ಟ್ರೀಯ ಸಂಸ್ಥೆಗಳ ಬಾಯಿಗೋ !?

ಯು. ಬಸವರಾಜು

ಆಳುವ ಸರ್ಕಾರಗಳ ರಾಜಕೀಯ ಇಚ್ಛಾಶಕ್ತಿಯ ಕೊರತೆ ಹಾಗೂ ಭೂ ಮಾಫಿಯಾದೊಂದಿಗಿನ ಶಾಮಿಲಾತಿ, ಬಲಾಢ್ಯರು, ಬಂಡವಾಳಿಗರು–ಬಹುರಾಷ್ಟ್ರೀಯ ಕಂಪನಿಗಳನ್ನು ಓಲೈಸುವ ಧೋರಣೆಗಳಿಂದಾಗಿ ಬಡ ಬಗರ್ ಹುಕುಂ ಸಾಗುವಳಿದಾರರ ಪ್ರಶ್ನೆಗಳು ಇತ್ಯರ್ಥವಾಗದೇ ಉಳಿದುಕೊಂಡು ಬಂದಿವೆ. ಈಗ ಕಾನೂನು ತೊಡಕುಗಳು ಒಕ್ಕಲೆಬ್ಬಸುವಿಕೆಯ ಸವಾಲು ಎದುರಾಗಿವೆ. ಈ ಎಲ್ಲವನ್ನು ಮೀರಿ ಭೂ ಹೀನ ಬಡವರು ಭೂಮಿ ಪಡೆಯಲು ದೃಢವಾದ ಬೃಹತ್ ಹೋರಾಟವನ್ನೇ ಕೈಗೊಳ್ಳಬೇಕಾಗಿದೆ.

ಕರ್ನಾಟಕ ರಾಜ್ಯದಲ್ಲಿ ಬಗರ್ ಹುಕುಂ ಹಾಗೂ ಈಗ ಅರಣ್ಯವೆನ್ನಲಾಗುವ ಬಡವರ ಸಾಗೂ ಭೂಮಿಯ ಪ್ರಶ್ನೆ ಮರಳಿ ಮುಂಚೂಣಿಗೆ ಬಂದಿದೆ. ರಾಜ್ಯದಾದ್ಯಂತ ದಶಲಕ್ಷಾಂತರ ಸಂಖ್ಯೆಯಲ್ಲಿರುವ ಈ ಬಡಸಾಗು ನಿರತ ಕುಟುಂಬಗಳನ್ನು ಸರ್ಕಾರ ಯಾವುದೇ ಅನುಕಂಪ ತೋರದೇ ನಿರ್ದಯಿಯಾಗಿ ಒಕ್ಕಲೆಬ್ಬಿಸಲು ಮುಂದಾಗಿದೆ. ಪರಿಣಾಮವಾಗಿ ಈ ಎಲ್ಲಾ ಬಡ ಕುಟುಂಬಗಳು ಬೀದಿಗೆಸೆಯಲ್ಪಡುತ್ತಿವೆ. ತಹಸಿಲ್ದಾರರುಗಳು ನೋಟಿಸುಗಳನ್ನು ನೀಡಿ ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ಹಲವೆಡೆ ಬೆದರಿಸಿದರೆ, ಧಾರವಾಡ ಜಿಲ್ಲಾ ಕಲಘಟಕಿ ತಾಲೂಕಿನ ನೆಲ್ಲಹರವಿ ಗ್ರಾಮದಲ್ಲಿ ದಲಿತ ರೈತನೊಬ್ಬನ ಲಕ್ಷಾಂತರ ಮೌಲ್ಯದ ಮೆಕ್ಕೆ ಜೋಳ (ಗೋವಿನ ಜೋಳ) ಬೆಳೆಯನ್ನು ಪೋಲೀಸ್ ಬಲ ಉಪಯೋಗಿಸಿ ನಾಶ ಪಡಿಸಲಾಗಿದೆ. ಅದೇ ರೀತಿ ತಾಂಬೂರು ಗ್ರಾಮದಲ್ಲಿನ ಸರ್ಕಾರಿ ಜಮೀನಿನಲ್ಲಿ ವಾಸವಾಗಿದ್ದ ಜೋಗಿ ಜನ ಸಮುದಾಯವನ್ನು ಬೆದರಿಸಿ ಗುಡಿಸಲುಗಳ ಮೇಲೆ ಧಾಳಿ ಮಾಡಿ ಒಕ್ಕಲೆಬ್ಬಿಸಲಾಗಿದೆ. ಇಂತಹದ್ದೆ ಪ್ರಯತ್ನ ಬಿಜಾಪುರ ತಾಲೂಕಿನಲ್ಲಿ ನಡೆದಿದೆ. ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯದಾದ್ಯಂತ ಮತ್ತು ವಿಧಾನ ಸೌಧದೆದುರು ಹಾಗೂ ದಾವಣಗೆರೆಯಲ್ಲಿ ಮಂತ್ರಿ ಶ್ಯಾಮನೂರು ಶಿವಶಂಕರಪ್ಪನವರ ಮನೆಯ ಮುಂದೆ ಪ್ರತಿಭಟನೆ ನಡೆಸಿದೆ ಮತ್ತು ಈ ಕುರಿತು ಮುಖ್ಯಮಂತ್ರಿ ಜೊತೆ ಮಾತುಕತೆಗೆ ಮುಂದಾಗಿದೆ. ಕಾಂಗ್ರೆಸ್ ರಾಜ್ಯ ಸರ್ಕಾರ ಹಾಗೂ ಮುಖ್ಯ ಮಂತ್ರಿಗಳು ಈಗ ನಾವೇನೂ ಮಾಡುವ ಹಾಗಿಲ್ಲ. ಪ್ರಕರಣ ಉಚ್ಚ ನ್ಯಾಯಾಲಯದ ಮುಂದಿದ್ದು ಅದರ ಆದೇಶ ಪಾಲಿಸದಿದ್ದಲ್ಲಿ ಅದರ ಕೋಪಕ್ಕೆ ತುತ್ತಾಗ ಬೇಕಾಗುತ್ತದೆಂದು ಕೈಚೆಲ್ಲಿ ಕುಳಿತಿದ್ದಾರೆ. ರಾಜ್ಯದಾದ್ಯಂತ ಪ್ರತಿಭಟನೆಗಳು ಬಿರುಸುಗೊಳ್ಳುತ್ತಿವೆ. ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ರಾಜ್ಯದಾದ್ಯಂತ ತಾಲೂಕಾವಾರು ಬಗರ್ ಹುಕುಂ ಹಾಗೂ ಈಗ ಅರಣ್ಯವೆಂದು ಹೇಳಲಾಗುವ ಜಮೀನುಗಳ ಬಡ ಸಾಗುದಾರರ ಸಮಾವೇಶಗಳನ್ನು ಸಂಘಟಿಸಿ, ಅಕ್ಟೋಬರ್ 13 ರಿಂದ ಬೆಂಗಳೂರಿನ ವಿಧಾನ ಸೌಧದೆದುರು ಸುಮಾರು 30 ಸಾವಿರಕ್ಕೂ ಅಧಿಕ ರೈತರ ಹಾಗೂ ಕೂಲಿಕಾರರ ಬೃಹತ್ ಅನಿರ್ದಿಷ್ಟ ಅಹೋ ರಾತ್ರಿ ಧರಣಿ ಸತ್ಯಾಗ್ರಹವನ್ನು ಇತರೇ ಸಂಘ ಸಂಸ್ಥೆಗಳ ಜೊತೆ ಸೇರಿ ಸಂಘಟಿಸಲು ತಯಾರಿ ನಡೆಸಿವೆ. ಇದೇ ಸಂದರ್ಭದಲ್ಲಿ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಸಕಲೇಶಪುರಗಳನ್ನು ಇದೇ ವಿಚಾರದಲ್ಲಿ ಬಂದ್ ಮಾಡಿ ಪ್ರತಿಭಟನೆ ನಡೆಸಲಾಗಿದೆ. ಈಗ ಎಲ್ಲ ಬಂಡವಾಳ ಶಾಹಿ ಹಾಗೂ ಭೂಮಾಲಕ ರಾಜಕೀಯ ಪಕ್ಷಗಳು ಮುಖ್ಯವಾಗಿ, ಬಿಜೆಪಿ, ಕಾಂಗ್ರೆಸ್, ಮತ್ತು ಜೆಡಿ(ಎಸ್) ಪಕ್ಷಗಳು ಈ ಬಡವರ ಸಾಗೂ ಭೂಮಿಯ ಸಮಸ್ಯೆಗೆ ತಮ್ಮ ಅನುಕಂಪ ಮತ್ತು ಬೆಂಬಲವನ್ನು ವ್ಯಕ್ತ ಪಡಿಸುತ್ತಿವೆ. ಹೀಗೆ ಈ ಭೂಮಿಯ ಪ್ರಶ್ನೆ ರಾಜ್ಯದ ಮುಂಚೂಣಿಯ ಪ್ರಶ್ನೆಯಾಗಿ ಗಮನ ಸೆಳೆದಿದೆ.

ಬಗರ್ ಹುಕುಂ ಮತ್ತು ಅರಣ್ಯ ಭೂಮಿ ಬಡ ಸಾಗುದಾರರ ಹಿನ್ನೆಲೆ

ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕದಲ್ಲಿ ಲಕ್ಷಾಂತರ ಆದಿವಾಸಿ ಬುಡಕಟ್ಟು ಹಾಗೂ ಇತ–ರೇ ಬಡ ಕುಟುಂಬಗಳು ಈಗ ಅರಣ್ಯವೆನ್ನುವ



ಜಮೀನಿನಲ್ಲಿ ವಾಸಿಸುತ್ತಾ ಮತ್ತು ಸಾಗುವಳಿ ಮಾಡುತ್ತಾ ಬಂದಿವೆ. ಅದೇ ರೀತಿ, ಅಲ್ಲಿಯ ಅರಣ್ಯ ಸಂಪನ್ಮೂಲಗಳನ್ನು ಸಂಗ್ರಹಿಸಿ ಜೀವನ ನಡೆಸುತ್ತಾ ಅರಣ್ಯ ಸಂರಕ್ಷಣೆಯಲ್ಲಿ ತಮ್ಮದೇ ಪಾತ್ರವಹಿಸುತ್ತಾ ಬಂದಿವೆ. ಈಗಲೂ ಸುಮಾರು 2.5 ಲಕ್ಷ ಕುಟುಂಬಗಳು ಯಾವುದೇ ಹಕ್ಕುಪತ್ರವಿಲ್ಲದೇ, ಇವರು ವಾಸಿಸುವೆಡೆ ಕನಿಷ್ಟ ನಾಗರೀಕ ಸೌಲಭ್ಯಗಳಿಲ್ಲದೇ ಅಭದ್ರತೆಯಲ್ಲಿ ಬದುಕುತ್ತಿದ್ದಾರೆ. ಮಾತ್ರವಲ್ಲಾ, ಅರಣ್ಯ ಇಲಾಖೆಯ ದೌರ್ಜನ್ಯವನ್ನು ಎದುರಿಸುತ್ತಿದ್ದಾರೆ. ಕಸ್ತೂರಿ ರಂಗನ್ ವರದಿಯೆಂಬ ತೂಗು ಕತ್ತಿಯ ಕೆಳಗೆ ಆತಂಕದಲ್ಲಿದ್ದಾರೆ.

ಅದೇ ರೀತಿ, ಜೀವನ ನಿರ್ವಹಣೆಗೆ ಈ ಹಿಂದೆ ಸ್ವಾತಂತ್ರ್ಯ ಪೂರ್ವದಲ್ಲಿ, ರಾಜರುಗಳ ಸರ್ಕಾರದಿಂದ ಮತ್ತು ಸಮುದಾಯದಿಂದ ಯಾವುದೇ ಸಹಾಯ ಸಿಗದಿರುವಾಗ, ಅದೇ ರೀತಿ, ಅಂದಿನ ಬ್ರಿಟೀಷ್ ಭಾರತ ಜಾರಿಗೆ ಜಮೀನ್ದಾರಿ, ಜಹಗೀರ್ದಾರಿ, ತಾಲೂಕವಾರಿ ಪದ್ದತಿ ಜಾರಿಯಿಂದ ಬೀದಿಗೆ ಬಂದ ಲಕ್ಷಾಂತರ ಬಡ ಕುಟುಂಬಗಳು ಸರ್ಕಾರಿ ಬಂಜರು ಜಮೀನನ್ನು ಅಬಿವೃದ್ಧಿ ಪಡಿಸಿದ್ದಾರೆ ಮತ್ತು ಸ್ವಾತಂತ್ರ್ಯಾನಂತರ ಕರ್ನಾಟಕ ಸರ್ಕಾರದ ಭೂಸುಧಾರಣೆ ಕಾನೂನಿನಂತೆ ಭೂಮಿ ಸಿಗದೇ ಒಕ್ಕಲೆಬ್ಬಿಸಲ್ಪಟ್ಟ ದಶ ಲಕ್ಷಾಂತರ ಬಡ ಗೇಣಿದಾರರು ತಮ್ಮ ಜೀವನೋಪಾಯಕ್ಕಾಗಿ ಇದ್ದ ಗೇಣಿ ಭೂಮಿಯು ಕೈಬಿಟ್ಟು ಹೋದ ನಂತರ, ಸರ್ಕಾರ ತಮ್ಮ ಜೀವನವನ್ನು ಉದ್ದಾರ ಮಾಡುವುದೆಂದು ನಂಬದೇ, ತಾವು ತಮ್ಮ ಕುಟುಂಬದವರು ಸೇರಿ ಶ್ರಮವನ್ನು ಹಾಕಿ ದುಬಾರಿ ಬಡ್ಡಿ ಸಾಲದ ಬಂಡವಾಳ ಹೂಡಿ ದಶಲಕ್ಷಗಟ್ಟಲೆ ಎಕರೆ ಬಂಜರು ಜಮೀನನ್ನು ಕೃಷಿಯೊಗ್ಯ ಜಮೀನಾಗಿ ಅಭಿವೃದ್ಧಿ ಪಡಿಸಿದ್ದಾರೆ. ರಾಜ್ಯಕ್ಕೆ ಲಕ್ಷಾಂತರ ಟನ್ ಆಹಾರ ಧಾನ್ಯವನ್ನು ಬೆಳೆದು ಕೊಡುತ್ತಿದ್ದಾರೆ ಮತ್ತು ಆಮೂಲಕ ರಾಜ್ಯದ ಒಟ್ಟು ಆದಾಯಕ್ಕೆ ತಮ್ಮದೇ ಕಾಣಿಕೆಯನ್ನು ನೀಡುತ್ತಿದ್ದಾರೆ. ಇಂತಹ ಬಡ ರೈತರ ಸಂಖ್ಯೆ ಈಗಲೂ ಸುಮಾರು 20 ಲಕ್ಷಕ್ಕೂ ಹೆಚ್ಚಿದೆ.

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಮತ್ತಿತರೇ ಪ್ರಜಾಸತ್ತಾತ್ಮಕ ಸಂಘಗಳು ಮತ್ತು ಈ ಬಡ ಜನವಿಭಾಗಗಳು ನಿರಂತರವಾಗಿ ಹಕ್ಕು ಪತ್ರಗಳಿಗಾಗಿ, ಚಳುವಳಿ ಮಾಡುತ್ತ ಬಂದ ಪರಿಣಾಮವಾಗಿ, 1990 ಏಪ್ರಿಲ್ 14 ರ ಪೂರ್ವದಲ್ಲಿ ಸರ್ಕಾರಿ ಜಮೀನಿನಲ್ಲಿ ಸಾಗು ನಿರತ ಬಡವರಿಗೆ ಹಕ್ಕುಪತ್ರ ನೀಡಲು, ಕರ್ನಾಟಕ ಸರ್ಕಾರ ಪ್ರತಿ ತಾಲೂಕಿನಲ್ಲಿ ಶಾಸಕರ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸಿ, ದಂಡ ಹಾಕಿ ಇಂತಹ ಬಡವರಿಗೆ ಡಿ ವರ್ಗದ ಜಮೀನಾಗಿದ್ದಲ್ಲಿ ಕನಿಷ್ಠ 05 ಎಕರೆ, ಇತರೇ ವರ್ಗದ ಜಮೀನಾಗಿದ್ದಲ್ಲಿ ಅದಕ್ಕೆ ಸಮನಾದಷ್ಟು ಜಮೀನು ವಿತರಿಸಲು ಭೂ ಕಂದಾಯ ಕಾಯ್ದೆ 1964 ಕಲಂ 94ಕ್ಕೆ ತಿದ್ದುಪಡಿ ತಂದು ಕ್ರಮವಹಿಸಿತು. ಅರಣ್ಯವೆನ್ನಲಾದ ಭೂ ಸಾಗುದಾರರಿಗೆ ಮತ್ತು ಸಾರ್ವಜನಿಕ ಸೇವೆಯ ಪ್ರದೇಶದ ಜಮೀನುಗಳಿಗೆ ಹಕ್ಕುಪತ್ರ ಇದು ನಿರಾಕರಿಸಿತಲ್ಲದೇ, ಈ ಕಾಯ್ದೆಯು ಮಹಾನಗರಪಾಲಿಕೆ, ನಗರಸಭೆ, ಪುರ ಸಭೆ ಮುಂತಾದ ಪಟ್ಟಣ ವ್ಯಾಪ್ತಿಯ ಸುತ್ತ ಕ್ರಮವಾಗಿ 18, 10, 05 ಕಿ.ಮೀ. ವ್ಯಾಪ್ತಿಯೊಳಗಿನ ಬಡ ಸಾಗುದಾರರಿಗೆ ಮತ್ತು ಬಡ ವಸತಿದಾರರಿಗೆ ಹಕ್ಕು ನೀಡಲು ನಿರಾಕರಿಸಿತು.

ಆದಾಗ್ಯೂ ಈ ಸಮಿತಿಗಳಿಗೆ ಹಕ್ಕು ಪತ್ರ ಕೋರಿ ಆ ದಿನಗಳಲ್ಲಿ ಕಲಂ 94 (ಎ) ಮತ್ತು 94 (ಬಿ) ಯಡಿ ಡಿಸೆಂಬರ್ 2009 ರವರೆಗೆ ಒಟ್ಟು 21,84,913 ಅರ್ಜಿಗಳು ಫಾರಂ 50 ಹಾಗೂ 53ರ ಮೂಲಕ ಒಟ್ಟು 52,09,661 ಎಕರೆ ಜಮೀನಿನ ಹಕ್ಕಿಗಾಗಿ ಸಲ್ಲಿಸಲ್ಪಟ್ಟವು. ಬಹುತೇಕರಿಗೆ ಈ ಬಗ್ಗೆ ಸರಿಯಾದ ಮಾಹಿತಿ ಸಿಗದೇ ಅರ್ಜಿ ಸಲ್ಲಿಸಲು ಸಾಧ್ಯವಾಗದೆ ಇರುವುದು ನಂತರ ಕಂಡು ಬಂದಿದೆ. ಅವುಗಳಲ್ಲಿ ಈ ಅವಧಿಯಲ್ಲಿ ಕೇವಲ 5,20,680 ಅರ್ಜಿಗಳನ್ನು ಮಾತ್ರವೇ ಪರಿಗಣಿಸಿ, ಒಟ್ಟು 32 ಲಕ್ಷ ಎಕರೆ ಪ್ರದೇಶದ 13 ಲಕ್ಷ ಅರ್ಜಿಗಳನ್ನು ಸಮಿತಿಗಳು ತಿರಸ್ಕರಿಸಿವೆ. ಇದರಲ್ಲಿ ಒಂದಷ್ಟು ಶ್ರೀಮಂತರ ಅರ್ಜಿಗಳು ಇದೆಯೆಂಬುದು ನಿಜವೇ ಆದರೂ, ಬಹುತೇಕ ಬಡವರ ಅರ್ಜಿಗಳೇ ಆಗಿವೆ. ಇನ್ನೂ ಈಗಲೂ 10.5 ಲಕ್ಷ ಎಕರೆ ಪ್ರದೇಶದ 4.28 ಲಕ್ಷ ಅರ್ಜಿಗಳನ್ನು ವಿಲೇ ಮಾಡದೇ ಪೆಂ–ಡಿಂಗ್ ಇಡಲಾಗಿದೆ.

ಬಹುತೇಕ ಅರ್ಜಿಗಳನ್ನು ಅವರು ಸಾಗು ಮಾಡುತ್ತಿರುವ ಜಮೀನು ಹುಲ್ಲುಗಾವಲು, ಗೋಮಾಳ, ಈಚಲುವನ, ಕುದುರೆ ಕಾವಲು, ಗುಂಡು ತೋಪು, ಅಮೃತ ಮಹಲು, ಕೆರೆ, ಹಳ್ಳ, ನದಿ, ನಾಲೆ ಮುಂತಾದ ಸಾರ್ವಜನಿಕ ಸೇವಾ ವಲಯದವುಗಳೆಂದು ಮತ್ತು ಆಗಲೇ ಹೇಳಿದಂತೆ, ಕಂದಾಯ ಕಾಯ್ದೆ ಒಪ್ಪದ ನಗರ ಹಾಗೂ ಪಟ್ಟಣ ವ್ಯಾಪ್ತಿಯವುಗಳೆಂದು ಮತ್ತು ಈಗ ಅವು ಅರಣ್ಯ ಭೂಮಿಗಳೆಂದು ಅವೈಜ್ಞಾನಿಕವಾಗಿ ಮತ್ತು ಕೆಲ ಸಕ್ರಮ ಮಾಡುವ ಸಮಿತಿ ಸದಸ್ಯರಿಗೆ, ಲಂಚ ನೀಡಲಿಲ್ಲವೆಂದು ಹಾಗೂ ಕೆಲವುಗಳನ್ನು ರಾಜಕೀಯ ದ್ವೇಷದಿಂದಲೂ ತಿರಸ್ಕರಿಸಲಾಗಿದೆ.

ಈ ರೀತಿ ತಿರಸ್ಕರಿಸುವಾಗ ಪಹಣಿ ಅಥವಾ ಉತಾರೆಗಳಲ್ಲಿ ಸಾರ್ವಜನಿಕ ಸೇವೆಯ ಅಂಶವಿದೆಯೆಂಬುದನ್ನು ಬಹುತೇಕ ಗಮನಿಸಲಾಯಿತಲ್ಲದೇ, ವಾಸ್ತವಿಕ ಪರಿಸ್ಥಿತಿಯನ್ನು ಗಣತಿ ಮಾಡುವ ಮೂಲಕ ಗಮನಿಸದೇ ಹೋದುದು ತಿರಸ್ಕರಿಸಲ್ಪಡಲು ಒಂದು ಮುಖ್ಯವಾದ ಅಂಶವಾಗಿದೆ. ಮಾನವ ಸಮಾಜದ ಬೆಳವಣಿಗೆ ಹಾಗೂ ವಿಸ್ತಾರಗೊಂಡ ಚಟುವಟಿಕೆಗಳು ಮತ್ತು ಪ್ರಾಕೃತಿಕ ಕಾರಣಗಳಿಂದಾಗಿ ಅಲ್ಲೀಗ ವಾಸ್ತವದಲ್ಲಿ ಹಳ್ಳ ಹಾಗೂ ನಾಲೆಗಳಿಲ್ಲ. ಅವುಗಳು ತಮ್ಮ ಹರಿವನ್ನು ಬಹುತೇಕ ಬದಲಿಸಿಕೊಂಡಿವೆ. ಮಾತ್ರವಲ್ಲ, ಹಲವು ಕೆರೆಗಳು ನೀರಿನ ಹರಿವಿಲ್ಲದೇ ಬತ್ತಿ ಹೋಗಿವೆ. ಅಲ್ಲೆಲ್ಲಾ ಬದುಕಿಗಾಗಿ ಸಾಗು ನಿರತ ಬಡವರು, ಆ ಪ್ರದೇಶದ ಬಂಜರನ್ನು ತೆಗೆದು ಹಾಕಿ, ಕೃಷಿ ಯೋಗ್ಯ ಜಮೀನುಗಳಾಗಿ ಪರಿವರ್ತಿಸಿ ಕೊಂಡಿದ್ದಾರೆ. ಇಲ್ಲವೇ, ನಗರಗಳಲ್ಲಾದರೇ ವಾಸ ಸ್ಥಳಗಳನ್ನಾಗಿಸಿ ಕೊಂಡಿದ್ದಾರೆ ಅಥವಾ ಭೂ ಮಾಫಿಯ ಶಕ್ತಿಗಳ ಹಿಡಿತಕ್ಕೆ ಹೋಗಿವೆ. ಅಲ್ಲೀಗ ಸಾರ್ವಜನಿಕ ಸೇವೆಯ ಅಂಶಗಳು ಉಳಿದಿಲ್ಲಾ. ಅದೇ ರೀತಿ ಕುದುರೆ ಕಾವಲು ಮತ್ತು ಈಚಲುವನಗಳು ವಾಸ್ತವದಲ್ಲಿ ಅವು ಅಸ್ತಿತ್ವದಲ್ಲಿಲ್ಲ. ಬದಲಿಗೆ ಆ ಜಮೀನುಗಳು ಅಭಿವೃದ್ಧಿ ಹೊಂದಿವೆ.

ವಾಸ್ತವದಲ್ಲಿ ಗೋಮಾಳ, ಹುಲ್ಲುಗಾವಲು ಮತ್ತು ಹುಲ್ಲು ಬನ್ನಿಗಳು, ಅವುಗಳಾಗಿ ಅವು ಉಳಿದಿಲ್ಲ. ಬದಲಿಗೆ ಅವು ಕೃಷಿ ಯೋಗ್ಯ ಜಮೀನುಗಳಾಗಿ ಅಭಿವೃದ್ಧಿ ಹೊಂದಿವೆ. ಮತ್ತು ಅಲ್ಲಿ ಜಾನುವರು ಅಥವಾ ಪಶುಗಳು ಅಲ್ಲಿ ಮೇವು ಲಭ್ಯವಿಲ್ಲದೇ

ಅವುಗಳು ಬೇರೆಯದೇ ಪ್ರದೇಶಗಳನ್ನು ಆಯ್ಕೆ ಮಾಡಿ ಕೊಂಡಿವೆ. ಈಗಂತೂ ಬಹುತೇಕ ದಕ್ಷಿಣ ಹಾಗೂ ಮಧ್ಯ ಮತ್ತು ಕರಾವಳಿ ಕರ್ನಾಟಕದಲ್ಲಿ ದೇಶೀಯ ರಾಸುಗಳು ಇಲ್ಲವೆ ಇಲ್ಲವೆನ್ನುವಷ್ಟು ಕಡಿಮೆಯಾಗಿವೆ. ಸುಧಾರಿತ ಸೀಮೆ ಹಸುಗಳು ಹೈನುಗಾರಿಕೆಯ ಮೂಲವಾಗಿವೆ. ಅವುಗಳು ಹೊರಗೆ ಗೋಮಾಳಕ್ಕೆ ಹೋಗಿ ಮೇಯುವ ಸ್ಥಿತಿ ಇಲ್ಲ. ಉತ್ತರ ಕರ್ನಾಟಕದಲ್ಲಿ ಅಲ್ಪ ಸ್ವಲ್ಪ ದೇಶೀಯ ತಳಿ ಹಸು, ಎಮ್ಮೆ ಕುರಿ ಮೇಕೆಗಳಿವೆಯಾದರೂ ಅವುಗಳ ಸಂಖ್ಯೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ. ಇದಕ್ಕೆ ರೈತರಲ್ಲಿ ಹೈನುಗಾರಿಕೆ, ಪಶು ಸಾಕಾಣೆ ಹಾಗೂ ವ್ಯವಸಾಯದ ಮೇಲಿನ ವಿಶ್ವಾಸ ಕಳೆದು ಹೋಗುತ್ತಿರುವುದೇ ಮುಖ್ಯ ಕಾರಣವಾಗಿದೆ. ಹೀಗಾಗಿ ಪ್ರತಿ 100 ದನಗಳಿಗೆ ಕನಿಷ್ಠ 30 ಎಕರೆ ಗೋಮಾಳವಿರಬೇಕೆಂಬ ಕಾನೂನು ಬದಲಾದ ಸನ್ನಿವೇಶದಲ್ಲಿ ಬದಲಾಗದೆ ಹೋದುದರಿಂದ ಬಹುತೇಕ ಬಡವರ ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ.

ಹಾಗೆಯೇ ಈ ಹಿಂದೆ 1980 ರದಶಕದಲ್ಲಿ ಕಂದಾಯ ಇಲಾಖೆಯ ಅದೀನದಲ್ಲಿದ್ದ ಬಂಜರು ಜಮೀನುಗಳನ್ನು ಅರಣ್ಯ ಇಲಾಖೆಗೆ ಏಕಾಏಕಿ ವರ್ಗಾಯಿಸಲಾಗಿತ್ತು. ಆ ರೀತಿ ವರ್ಗಾಯಿಸುವಾಗಲೂ ಕೇವಲ ಪಹಣಿ ಅಥವಾ ಉತಾರೆಯ ಆಧಾರದಲ್ಲಿ ವರ್ಗಾಯಿಸಲಾಗಿತ್ತೇ ವಿನಃ ವಾಸ್ತವಿಕವಾಗಿ ಆ ಜಮೀನುಗಳನ್ನು ಗಣತಿ ಅಥವಾ ಸರ್ವೇ ಮಾಡಿ ಸೂಕ್ತ ರೀತಿಯ ದಾಖಲಾತಿಯನ್ನು ಪಹಣಿಗಳಲ್ಲಿ ಸೇರ್ಪಡೆ ಮಾಡಿ ವರ್ಗಾಯಿಸಿರಲಿಲ್ಲ. ಹೀಗಾಗಿ ಅಂತಹ ಬಂಜರು ಜಮೀನನ್ನು ಅಭಿವೃದ್ಧಿ ಪಡಿಸಿದ ಬಡವರಿಗೆ, ಈಗದು ಅರಣ್ಯವೆಂದು ತಿರಸ್ಕರಿಸಲಾಗಿದೆ. ಮಾತ್ರವಲ್ಲಾ, ಅರಣ್ಯ ಇಲಾಖೆಯು ಈ ಬಡವರ ಮೇಲೆ ಜಮೀನು ತ್ಯಜಿಸುವಂತೆ ಒತ್ತಡ ಹೇರಿದೆ. ಬಿಡಲು ನಿರಾಕರಿಸಿದವರ ಮೇಲೆ ದೈಹಿಕ ಹಲ್ಲೆಗೆ ಮುಂದಾಗುತ್ತಿದೆ ಮತ್ತು ಹಲವರ ಮೇಲೆ ಕ್ರಿಮಿನಲ್ ಕೇಸುಗಳನ್ನು ದಾಖಲಿಸಿ ಜೈಲಿಗೆ ಕಳುಹಿಸಿದೆಯಲ್ಲದೇ ಕೋರ್ಟ್‌ಗೆ ಹಾಗೂ ಪೋಲೀಸ್ ಠಾಣೆಗಳಿಗೆ ಅಲೆಯಿಸಿ ಬೆದರಿಸುತ್ತಿದೆ. ಬೇಸತ್ತು ಮತ್ತು ಹೆದರಿ ಹಲವು ಬಡವರು ಅಲ್ಲಿಂದ ಕಾಲ್ತೆಗೆದರೆ, ಇನ್ನು ಪ್ರತಿರೋಧ ಒಡ್ಡಿದವರ ಜಮೀನುಗಳಲ್ಲಿ ಮಳೆಗಾಲದ ಸಂದರ್ಭದಲ್ಲಿ, ಮುಳ್ಳಿನ ಬೀಜಗಳನ್ನು ಎರಚಿ ಬೆಳೆ ಬೆಳೆಯದಂತೆ ಇಲಾಖೆ ಪ್ರತಿರೋಧ ಒಡ್ಡಿದೆ. ಆಗಲೂ ಸಂಘಟಿತರಾಗಿ ಹೋರಾಟವನ್ನು, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತಿತರೇ ಸಂಘಗಳ ನೇತೃತ್ವದಲ್ಲಿ ಮುಂದುವರೆಸಿದಲ್ಲಿ, ಗುಂಡು ಹಾರಿಸಿ ಕೊಲ್ಲುವ ಬೆದರಿಕೆಯನು ಹಾಕಿದ, ದೈಹಿಕ ಹಲ್ಲೆ ನಡೆಸಿದ ಮತ್ತು ಸ್ಥಳೀಯ ಪಟ್ಟ ಭದ್ರರ ಜೊತೆ ಸೇರಿ ಪ್ರಾಣ ಬೆದರಿಕೆ ಒಡ್ಡಿದ ಪ್ರಕರಣಗಳು ಬೆಳಕಿಗೆ ಬಂದಿವೆ.


ಈ ಹಿಂದಿನ ಭೂಮಿ ಹೋರಾಟದ ಚಿತ್ರ

ದೇಶದ ಜನತೆ ಹಾಗೂ ಅರಣ್ಯವಾಸಿಗಳ ಹೋರಾಟದ ಪರಿಣಾಮವಾಗಿ, 'ಅರಣ್ಯ ಹಕ್ಕು ಮಾನ್ಯತ ಕಾಯ್ದೆ – 2006' ಜಾರಿಗೆ ಬಂದು, ಕೆಲ ಅನುಸೂಚಿತ ಜಾತಿ ಹಾಗೂ ಪಂಗಡಗಳ ಬುಡಕಟ್ಟು ಜನರಿಗೆ ನೆರವಾಗಿದೆಯಾದರೂ, ಇತ–ರೇ ಪಾರಂಪರಿಕ ಅರಣ್ಯವಾಸಿಗಳಿಗೆ ಮೂರು ತಲೆ ಮಾರಿನ ಅಂದರೆ 75 ವರ್ಷಗಳ ಅನುಭವದ ದಾಖಲಾತಿ ಇದ್ದರೇ ಮಾತ್ರ, ಮಾನ್ಯತೆ ನೀಡಲಾಗುವುದೆಂಬುದು ಮತ್ತು ಪರಿಸರ ಜೈವಿಕ ಸೂಕ್ಷ್ಮ ವಲಯದ ಸಂರಕ್ಷಣೆಯ ಹೆಸರಿನಲ್ಲಿ ಪರಿಸರ ಸ್ನೇಹಿ ಅಭಿವೃದ್ಧಿಯನ್ನು ನಿರಾಕರಿಸುವ ಕಸ್ತೂರಿ ರಂಗನ್ ವರದಿ ಜಾರಿಯು, ಇವರೆನ್ನೆಲ್ಲಾ ಆತಂಕಿತರನ್ನಾಗಿಸಿದೆ.

ವಿಶೇಷವೆಂದರೇ, ಈ ಎಲ್ಲಾ ಕಾನೂನು ಮತ್ತು ಅಂಶಗಳು ಈ ಬಡ ಸಾಗುದಾರರಿಗೆ ಮಾತ್ರವೇ ಅಡ್ಡಿಯಾಗಿ ಬಂದಿವೆಯೆಂಬುದು. ಇದು ವಿಷಾದನೀಯ! ಈ ಎಲ್ಲಾ ಕಾನೂನು ಮತ್ತು ಪರಿಸರದ ಮತ್ತು ಸಾರ್ವಜನಿಕ ಸೇವೆಯ ಅಂಶಗಳನ್ನು ಗಾಳಿಗೆ ತೂರಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ, ದೊಡ್ಡ ದೊಡ್ಡ ಕಂಪೆನಿಗಳಿಗೆ, ಗಣಿ ಮತ್ತು ಭೂ ಮಾಫಿಯಾಗಳಿಗೆ ಜಮೀನುಗಳನ್ನು ದೊಡ್ಡ ಸಂಖ್ಯೆಯಲ್ಲಿ ಈ ಒಂದೆರಡು ದಶಕದಲ್ಲಿ ಬಂದು ಹೋದ ರಾಜ್ಯ ಸರ್ಕಾರಗಳೆ ನೀಡಿವೆ. ಉದಾ: ನೈಸ್ ಸಂಸ್ಥೆ, ಬೆಂಗಳೂರು ಫೆರಿಫೆರಲ್ ರಸ್ತೆಗಾಗಿ ಸುಮಾರು ನಗರ ಜಿಲ್ಲೆಯ 20 ಕೆರೆ ಒತ್ತುವರಿ ಮಾಡಿದೆ ಮತ್ತು ಸುಮಾರು 5,000ಕ್ಕೂ ಅಧಿಕ ಎಕರೆ ಬಡವರು ಅಭಿವೃದ್ಧಿಪಡಿಸಿದ ಜಮೀನನ್ನು ಸರ್ಕಾರಿ ಜಮೀನೆಂದು ಹೆಚ್ಚು ಕಡಿಮೆ ಉಚಿತವಾಗಿ ಪಡೆದಿದೆ. ಅದೇ ರೀತಿ ಜಿಂದಾಲ್, ಮಿಥ್ತಲ್, ಉತ್ತಮಗಾಲ್ವ ಮುಂತಾದ ಕಂಪೆನಿಗಳಿಗೆ ಸಾವಿರಾರು ಎಕರೆ ಬಡವರು ಅಭಿವೃದ್ಧಿ ಪಡಿಸಿದ

ಪುಟ 10 ಕ್ಕೆ

ಬಡವರ ಭೂಮಿ ಹಕ್ಕಿಗಾಗಿ ಮೈಸೂರಿನಿಂದ ಬೆಂಗಳೂರಿಗೆ ಹೊರಟ ರೈತರ ಪಾದಯಾತ್ರೆ

ಮನೆ ನಿವೇಶನಕ್ಕಾಗಿ, ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ, ರೈತರ ಭೂಮಿಯ ಬಲವಂತದ ಭೂಸ್ವಾಧೀನ ಹಾಗೂ ಮೋಸದ ಭೂ ಬೆಲೆ ನಿಗದಿ ನೀತಿ ವಿರೋಧಿಸಿ, ಬಡವರನ್ನು ಒಕ್ಕಲೆಬ್ಬಿಸುವುದನ್ನು ತಡೆಯಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಮೈಸೂರಿನಿಂದ ಬೆಂಗಳೂರಿಗೆ ರೈತರ ಪಾದಯಾತ್ರೆ ಯೊಂದು ಹೊರಟಿದ್ದು ಅದು ಅಕ್ಟೋಬರ್ 7 ರಂದು ಉದ್ಘಾಟನೆಗೊಂಡಿದೆ. ಒಂದು ವರದಿ.



ವರದಿ : ಜಗದೀಶ್ ಸೂರ್ಯ

ದಸರಾ ಮುಗಿಸಿ ಆಗತಾನೆ ಅದರ ಗುಂಗಿನಿಂದ ಹೊರ ಬರುತ್ತಿದ್ದ ಮೈಸೂರು ರೈತರ ಬದುಕಿನ ಒಂದು ಮಹತ್ವದ ಪ್ರಶ್ನೆಯ ಕುರಿತಾದ ಹೋರಾಟಕ್ಕೆ ಸಾಕ್ಷಿಯಾಗಿದ್ದು ಅಕ್ಟೋಬರ್ 7, 2014ರಂದು.

ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಿ ಹಕ್ಕು ಪತ್ರ ನೀಡಬೇಕು. ಬಡ ರೈತರನ್ನು ಒಕ್ಕಲೆಬ್ಬಿಸುವುದನ್ನು ತಡೆಯಬೇಕು. ಬಲವಂತದ ಭೂಸ್ವಾಧೀನ ಮತ್ತು ಅವೈಜ್ಞಾನಿಕ ಭೂ ಬೆಲೆ ನಿಗದಿ ತಡೆಯಬೇಕು. ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ, ಮನೆ, ನಿವೇಶನ ನೀಡಬೇಕು. ವಶಪಡಿಸಿಕೊಂಡ ಭೂಮಿಯನ್ನು ಕಂಪನಿಗಳಿಗೆ ಮಾರಾಟ ಮಾಡಬಾರದು ಹಾಗೂ ನೈಸ್ ರಸ್ತೆಯಲ್ಲಿನ ಅವ್ಯವಹಾರ ತಡೆಯಲು ಒತ್ತಾಯಿಸಿ ಮೈಸೂರಿನ ಅರಮನೆ ಆವರಣದ ಕೋಟೆ ಆಂಜನೇಯ ದೇವಸ್ಥಾನದಿಂದ ಬೆಂಗಳೂರಿನವರೆಗಿನ ಪಾದಯಾತ್ರೆ ಆರಂಭಗೊಂಡಿತು.

ಕರ್ನಾಟಕ ಪ್ರಾಂತ ರೈತ ಸಂಘ ಹಮ್ಮಿಕೊಂಡಿರುವ ಈ ಪಾದಯಾತ್ರೆಯನ್ನು ಸಂಘಟನೆಯ ರಾಜ್ಯ ಉಪಾಧ್ಯಕ್ಷರು, ಮಾಜಿ ಶಾಸಕರೂ ಆದ ಜಿ.ವಿ. ಶ್ರೀರಾಮ ರೆಡ್ಡಿ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಸರ್ಕಾರಿ ಭೂಮಿಯಲ್ಲಿ ಸಾಗುವಳಿ ನಿರತ 11 ಲಕ್ಷ ಬಡ ರೈತರನ್ನು ತೆರವುಗೊಳಿಸುವುದಾಗಿ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರವನ್ನು ವಾಪಾಸು ಪಡೆಯಬೇಕು. ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ಬಡವರಿಗೆ ಹಕ್ಕು ಪತ್ರ ನೀಡಬೇಕು. ಬಡ ಸಾಗುವಳಿದಾರರನ್ನು ಬೆದರಿಸುವ, ಬಲಾತ್ಕಾರದಿಂದ ಒಕ್ಕಲೆಬ್ಬಿಸುವ ಪ್ರಯತ್ನಗಳನ್ನು ಕೈಬಿಡಬೇಕೆಂದು ಒತ್ತಾಯಿಸಿದ ಅವರು ಭೂಗಳ್ಳರು ಮತ್ತು ಬಡ ಬಗರ್‌ಹುಕುಂ ಸಾಗುವಳಿದಾರರನ್ನು ಒಂದೇ ಎಂದು 2007–ರಲ್ಲಿ ಕುಮಾರಸ್ವಾಮಿ ನೇತೃತ್ವದ ರಾಜ್ಯ ಸರ್ಕಾರ ಕಾಯಿದೆಯನ್ನು ಜಾರಿ ಮಾಡಿರುವುದರಿಂದ ಬಡ ಸಾಗುವಳಿದಾರರಿಗೆ ಅನ್ಯಾಯವಾಗಿದೆ. ಬಾಲಸುಬ್ರಹ್ಮಣ್ಯಂ ಸಮಿತಿ ವರದಿ ಪ್ರಕಾರ 13.40 ಲಕ್ಷ ಎಕರೆ ಸರ್ಕಾರಿ ಭೂಮಿ ಒತ್ತುವರಿ ಮಾಡಲಾಗಿದೆ ಎಂದು ಹೇಳಲಾಗಿದ್ದು, ಇದರಲ್ಲಿ ಬಡ ರೈತರನ್ನು ಭೂಗಳ್ಳರ ಸಾಲಿಗೆ ಸೇರಿಸಲಾಗಿದೆ. ಇದರಿಂದ ಲಕ್ಷಾಂತರ ಬಡ ಕುಟುಂಬಗಳು ಬೀದಿ ಪಾಲಾಗುತ್ತವೆ ಎಂದರು. ನಿವೇಶನಕ್ಕಾಗಿ 26 ಲಕ್ಷ ಬಡವರು ಅರ್ಜಿ ಸಲ್ಲಿಸಿದ್ದರು. ಆದರೆ ಇವುಗಳ ವಿಲೆವಾರಿಗೆ ಸರ್ಕಾರ ಗಮನ ಹರಿಸುತ್ತಿಲ್ಲ. ಆದ್ದ–ರಿಂದ ನಿವೇಶನ ರಹಿತರಿಗೆ ಮನೆ ಹೊಂದಲು ನಿವೇಶನ ನೀಡಬೇಕು ಎಂದು ಒತ್ತಾಯಿಸಿದರು. ನೈಸ್ ಕಂಪನಿ ರಸ್ತೆ ನಿರ್ಮಾಣದಲ್ಲಿ ಸುಮಾರು 2 ಲಕ್ಷ ಕೋಟಿ ರೂಪಾಯಿಗಳಷ್ಟು ದೊಡ್ಡ ಅವ್ಯವಹಾರ ನಡೆದಿದೆ. ನೈಸ್ ಕಂಪನಿ ಮೂಲ ಒಪ್ಪಂದವನ್ನು ಉಲ್ಲಂಘಿಸಿ ಸರ್ಕಾರಿ ಭೂಮಿಯನ್ನು ಕಬಳಿಕೆ ಮಾಡಿದೆ. ಈಗಾಗಲೇ ವಶಪಡಿಸಿಕೊಂಡಿರುವ ಭೂಮಿಯನ್ನು ಖಾಸಗಿ ಕಂಪನಿಗಳಿಗೆ ಮಾರಾಟ ಮಾಡುವ ಹುನ್ನಾರ ನಡೆಸುತ್ತಿದೆ. ಬೆಂಗಳೂರು ಸುತ್ತಮುತ್ತ ಇರುವ ಹಲವಾರು ಪೋಲಿಸ್ ಠಾಣೆಗಳು 'ಖೇಣಿ ಠಾಣೆ'ಗಳಂತಾಗಿದ್ದು ಪೋಲಿಸರು ರೈತರ ಮೇಲೆ ಬಲವಂತ ಮಾಡಿ ಭೂಮಿ ಹೊಡೆಯುವ ಯತ್ನ ಮಾಡುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಪ್ರಭಾವಿಗಳ ಭೂಮಿಯನ್ನು ಉಳಿಸುವ ಸಲುವಾಗಿ 7 ಸಾವಿರ ಎಕರೆ ಸರ್ಕಾರಿ ಭೂಮಿಯನ್ನು ಖೇಣಿಗೆ ನೀಡಲಾಗಿದೆ ರಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮಾತನಾಡಿ ಹಿಂದಿನ ಸರ್ಕಾರಗಳು ಬಡ ರೈತರಿಗೆ ಭೂಮಿ ನೀಡಲು ಕ್ರಮಕೈಗೊಂಡಿಲ್ಲ. ಆದರೆ ತಾನು ಅಧಿಕಾರಕ್ಕೆ ಬಂದ ಮೇಲೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರೈತರಿಗೆ ಭೂಮಿ ಹಕ್ಕು ನೀಡದೆ ರೈತರನ್ನು ಒಕ್ಕಲೆಬ್ಬಿಸಲು ಹೊರಟಿದೆ. ಆದ್ದರಿಂದ ಅಕ್ಟೋಬರ್ 13 ರಿಂದ ಬೆಂಗಳೂರಿನಲ್ಲಿ ಅನಿರ್ಧಿಷ್ಟಾವದಿ ಧರಣಿ ಹಮ್ಮಿಕೊಳ್ಳಲಾಗಿದೆ ಎಂದರು. ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜು ನೈಸ್ ಭೂಸ್ವಾಧೀನದ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷರಾದ ವೆಂಕಟಾಚಲಯ್ಯ, ಸಿಐಟಿಯು ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ. ಜಯರಾಂ, ರಾಜ್ಯ ರೈತ ಸಂಘ ಮುಂಖಂಡರಾದ ಮೇಳಾಪುರ ಸ್ವಾಮಿಗೌಡ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕರಾದ ಕೆ. ಬಸವರಾಜು ವಹಿಸಿದ್ದರು. ಕೆಪಿಆರ್ ಮುಖಂಡ ಶಂಕರ್ ಸ್ವಾಗತಿಸಿ, ಜಿಲ್ಲಾ ಸಹ ಸಂಚಾಲಕ ಜಗದೀಶ್ ಸೂರ್ಯ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸುಮಾರು 400ಕ್ಕೂ ಹೆಚ್ಚು ರೈತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಎರಡು ದಿನಗಳ ವಾಹನ ಪ್ರಚಾರ ಜಾಥಾ ಹಮ್ಮಿಕೊಳ್ಳಲಾಗಿತ್ತು. ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಾಂ. ಮಾರುತಿ ಮಾನ್ಪಡೆ ಅವರ ನೇತೃತ್ವದಲ್ಲಿ ಹೊರಟ ಪಾದಯಾತ್ರೆ ಯು ದೊಡ್ಡ ಗಡಿಯಾರ, ಆಶೋಕ ರಸ್ತೆ, ಸೆಂಟ್‌ಫಿಲೋಮಿನ ಚರ್ಚ್, ವಿಮಾ ವಿಭಾಗಿಯ ಕಛೇರಿ, ರಿಂಗ್ ರೋಡ್ ಮೂಲಕ ಬೆಂಗಳೂರಿಗೆ ತೆರಳಿತು. ವಿಮಾ ನಿಗಮ ನೌಕರ ಸಂಘಟನೆಯಿಂದ ಪಾದಯಾತ್ರೆಗೆ ಸ್ವಾಗತ ಕೋರಿ, ಶುಭಾಷಯ ಸಲ್ಲಿಸಲಾಯಿತು. ನಂತರ ಸಿದ್ದಲಿಂಗ ಪುರದಲ್ಲಿ ಗ್ರಾಮ ಪಂಚಾಯ್ತಿ ನೌಕರರ ಸಂಘಟನೆಯಿಂದ ಸ್ವಾಗತ ಕೋರಲಾಯಿತು. ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಪಾದಯಾತ್ರೆಯಲ್ಲಿ ರೈತರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಗರ್ ಹುಕುಂ......

ಪುಟ 9 ರಿಂದ

ಮತ್ತು ಸಾರ್ವಜನಿಕ ಸೇವೆಗೆಂದಿದ್ದ ಜಮೀನನ್ನು ಪುಕ್ಕಟೆಯಾಗಿ ಒತ್ತುವರಿ ಮಾಡಲು ಬಿಡಲಾಗಿದೆ ಅಥವಾ ಹೆಚ್ಚು ಕಡಿಮೆ ಉಚಿತವಾಗಿ ನೀಡಲಾಗಿದೆ. ಎಲ್ಲರಿಗೂ ಗೊತ್ತಿರುವಂತೆ ರೆಡ್ಡಿಯವರ 'ಬಳ್ಳಾರಿ ರಿಪಬ್ಲಿಕ್' ಕಾಲದಲ್ಲಿ ಹತ್ತಾರು ಸಾವಿರ ಎಕರೆ ಅರಣ್ಯವನ್ನು ಲುಟಿಕೋರ ಮಾಫಿಯಾ ಗಣಿಗಾರಿ–ಕೆ, ಹಾಡು ಹಗಲಲ್ಲೆ ನುಂಗಿರುವುದನ್ನು ಮತ್ತು ಇಡೀ ಜಿಲ್ಲೆಯ ಪರಿಸರ ಹಾಳು ಮಾಡಿರುವುದನ್ನು ಗಮನಿಸಿದ್ದೇವೆ. ಈಗ ಬಡವರ ಮೇಲೆ ಪ್ರತಾಪವನ್ನು ತೋರುವ ಅರಣ್ಯ ಇಲಾಖೆ ಗಣಿಗಳ್ಳರ ಮುಂದೆ ತೆಪ್ಪಗಿದ್ದಿತು. ಅದೇ ರೀತಿ ದೊಡ್ಡ ಪ್ಲಾಂಟೇಷನ್ ಮಾಲೀಕರು ದೊಡ್ಡ ರೀತಿಯಲ್ಲಿ ಒತ್ತುವರಿ ಮಾಡಲು ಬಿಡಲಾಗಿದೆ.

ಈ ಬಡ ಜನಗಳ ಬೀದಿಗೆ ದೂಡಿದ ಕಾರಣಗಳೇನು ?

ಸಾಕಷ್ಟು ಆದಾಯ ಮತ್ತು ಆಸ್ತಿಪಾಸ್ತಿಯನ್ನು ಹೊಂದಿದ್ದ ಮತ್ತು ಇನ್ನಷ್ಟು ದೊಡ್ಡ ರೀತಿಯಲ್ಲಿ ಆದಾಯ ಮತ್ತು ಆಸ್ತಿಪಾಸ್ತಿಯನ್ನು ಹೊಂದುವ ದುರುದ್ದೇಶದಿಂದ ಸರ್ಕಾರಿ ಹಾಗೂ ಸಾರ್ವಜನಿಕ ಜಮೀನುಗಳ ಭೂಕಬಳಿಕೆಯನ್ನು ಇದೇ ಸಂದರ್ಭದಲ್ಲಿ, ಬೆಂಗಳೂರು ನಗರವೂ ಸೇರಿದಂತೆ ರಾಜ್ಯದಾದ್ಯಂತ ಹಲವು ನಗರಗಳಲ್ಲಿ ಮಾಡಲಾಗಿತ್ತು. ಒಂದೆಡೆ, ಬಡವರು ಅನಧಿಕೃತ ಸಾಗುವಳಿಯಲ್ಲಿ ತೊಡಗಿ ರಾಜ್ಯದ ಆಹಾರ ಧಾನ್ಯದ ಉತ್ಪಾದನೆಯಲ್ಲಿ ತೊಡಗಿದ್ದರೇ, ಮತ್ತೊಂದೆಡೆ, ತಮ್ಮ ತೋಳ್ಬಲ ಹಾಗೂ ಅಧಿಕಾರ ಬಲ ಮತ್ತು ಅಧಿಕಾರಿಗಳ ಶಾಮೀಲಾತಿಯೊಂದಿಗೆ ಭೂಕಬಳಿಕೆ ಶಕ್ತಿಯು ಸಾವಿರಾರು ಎಕರೆ ಜಮೀನನ್ನು ಸ್ವಂತ ಹಾಗೂ ಬೇನಾಮಿ ಹೆಸರಿನಲ್ಲಿ ಕಬಳಿಸಿ, ರಿಯಲ್ ಎಸ್ಟೇಟ್ ಹಾಗೂ ಅಪಾರ್ಟ್‌ಮೆಂಟ್ ದಂಧೆಯಲ್ಲಿ ತೊಡಗಿ ಮಾಫಿಯ ಶಕ್ತಿಯಾಗಿ ಅಟ್ಟಹಾಸ ಮೆರೆದು ಸರ್ಕಾರಕ್ಕೆ ಸೆಡ್ಡು ಹೊಡೆಯುತ್ತಿತ್ತು. ಈ ರೀತಿಯಲ್ಲಿ ಭೂ ಕಬಳಿಕೆ ಮಾಡಿ ಸವಾಲಾಗಿರುವುದನ್ನು ಗುರುತಿಸಲು ಮತ್ತು ಅಂತಹ ಭೂಗಳ್ಳತನಕ್ಕೆ ತುತ್ತಾದ ಜಮೀನುಗಳನ್ನು ಸರ್ಕಾರ ವಾಪಾಸು ಪಡೆಯಲು, 2005ರ ವಿಧಾನ ಸಭಾ ಅಧಿವೇಶನದಲ್ಲಿ ಸಿಪಿಐ(ಎಂ) ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರು ಒತ್ತಾಯಿಸಿದ ಚರ್ಚೆಯ ಭಾಗವಾಗಿ, ಮೊದಲಿಗೆ ಬೆಂಗಳೂರು ನಗರದ ಭೂಗಳ್ಳತನವನ್ನು ಗುರುತಿಸಲು, ಶಾಸಕರಾದ ಎ.ಟಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸದನ ಸಮಿತಿಯನ್ನು ರಚಿಸಲಾಯಿತು. ಸದನ ಸಮಿತಿಯು, ವರ್ಷವಿಡೀ ಬೆಂಗಳೂರು ನಗರವನ್ನು ಜಾಲಾಡಿ ಸುಮಾರು ಆ ದಿನಗಳ ಮೌಲ್ಯದಲ್ಲಿ ಸುಮಾರು. ಸಹಸ್ರಾರು ಕೋಟಿ ರೂ. ಬೆಲೆ ಬಾಳುವ ಸುಮಾರು 41,000 ಎಕರೆ ಭೂಮಿ ಭೂ ಮಾಫಿಯಗಳಿಂದ ಭೂಗಳ್ಳತನವಾಗಿದೆಯೆಂಬ ವರದಿಯನ್ನು ನೀಡಿತು. ಇದರಲ್ಲಿದ್ದುದೆಲ್ಲಾ ಬಹುತೇಕ ದೊಡ್ಡ ದೊಡ್ಡ ಭೂಮಾಫಿಯಾಗಳೇ ಆಗಿದ್ದರು. ರಾಜಕೀಯ ನಂಟನ್ನು ಹೊಂದಿದವರಿದ್ದರು. ಅಂದಿನ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ಮತ್ತು ಯಡಿಯೂರಪ್ಪನವರು ಉಪ ಮುಖ್ಯ ಮಂತ್ರಿಯಾಗಿದ್ದ ಜೆಡಿ(ಎಸ್)– ಬಿಜೆಪಿಯ ಜಂಟಿ ಸರ್ಕಾರ, ಇವರ ಮೇಲೆ ಕಠಿಣ ಕ್ರಮ ಕೈಗೊಂಡು ಸರಕಾರಿ ಜಮೀನನ್ನು ಸಂಪೂರ್ಣವಾಗಿ ಮರಳಿ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಿತ್ತು. ಆದರೆ ಈ ವಿಷಯದಲ್ಲಿ ಕಂಡ ಆರಂಭ ಶೂರತ್ವ ನಂತರದ ದಿನಗಳಲ್ಲಿ ಇರಲಿಲ್ಲ. ಬದಲಿಗೆ, ಈ ಜಂಟಿ ಸರ್ಕಾರ ಹೊಟ್ಟೆ ಪಾಡಿಗಾಗಿ ಮತ್ತು ಆ ಮೂಲಕ ರಾಜ್ಯದ ಆಹಾರದ ಉತ್ಪಾದನೆಯ ಹೆಚ್ಚಳಕ್ಕೆ ನೆರವಾಗುತ್ತಿದ್ದ, ಸಣ್ಣ ಸಣ್ಣ ಸಾಗುವಳಿದಾರರನ್ನು ಭೂ ಕಬಳಿಕೆದಾರರ ಸಾಲಿಗೆ ಸೇರಿಸಿದ್ದು ಪ್ರಶ್ನಾರ್ಹವಾಗಿದೆ ಮತ್ತು ಸದನ ಸಮಿತಿ ವರದಿಯನ್ನು ಜಾರಿಗೆ ತರಲು ಈ ಬಡಜನ ವಿಭಾಗದಿಂದ ಪ್ರತಿರೋ ಧ ಬರುವಂತೆ, ಆ ಮೂಲಕ ಭೂಕಬಳಿಕೆದಾರರಿಗೆ ರಕ್ಷಣೆ ಸಿಗುವಂತೆ ಕ್ರಮ ವಹಿಸಿದ್ದು ಎಲ್ಲವೂ, ಸರ್ಕಾರದ ದುರುದ್ದೇಶವನ್ನು ಬಯಲಿಗಿಡುತ್ತದೆ. ಇದಕ್ಕಾಗಿ ಇಂತಹವರನ್ನು ದಂಡಿಸಲು 2007 ರಲ್ಲಿ ಭೂ ಕಂದಾಯ ಕಾಯ್ದೆ ಕಲಂ 192 (ಎ) ಗೆ ತಿದ್ದುಪಡಿ ತರಲಾಯಿತಲ್ಲದೇ, ಕರ್ನಾಟಕ ಭೂ ಕಬಳಿಕೆ (ನಿಷೇಧ) ಮಸೂದೆ – 2007 ನ್ನು ಅಂಗೀಕರಿಸಿತು. ಸಿಪಿಐ(ಎಂ) ಪಕ್ಷದ ಶಾಸಕರು ಹಾಗೂ ಸದನ ಸಮಿತಿಯ ಸದಸ್ಯರು ಆಗಿದ್ದ ಜಿ.ವಿ. ಶ್ರೀರಾಮರೆಡ್ಡಿಯವರು ಬಡ ಸಾಗುದಾರರನ್ನು ಭೂ ಮಾಫಿಯಾ ಶಕ್ತಿಗಳಿಗಿಂತ ಭಿನ್ನವಾಗಿ ನೋಡಬೇಕೆಂದು ಮತ್ತು ಈ ತಿದ್ದುಪಡಿ ಹಾಗೂ ಈ ಹೊಸ ಮಸೂದೆಗಳು ಬಡ ಸಾಗುದಾರರನ್ನು ಭೂಕಬಳಿಕೆದಾರರ ಸಾಲಿನಲ್ಲಿ ನಿಲ್ಲಿಸುವ ಮೂಲಕ ಅವರಿಗೆ ಮಾರಕವಾಗಲಿದೆಯೆಂದು ಸದನದಲ್ಲಿ ಧ್ವನಿ ಎತ್ತಿದರಾದರೂ, ಅವರದು ಬಹುತೇಕ ಒಂಟಿ ದನಿಯಾಗಿತ್ತು. ವಿರೋಧಿ ಸ್ಥಾನದಲ್ಲಿದ್ದ ಕಾಂಗ್ರೆಸ್ ಮತ್ತು ಸಿದ್ದರಾಮಯ್ಯನವರು ಮೌನ ಸಮ್ಮತಿ ನೀಡಿದರು. ಅದೇ ರೀತಿ ಮುಂದೆ ಸ್ವತಂತ್ರವಾಗಿ ಅದಿಕಾರಕ್ಕೆ ಬಂದ ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಈಗಾಗಲೇ ಸದನ



ಸಮಿತಿ ಗುರುತಿಸಿದ ವರದಿಯಂತೆ ಬೆಂಗಳೂರು ನಗರದ ಭೂ ಮಾಫಿಯಾ ಶಕ್ತಿಗಳ ಮೇಲೆ ಧೃಡವಾದ ಕ್ರಮ ಕೈಗೊಳ್ಳುವ ಬದಲು 2009 ರಲ್ಲಿ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯಂ ನೇತೃತ್ವದಲ್ಲಿ ಕಾರ್ಯಪಡೆ ರಚಿಸಿ ರಾಜ್ಯದಾದ್ಯಂತ ಇರುವ ಭೂಗಳ್ಳತನದ ಪರಿಸ್ಥಿಯನ್ನು ಅವಲೋಕಿಸಿ ಅದರ ಮೇಲೆ ಕ್ರಮ ವಹಿಸಲು ವರದಿ ನೀಡಲು ಸೂಚಿಸಿತು. ಆದರೆ, ಸದರಿ ಸಮಿತಿಯು ಸದನ ಸಮಿತಿ ಗುರುತಿಸಿದಂತೆ, ದೊಡ್ಡ ದೊಡ್ಡ ಭೂಗಳ್ಳರನ್ನು ಗುರುತಿಸುವದಕ್ಕೇ ಆದ್ಯತೆ ನೀಡುವ ಬದಲು, ಬಡ ಸಾಗುದಾರರ ಜಮೀನನ್ನು ಸೇರಿಸಿ ರಾಜ್ಯದಲ್ಲಿ ಸುಮಾರು 12 ಲಕ್ಷ ಎಕರೆ ಭೂಗಳ್ಳತನವಾಗಿದೆಯೆಂದು ವರದಿ ಸಲ್ಲಿಸಿದೆ.

ಆದರೆ ಈ ವರದಿಯೂ ಕೂಡ ಶ್ರೀಮಂತ ಭೂಗಳ್ಳರಿಂದ, ಬಡ ಸಾಗುದಾರರನ್ನು ಪ್ರತ್ಯೇಕಿಸಿ ನೋಡದಿರುವುದು ವಿಪರ್ಯಾಸ. ಹೀಗಾಗಿ ಅರ್ಜಿ ತಿರಸ್ಕರಿಸಲ್ಪಟ್ಟ ದಶ ಲಕ್ಷಾಂತರ ಬಡ ಬಗರ್ ಹುಕುಂ ಸಾಗುದಾರರು ಭೂಕಬಳಿಕೆದಾರರ ಸಾಲಿಗೆ ತಳ್ಳಲ್ಪಡುವಂತಾಯಿತು. ಅದೇ ರೀತಿ ಇವರ ಜೊತೆ ಲಕ್ಷಾಂತರ ಬಡ ವಸತಿದಾರರನ್ನು ಭೂಗಳ್ಳರ ಸಾಲಿಗೆ ಸರ್ಕಾರಿ ಜಮೀನು ಒತ್ತುವರಿದಾರರೆಂದು ಸೇರ್ಪಡೆ ಮಾಡಲಾಯಿತು. 2008–09 ರಲ್ಲಿಯೇ ಈ ವರದಿಗಳನ್ನು ಸರ್ಕಾರ ಪಡೆಯಿತಾದರೂ, ಇದುವರೆಗಿನ ಯಾವುದೆ ಸರ್ಕಾರಗಳು ದೊಡ್ಡ ಭೂ ಮಾಫಿಯಾ ಶಕಿಗಳ ಮೇಲೆ ಬಹುತೇಕ ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಅದೇ ರೀತಿ, ಈ ಅವಧಿಯಲ್ಲಿ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಬಿಜೆಪಿ ಸರ್ಕಾರವಾಗಲೀ, ಆನಂತರ ಬಂದ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವಾಗಲೀ ಅಥವಾ ಈಗಿನ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವಾಗಲೀ ಈ ಬಡ ಸಾಗುದಾರರನ್ನು ಭೂ ಮಾಫಿಯಗಳಿಂದ ಪ್ರತ್ಯೇಕಿಸಿ ಅವರ ಹಕ್ಕನ್ನು ಮಾನ್ಯ ಮಾಡುವ ಯಾವುದೆ ಕ್ರಮಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಬಗರ್ ಹುಕುಂ ಮತ್ತು ವಸತಿದಾರರು ನಡೆಸಿದ ಹೋರಾಟಗಳನ್ನು ಗಮನಿಸಿಯೂ ಕೈಗೊಳ್ಳದಿರುವುದು ಬಹಳ ಸ್ಪಷ್ಟವಾಗಿ ಅದು ಆಕಸ್ಮಿಕ ಮಾತ್ರವೇ ಆಗಿರಲಿಲ್ಲವೆಂಬುದನ್ನು ಮತ್ತು ಅದರ ಹಿಂದೆ ಬೇರೇನೋ ದುರುದ್ದೇಶವಿತ್ತೆಂಬುದನ್ನು ಅದು ಸಾಬೀತು ಪಡಿಸುತ್ತದೆ. ಭೂಗಳ್ಳರ್‍ಯಾರು ಮತ್ತು ಬಡ ಅನಧಿಕೃತ ಸಾಗುವಳಿದಾರರೆಂದು ಗುರುತಿಸಲಾಗದಷ್ಟು ಇವರು ಬುದ್ಧಿಹೀನರೇನಾಗಿರಲಿಲ್ಲ ಎಂಬುದನ್ನು ಯೋಚಿಸಿದರೇ ಅವರ ಉದ್ದೇಶ ಬೇರೇನೋ ಇತ್ತು ಎಂಬುದು ನಿಚ್ಚಳವಾಗುತ್ತದೆ. ಆಗ ಏನೊಂದೂ ಕ್ರಮ ತೆಗೆದುಕೊಳ್ಳದಿರುವವರು, ಈಗ ಈ ಬೀದಿ ಪಾಲಾಗಲಿರುವ ಬಡ ಸಾಗುದಾರರ ಬಗೆಗೆ ಅನುಕಂಪ ತೋರುವುದು ಮಾತ್ರ ಕುಹಕವಾಗಿದೆ ಮತ್ತು ಮೊಸಳೆ ಕಣ್ಣೀರಿನಂತೆ ಭಾಸವಾಗುತ್ತದೆ..

ಬಹುರಾಷ್ಟ್ರೀಯ ಸಂಸ್ಥೆಗಳ ಪರವಾಗಿ ಭೂ ನೀತಿಗಳಲ್ಲಿ ಬದಲಾವಣೆ :

ಕಳೆದ 08–10 ವರ್ಷಗಳಲ್ಲಿ ಜಾಗತೀಕರಣದ ನೀತಿಗಳನ್ನು ಕೇಂದ್ರ ಹಾಗೂ ರಾಜ್ಯಸರ್ಕಾರಗಳೂ ತೀವ್ರವಾಗಿ ಜಾರಿಗೆ ತರುವ ಭಾಗವಾಗಿಯೇ ಕರ್ನಾಟಕ ರಾಜ್ಯ ಸರ್ಕಾರ ತನ್ನ ಭೂ ನೀತಿ ಮತ್ತು ವ್ಯವಸಾಯ ನೀತಿಗಳಲ್ಲಿ ಭಾರಿ ಬದಲಾವಣೆಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಪರವಾಗಿ ಮಾಡಿಕೊಂಡಿದೆ. 2010 ರಲ್ಲಿ ಬಿಡುಗಡೆ ಮಾಡಲಾದ ರಾಜ್ಯ ಸರ್ಕಾರ ತನ್ನ ದೂರ ದೃಷ್ಠಿ – 2020ರ ಯೋಜನೆಯಲ್ಲಿ ಬಹಳ ಸ್ಪಷ್ಟವಾಗಿ, ಭೂಮಿ ಹಾಗೂ ವ್ಯವಸಾಯದ ಮೇಲಿನ ಅವಲಂಬಿತರ ಸಂಖ್ಯೆಯನ್ನು ಶೇ. 50 ರಷ್ಟು ಕಡಿತಗೊಳಿಸುವುದಾಗಿ ಸಾರಿತು. ಮಾತ್ರವಲ್ಲ, ಭೂ ಸುದ–ಾರಣ ಕಾನೂನನ್ನು ಬಹುರಾಷ್ಟ್ರೀಯ ಕಂಪೆನಿಗಳು ವ್ಯವಸಾಯದಲ್ಲಿ ತೊಡಗಲು ಮತ್ತು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಜಮೀನನ್ನು ಬೇರೆ ಬೇರೆ ರೂಪದಲ್ಲಿ ಹೊಂದುವಂತೆ ಅನುವಾಗಲು, ಅದರ ತಿದ್ದುಪಡಿಗೆ ಯಡಿಯೂರಪ್ಪನವರ ಸರ್ಕಾರ ಕ್ರಮವಹಿಸಿತಲ್ಲದೇ, ಕೃಷಿಯಲ್ಲಿ ಬಂಡವಾಳ ಹೂಡಿಕೆದಾರರ ವಿಶ್ವ ಸಮಾವೇಶವನ್ನು ಸಂಘಟಿಸಿತು. ಮಾತ್ರವಲ್ಲ, ಅಂತಹ ಎಲ್ಲ ಬಂಡವಾಳದಾರರಿಗೆ ಸುಲಭವಾಗಿ ಜಮೀನು ಸಿಗುವಂತಾಗಲೂ ಭೂ ಬ್ಯಾಂಕ್ ಸ್ಥಾಪನೆಗೆ ಕ್ರಮವಹಿಸಿತು. ಅದೇ ರೀತಿ, ಈ ಬಡ ಸಾಗುದಾರರಿಗೆ ನೋಟಿಸು ನೀಡಿ ಒಕ್ಕಲೆಬ್ಬಿಸಿ, ಆ ಜಮೀನುಗಳನ್ನು ಈ ಬಂಡವಾಳದಾರರಿಗೆ ವಹಿಸಿಕೊಡಲು ಭೂ ಬ್ಯಾಂಕ್‌ನಲ್ಲಿ ಲಭ್ಯವಾಗುವಂತೆ ಕ್ರಮವಹಿಸಲು ಮುಂದಾಯಿತು. ಆದರೆ, ಜನತೆಯ ಪ್ರತಿಭಟನೆಗೆ ಹೆದರಿದ ಸರ್ಕಾರವು, ಭೂ ಸುಧಾರಣಾ ಕಾಯ್ದೆಯ ತಿದ್ದುಪಡಿ ಮತ್ತು ಸರ್ಕಾರಿ ಜಮೀನಿನ ಬಡವರ ಒಕ್ಕಲೆಬ್ಬಿಸುವಿಕೆಯನ್ನು ತಾತ್ಕಾಲಿಕವಾಗಿ ಅದು ಕೈಬಿಡಬೇಕಾಗಿ ಬಂದಿತು. ಇದೆಲ್ಲಾ ಬಹಳ ಸ್ಪಷ್ಟವಾಗಿ, ಈ ಬಡ ಸಾಗುದಾರರನ್ನು ಭೂಗಳ್ಳರ ಸಾಲಿನಲ್ಲಿ ಯಾಕೆ ಕೂರಿಸಲಾಯಿತು ಮತ್ತು ಈ ಬಡವರಿಗೆ ಹಕ್ಕು ಪತ್ರ ಸಿಗುವಂತೆ ಸೂಕ್ತ ಕಾನೂನಿನ ತಿದ್ದುಪಡಿ ಮಾಡಿ ಮಾನ್ಯತೆ ಸಿಗುವಂತೆ ಯಾಕೆ ಕ್ರಮ ವಹಿಸಲಿಲ್ಲವೆಂಬುದರ ಹಿಂದಿನ ಸತ್ಯವನ್ನು ಬಯಲಿಗಿಡುತ್ತದೆ.

ಉಚ್ಚ ನ್ಯಾಯಾಲಯದ ಭೂತವ ತೋರಿಸಿ ಒಕ್ಕಲೆಬ್ಬಿಸಲು ಕ್ರಮ :

ಸರ್ಕಾರದ ಉದ್ದೇಶ ಸ್ಪಷ್ಟವಿದ್ದರೂ ಒಂದೆಡೆ ಈ ಅವಧಿಯ ಜಾಗತಿಕ ಆರ್ಥಿಕ ಬಿಕ್ಕಟ್ಟು ಬಂಡವಾಳ ಸೆಳೆಯಲು ಅಡ್ಡಿಯಾಗಿದ್ದರೇ, ಮತ್ತೊಂದೆಡೆ ಈ ಬಡವರ ಕೋಪಕ್ಕೆ ತುತ್ತಾಗಿ ನೆಲೆಗೆ ಧಕ್ಕೆಯನ್ನು ಯಾಕೆ ತಂದು ಕೊಳ್ಳಬೇಕೆಂದು ಸುಮ್ಮನಿದ್ದ ಸರ್ಕಾರ, ಆರ್ಥಿಕ ಬಿಕ್ಕಟ್ಟಿನಿಂದ ನಿಧಾನವಾಗಿ ಬಂಡವಾಳ ಶಾಹಿ ಜಗತ್ತು ತನ್ನ ಬಿಕ್ಕಟ್ಟಿನ ಹೊರೆಯನ್ನು ತನ್ನ ಹಾಗೂ ಮೂರನೇ ಜಗತ್ತಿನ ದೇಶಗಳ ದುಡಿಯುವ ಹಾಗೂ ಬಡವರ ಮೇಲೆ ವರ್ಗಾಯಿಸಿ ನಿಧಾನವಾಗಿ ಚೇತರಿಕೆ ತೋರುತ್ತಿರುವಂತೆಯೇ, ಮತ್ತೆ ನಮ್ಮ ಸರ್ಕಾರಗಳು, ವಿದೇಶಿ ಬಂಡವಾಳ ಸೆಳೆಯಲು ಉತ್ಸುಕತೆ ತೋರುತ್ತಿವೆ. ಸ್ವದೇಶಿ ಮಂತ್ರ ಜಪಿಸುವ ಮೋದಿಯವರು, ಬಹುರಾಷ್ಟ್ರೀಯ ಬಂಡವಾಳಗಾರರ ದೇಶಗಳನ್ನು ಸುತ್ತಿ ಬೇಕಾದ ಎಲ್ಲ ಅಗತ್ಯಗಳನ್ನು ಪೂರೈಸುವ ಪ್ರಧಾನ ಸೇವಕ ತಾನೆಂದು ಹೇಳಿಕೊಳ್ಳುತ್ತಾ, ವಿದೇಶಿ ಬಂಡವಾಳದ ಮೂಲಕ ದೇಶದ 'ಅಭಿವೃದ್ದಿ'ಗೆ ಹಾತೊರೆಯುತ್ತಿದ್ದಾರೆ. ಸಿದ್ದರಾಮಯ್ಯನವರ ಸರ್ಕಾರವೂ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಸಿದ್ದತೆ ನಡೆಸುತ್ತಿದೆ. ಇದು ಹೀಗಿರುವಾಗಲೇ, ನಮ್ಮ ಬೆಂಗಳೂರು ಫೌಂಡೇಶನ್ ಸಂಸ್ಥೆ ಮತ್ತು ಸಮಾಜ ಪರಿವರ್ತನ ಸಮುದಾಯದ ಶ್ರೀ ಹಿರೇಮಠ್ ಸೇರಿದಂತೆ ಮತ್ತೆ ಕೆಲವರು ಎಲ್ಲ ಭೂಕಬಳಿಕೆದಾರರನ್ನು ತೆರವುಗೊಳಿಸಿ ರಾಜ್ಯ ಸರ್ಕಾರ ಜಮೀನನ್ನು ತನ್ನ ವಶಕ್ಕೆ ತಗೆದುಕೊಳ್ಳಲು ಮತ್ತು ದಂಡಿಸಲು ಆದೇಶಿಸಬೇಕೆಂದು ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೇ, ಬಡ ಸಾಗುವಳಿದಾರರನ್ನು ಹೊರತು ಪಡಿಸಿ, ದೊಡ್ಡ ಭೂಮಾಫಿಯ ಶಕ್ತಿಗಳ ಮೇಲೆ ಕ್ರಮ ವಹಿಸಬೇಕೆಂದು ನಿರ್ಧಿಷ್ಟವಾಗಿಯೇನು ಕೇಳಲಿಲ್ಲವೆಂಬುದು! ಈ ಅರ್ಜಿಗಳು ಸಲ್ಲಿಕೆಯಾಗಿ ಒಂದು ವರ್ಷ ಕಳೆದುಹೋದರೂ, ಕರ್ನಾಟಕ ಸರ್ಕಾರ ಭೂಕಬಳಿಕೆದಾರರ ಸಾಲಿಗೆ ತಳ್ಳಿರುವ ಬಡ ಸಾಗುದಾರರನ್ನು ಸಂರಕ್ಷಿಸಲು, ಬೇಕಾದ ಕಂದಾಯ ಹಾಗೂ ಅರಣ್ಯ ಹಕ್ಕು ಮಾನ್ಯತಾ ಕಾಯ್ದೆಗೆ ತಿದ್ದುಪಡಿ ತರುವುದಾಗಲೀ ಅಥವಾ ಜಮೀನುಗಳ ವಾಸ್ತವಿಕ ಸರ್ವೇ ನಡೆಸಿ ವಾಸ್ತವವನ್ನು ಪಹಣಿ ಹಾಗೂ ಉತಾರೆಗಳಲ್ಲಿ ಸೇರ್ಪಡೆ ಮಾಡುವುದಾಗಲೀ ಮತ್ತು ಈ ಹಿಂದೆ ವಾಸ್ತವವನ್ನು ಪರಿಗಣಿಸದೇ ವರ್ಗಾಯಿಸಲಾದ ಅರಣ್ಯ ಇಲಾಖೆ ಜಮೀನನ್ನು ವಾಪಾಸು ಪಡೆಯುವ ಕೆಲಸವನ್ನಾಗಲೀ ಮಾಡಲಿಲ್ಲ. ಈಗ ಭೂ ಕಬಳಿಕೆಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ನ್ಯಾಯಾಲಯಕ್ಕೆ ಮುಚ್ಚಳಿಕೆಯನ್ನು ಬರೆದು ಕೊಟ್ಟಿದೆ. ಮಾತ್ರವಲ್ಲ ಸ್ಥಾನಿಕ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಕ್ಕಲೆಬ್ಬಿಸುವ ಮತ್ತು ಕ್ರಮವಹಿಸುವ ಸಮಿತಿಯನ್ನು ನೇಮಿಸಿ ತಹಸೀಲ್ದಾರರ ಮೂಲಕ ನೋಟೀಸ್ ನೀಡಿ ಬಲವಂತವಾಗಿ ಬೆಳೆ ಹಾಳುಮಾಡಿ, ಬೆದರಿಸಿ ಜೈಲು ಸೇರಿಸುವುದಾಗಿ ರಾಜ್ಯದಾದ್ಯಂತ ಒಕ್ಕಲೆಬ್ಬಿಸಲಾಗುತ್ತಿದೆ. ಇಷ್ಟೆಲ್ಲಾ ಅವಾಂತರ ನಡೆಸಿರುವ ರಾಜ್ಯ ಸರ್ಕಾರ ಮತ್ತು 'ಅ.ಹಿಂ.ದ' ಜನರ ಬಗೆಗೆ ಮಾತನಾಡುವ ಮುಖ್ಯಮಂತ್ರಿ, ಈಗ ನಾನು ಈ ಕ್ರಮ ಕೈಗೊಂಡಿಲ್ಲ! ಬದಲಿಗೆ, ಉಚ್ಚ ನ್ಯಾಯಾಲಯದ ಆದೇಶ ಪಾಲಿಸುತ್ತಿದ್ದೇನೆಂದು ಉಚ್ಚನ್ಯಾಯಾಲಯದ ಭೂತವನ್ನು ಮುಂದೆ ಮಾಡಿ ಸಬೂಬು ಹೇಳಿ ತಪ್ಪಿಸಿಕೊಳ್ಳುವ ಜಾಣತನ ಮಾಡುತ್ತಿದ್ದಾರೆ.

ಚಳುವಳಿಯೊಂದೇ ದಾರಿ :

ಈ ಬಡ ಜನಗಳಿಗೆ ಉಳಿದಿರುವ ಈಗ ದಾ–ರಿಯೊಂದೇ, ಚಳುವಳಿಯಲ್ಲಿ ಗಂಭೀರವಾಗಿ ದೊಡ್ಡ ಪ್ರಮಾಣದಲ್ಲಿ ತೊಡಗುವುದು ಮತ್ತು ಈ ಜನಗಳ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ರಾಜಕೀಯವನ್ನು ಅರ್ಥಮಾಡಿಕೊಂಡು ರಾಜ್ಯದ ಜನತೆಗೆ ಮತ್ತು ಸರ್ಕಾರಕ್ಕೆ ಕೇಳಬೇಕಿದೆ. "ಬಡ ಜನಗಳಾದ ನಾವು ಅಭಿವೃದ್ದಿ ಪಡಿಸಿದ ಈ ಸರ್ಕಾರಿ ಜಮೀನು ನಮಗೋ ಅಥವಾ ಬಹುರಾಷ್ಟ್ರೀಯ ಸಂಸ್ಥೆಗಳಿಗೋ, ಭೂ ಮಾಫಿಯಾಗಳಿಗೋ" ಈ ಪ್ರಶ್ನೆಯ ಮೂಲಕ ಸರ್ಕಾರದ ಮೇಲೆ ಒತ್ತಾಯ ಹೇರಿ ಸರ್ಕಾರದ ನೀತಿಯನ್ನು ಬದಲಾಯಿಸುವ ಹೋರಾಟ ನಡೆಸದೇ, ಬಡವರ ಪಾಲಿಗೆ ಬಗರ್ ಹುಕುಂ ಹಾಗೂ ಈಗ ಅರಣ್ಯವೆನ್ನಲಾದ ಮತ್ತು ಅವರೇ ಅಭಿವೃದ್ಧಿ ಪಡಿಸಿದ ಜಮೀನು ಇಲ್ಲವಾಗಿದೆ! ರಾಜ್ಯದಲ್ಲಿ ಹೋರಾಟ ಆರಂಭವಾಗಿದೆ ಅದು ವಿಸ್ತುತಗೊಳ್ಳುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿವೆ. ಅದಕ್ಕೀಗ ಎಲ್ಲಾ ನಾಗರೀಕರ ದೇಶ ಪ್ರೇಮಿಗಳ ಬೆಂಬಲದ ಅಗತ್ಯವಿದೆ.

ಮಹಾರಾಷ್ಟ್ರ ವಿಧಾನ ಸಭಾ ಚುನಾವಣೆ:
ಕಾಂಗ್ರೆಸ್–ಎನ್‌ಸಿಪಿ, ಬಿಜೆಪಿ–ಶಿವಸೇನೆ ಎರಡೂ ಮೈತ್ರಿ ಕೂಟಗಳಲ್ಲೂ ಬಿರುಕು !!

ಎಡ–ಪ್ರಜಾಸತ್ತಾತ್ಮಕ–ಜಾತ್ಯಾತೀತ ಪಕ್ಷಗಳ 'ಮಹಾರಾಷ್ಟ್ರ ಲೋಕಶಾಹಿ ಸಮಿತಿ' ಏನು ಸಾಧಿಸಲಿದೆ. ?

ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿ ಅಕ್ಟೋಬರ್ 15 2014 ರಂದು ನಡೆಯಲಿರುವ ವಿಧಾನ ಸಭಾ ಚುನಾವಣೆ ಕುತೂಹಲ ಕೆರಳಿಸಿದೆ. ರಾಜ್ಯದ ಪ್ರಮುಖ ಮೈತ್ರಿಕೂಟಗಳಾದ ಕಾಂಗ್ರೆಸ್–ಎನ್‌ಸಿಪಿ, ಬಿಜೆಪಿ–ಶಿವಸೇನೆ ಎರಡೂ ಮೈತ್ರಿ ಕೂಟಗಳಲ್ಲೂ ಬಿರುಕು ಮೂಡಿದೆ. ಈ ಮಧ್ಯೆ ರೂಪುಗೊಂಡಿರುವ ಎಡ–ಪ್ರಜಾಸತ್ತಾತ್ಮಕ–ಜಾತ್ಯಾತೀತ ಪಕ್ಷಗಳ 'ಮಹಾರಾಷ್ಟ್ರ ಲೋಕಶಾಹಿ ಸಮಿತಿ' ಏನು ಸಾಧಿಸಲಿದೆ. ಎನ್ನುವ ಕುತೂಹಲವೂ ಉಂಟಾಗಿದೆ.

ಡಾ.ಅಶೋಕ್ ಧವಳೆ
ಕನ್ನಡಕ್ಕೆ: ಕೆ.ಎಂ. ನಾಗರಾಜ

ಮಹಾರಾಷ್ಟ್ರದ ನಾಲ್ಕು ದೊಡ್ಡ ಪಕ್ಷಗಳ ನಡುವೆ ಸೀಟು ಹಂಚಿಕೆ ಮಾತುಕತೆಯ ನಾಟಕ ಮುಗಿದಿದೆ. ಇಪ್ಪತ್ತೈದು ವರ್ಷಗಳಿಂದಲೂ ಇದ್ದ ಶಿವ ಸೇನೆ–ಬಿಜೆಪಿ ಮೈತ್ರಿ ಕೂಟ ಮುರಿದುಬಿದ್ದಿದೆ. ಹದಿನೈದು ವರ್ಷಗಳಿಂದಲೂ ಒಟ್ಟಿಗಿದ್ದು ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್–ಎನ್‌ಸಿಪಿ ಮೈತ್ರಿ ಕೂಟವೂ ಸಹ ಮುರಿದುಬಿದ್ದಿದೆ. ಈ ನಾಲ್ಕು ದೊಡ್ಡ ಪಕ್ಷಗಳು ಬೇರೆ ಬೇರೆಯಾಗಿ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವುದರಿಂದ ಮಹಾರಾಷ್ಟ್ರದಲ್ಲಿ ಒಂದು ಹೊಸ ಪರಿಸ್ಥಿತಿ ಉಂಟಾಗಿದೆ. ಅಷ್ಟೇ ಅಲ್ಲದೆ, ರಾಜ್ ಠಾಕ್ರೆ ನೇತೃತ್ವದ ಎಂಎನ್‌ಎಸ್, ಬಿಎಸ್‌ಪಿ, ಬಂಡಾಯ ಅಭ್ಯರ್ಥಿಗಳು ಮತ್ತು ಪಕ್ಷೇತರರೂ ಚುನಾವಣಾ ಕಣದಲ್ಲಿದ್ದಾರೆ. ಮತದಾನ ಅಕ್ಟೋಬರ್ 15, 2014 ರಂದು ನಡೆಯಲಿದ್ದು ಮತ ಎಣಿಕೆ ಅಕ್ಟೋಬರ್ 19, 2014 ರಂದು ನಡೆಯಲಿದೆ.

ಇಂತಹ ಸನ್ನಿವೇಶದಲ್ಲಿ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಪಕ್ಷಗಳು ಒಟ್ಟಾಗಿ 'ಮಹಾರಾಷ್ಟ್ರ ಲೋಕಶಾಹಿ ಸಮಿತಿ' ಎಂಬ ಚುನಾವಣಾ ಮೈತ್ರಿಕೂಟ ರಚಿಸಿಕೊಂಡಿದ್ದಾರೆ. ಸಿಪಿಐ(ಎಂ), ಸಿಪಿಐ, ಪಿಡಬ್ಲೂಪಿ, ಜೆಡಿ(ಎಸ್), ಪ್ರಕಾಶ್ ಅಂಬೇಡ್ಕರ್ ನೇತೃತ್ವದ ರಿಪಬ್ಲಿಕನ್ ಪಾರ್ಟಿ–ಬಹುಜನ್ ಮಹಾಸಂಘ್, ಆನಂದ್‌ರಾಜ್ ಅಂಬೇಡ್ಕರ್ ನೇತೃತ್ವದ ರಿಪಬ್ಲಿಕನ್ ಸೇನಾ, ಲಾಲ್ ನಿಶಾನ್ ಪಾರ್ಟಿ(ಲೆನಿನ್‌ವಾದ), ಲಾಲ್ ನಿಶಾನ್ ಪಾರ್ಟಿ, ಸತ್ಯಶೋಧಕ ಕಮ್ಯೂನಿಸ್ಟ್ ಪಾರ್ಟಿ, ಶಿವರಾಜ್ಯ ಪಕ್ಷ ಮತ್ತು ಇತರ ಸಣ್ಣ ಸಣ್ಣ ಪಕ್ಷಗಳು ಈ ಮೈತ್ರಿಕೂಟದಲ್ಲಿವೆ. ಪಕ್ಷಗಳ ನಡುವೆ ಸೀಟು ಹಂಚಿಕೆ ಮತ್ತು ಹೊಂದಾಣಿಕೆ ಸಮರ್ಪಕವಾಗಿ ನಡೆದಿದ್ದು ಮೈತ್ರಿಕೂಟವು ಹೆಚ್ಚು ಕಡಿಮೆ ಎಲ್ಲ 288 ವಿಧಾನ ಸಭಾ ಕ್ಷೇತ್ರಗಳಲ್ಲೂ ಸ್ಪರ್ಧಿಸುತ್ತಿದೆ. ಈ ಮೈತ್ರಿಕೂಟ ಹೋರಾಟಗಳ ಮೂಲಕ ರೂಪುಗೊಂಡಿದ್ದೇನೂ ಅಲ್ಲ. ಇದೊಂದು ಸಹ ಮನಸ್ಕರ ಚುನಾವಣಾ ಪೂರ್ವ ಮೈತ್ರಿಕೂಟ. ಸಿಪಿಐ(ಎಂ) ಈ ಮೈತ್ರಿಕೂಟದ ಭಾಗವಾಗಿ 20 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ.

ಕೋಮುವಾದಿಗಳ ಕಿತ್ತಾಟ :

ಬಹಳ ವರ್ಷಗಳಿಂದಲೂ ಶಿವ ಸೇನೆ–ಬಿಜೆಪಿ ನಡುವೆ ತಿಕ್ಕಾಟಗಳು ನಡೆಯುತ್ತಿದ್ದರೂ 2014ರ ಲೋಕಸಭಾ ಚುನಾವಣಾ ಫಲಿತಾಂಶವೇ ಮೈತ್ರಿಕೂಟ ಮುರಿದು ಬೀಳಲು ಒಂದು ಕಾರಣವಾಗಿದೆ. ಹಿಂದುತ್ವದ ಆಧಾರದ ಮೇಲೆ ಶಿವಸೇನೆ–ಬಿಜೆಪಿ ನಡುವೆ ಉಂಟಾದ ಮೈತ್ರಿಯಿಂದ ಬಿಜೆಪಿಗೆ ಇಡೀ ದೇಶದಲ್ಲೇ ಸಿಕ್ಕಿದ ಮೊಟ್ಟಮೊದಲ ಚುನಾವಣಾ ಪಾಲುದಾರನೆಂದರೆ ಅದು ಶಿವಸೇನೆ. ಬಾಳ್ ಠಾಕ್ರೆ ಮತ್ತು ಪ್ರಮೋದ್ ಮಹಾಜನ್ ಈ ಮೈತ್ರಿ ಕೂಟದ ಶಿಲ್ಪಿಗಳು. ಪ್ರಮೋದ್ ಮಹಾಜನ್ ಸಾವಿನ ನಂತರ ಅವರ ಭಾವ ಮೈದುನ ಗೋಪಿನಾಥ್ ಮುಂಡೆ ಈ ಮೈತ್ರಿ ಕೂಟವನ್ನು ಸಂಭಾಳಿಸುತ್ತಿದ್ದರು. ಈಗ ಈ ಮೂವರಲ್ಲಿ ಯಾರೂ ಉಳಿದಿಲ್ಲ ಮತ್ತು ಇಂದಿನ ರಾಜಕೀಯ ಒತ್ತಡಗಳು ಬೇರೆಯೇ ಆಗಿವೆ.

ಶಿವಸೇನೆ–ಬಿಜೆಪಿ ನಡುವೆ 1995 ರಲ್ಲಿ ಮೈತ್ರಿ ಏರ್ಪಟ್ಟಾಗ, ಲೋಕ ಸಭಾ ಸೀಟುಗಳಲ್ಲಿ ದೊಡ್ಡ ಪಾಲು ಬಿಜೆಪಿಗೂ ಮತ್ತು ವಿಧಾನ ಸಭಾ ಸೀಟುಗಳಲ್ಲಿ ದೊಡ್ಡ ಪಾಲು ಶಿವಸೇನೆಗೂ ಇರಬೇಕೆಂಬ ಅಂಶ ಇಬ್ಬರಿಗೂ ಒಪ್ಪಿಗೆಯಾಗಿತ್ತು. ಅದರಂತೆ ಮಹಾರಾಷ್ಟ್ರ ವಿಧಾನ ಸಭೆಯ 288 ಸ್ಥಾನಗಳ ಪೈಕಿ 171 ಸೀಟುಗಳಲ್ಲಿ ಶಿವ ಸೇನೆ ಮತ್ತು 117 ಸೀಟುಗಳಲ್ಲಿ ಬಿಜೆಪಿ ಸ್ಪರ್ಧಿಸಬೇಕೆಂದು ನಿಗದಿಯಾಗಿತ್ತು. 1995ರ ವಿಧಾನ ಸಭಾ ಚುನಾವಣೆಗಳಲ್ಲಿ ಕೋಮುವಾದಿಗಳು ಒಟ್ಟುಗೂಡಿ ಮೊದಲಬಾರಿಗೆ ಬಹುಮತ ಪಡೆದು ಸರ್ಕಾರ ರಚಿಸಿದರು. ಆದರೆ, ಅವರ ಆಡಳಿತದಿಂದ ಬೇಸತ್ತ ಜನ ಮುಂದಿನ 1999, 2004 ಮತ್ತು 2009ರ ವಿಧಾನಸಭಾ ಚುನಾವಣೆಗಳಲ್ಲಿ ಶಿವಸೇನೆ–ಬಿಜೆಪಿ ಗುಂಪನ್ನು ಸೋಲಿಸಿದರು. 2009ರ ಚುನಾವಣೆಗಳಲ್ಲಿ ಶಿವಸೇನೆ 42 ಸ್ಥಾನಗಳಿಗೂ ಮತ್ತು ಬಿಜೆಪಿ 44 ಸ್ಥಾನಗಳಿಗೂ ತೃಪ್ತಿಪಟ್ಟುಕೊಳ್ಳಬೇಕಾಯಿತು. ರಾಜ್ ಠಾಕ್ರೆಯ ಎಂಎನ್‌ಎಸ್ ಅನೇಕ ಕ್ಷೇತ್ರಗಳಲ್ಲಿ ಶಿವಸೇನೆ ವಿರುದ್ಧ ಸ್ಪರ್ಧಿಸಿದ್ದುದು ಅವರ ಸೋಲಿನ ಪ್ರಬಲ ಕಾರಣವಾಗಿತ್ತು. ಶಿವಸೇನೆಗಿಂತ ಕೇವಲ ಎರಡು ಸೀಟು ಹೆಚ್ಚಿಗೆ ಪಡೆದಿದ್ದ ಬಿಜೆಪಿ ವಿರೋ ಧ ಪಕ್ಷದ ನಾಯಕನ ಪಟ್ಟ ಪಡೆದದ್ದನ್ನು ಶಿವಸೇನೆ ಜೀರ್ಣಿಸಿಕೊಳ್ಳಲೇ ಇಲ್ಲ.

ಕಳೆದ ಲೋಕಸಭಾ ಚುನಾವಣೆಗಳಲ್ಲಿ ಮಹಾರಾಷ್ಟ್ರದ 48 ಲೋಕಸಭಾ ಸ್ಥಾನಗಳ ಪೈಕಿ ಬಿಜೆಪಿ 23 ಮತ್ತು ಶಿವಸೇನೆ 18 ಸ್ಥಾನಗಳನ್ನು ಗಳಿಸಿದವು. ಎಲ್ಲಕ್ಕಿಂತ ಮಿಗಿಲಾಗಿ, ಮೊದಲಬಾರಿಗೆ, ಬಿಜೆಪಿಗೆ ತನ್ನದೇ ಆದ ಸ್ಪಷ್ಟ ಬಹುಮತ ಬಂದದ್ದು ಸ್ವರ್ಗಕ್ಕೆ ಮೂರೇ ಗೇಣು ಎಂಬಂತೆ ಬೀಗುತ್ತಿದೆ. ಮಹಾರಾಷ್ಟ್ರದಲ್ಲಿ ಬಹುಮತ ಪಡೆದು ಮುಖ್ಯಮಂತ್ರಿ ಪದವಿಯನ್ನು ತನ್ನದಾಗಿಸಿಕೊಳ್ಳುವ ಹವಣಿಕೆಯಿಂದ ಅದು ತನಗೆ 144 ಸ್ಥಾನಗಳು ಮತ್ತು ಮುಖ್ಯಮಂತ್ರಿಯ ಹುದ್ದೆ ಬಿಟ್ಟುಕೊಡಬೇಕೆಂದು ಪಟ್ಟು ಹಿಡಿದು ಶಿವಸೇನೆಯೊಂದಿಗಿದ್ದ ಇಪ್ಪತ್ತೈದು ವರ್ಷಗಳ ಮೈತ್ರಿ ಮುರಿಯಲು ಮುಂದಾಯಿತು. ಇತ್ತೀಚೆಗೆ ಉತ್ತರ ಪ್ರದೇಶ, ಬಿಹಾರ, ಕರ್ನಾಟಕ, ಮಧ್ಯ ಪ್ರದೇಶ, ಉತ್ತರಾಖಂಡ ಮತ್ತು ಗುಜರಾತ್ ರಾಜ್ಯಗಳಲ್ಲಿ ನಡೆದ ಉಪಚುನಾವಣೆಗಳಲ್ಲಿ ಬಿಜೆಪಿ ನೆಲ ಕಚ್ಚಿದ ಪ್ರಸಂಗದಿಂದ ಶಿವಸೇನೆಗೆ ಒಂದು ರೀತಿಯ ಉತ್ತೇಜನ ದೊರೆತಂತಾಗಿ ಬಿಜೆಪಿಯೊಂದಿಗಿದ್ದ ಮೈತ್ರಿ ಮುರಿಯಲು ಅದು ಹಿಂದೆ ಮುಂದೆ ನೋಡಲಿಲ್ಲ.



ಶಿವಸೇನೆ ಮತ್ತು ಎಂಎನ್‌ಎಸ್ ಪಕ್ಷಗಳು ಗುಜರಾತಿಗಳಾದ ನರೇಂದ್ರ ಮೋದಿ ಮತ್ತು ಅಮಿತ್ ಷಾ ವಿರುದ್ಧ ಕಟ್ಟಾ ಮರಾಠಾ ನಿಲುವು ತಳೆಯುವುದರ ಜೊತೆಗೆ ಬಿಜೆಪಿಯನ್ನು ಕಟುವಾಗಿ ಟೀಕಿಸುತ್ತಿವೆ. ಬಿಜೆಪಿ ಮಹಾರಾಷ್ಟ್ರದ ವಿಭಜನೆ ಮಾಡಿ ಪ್ರತ್ಯೇಕ ವಿದರ್ಭಾ ರಾಜ್ಯ ಮಾಡಲು ಹೊರಟಿದೆ ಎಂದು ಶಿವಸೇನೆ ಆರೋಪಿಸುತ್ತಿದೆ. ಶಿವಸೇನೆಯ ದಾಳಿ ಬಿಜೆಪಿಗೆ ತೊಡಕಾಗುತ್ತಿದೆ.

ಹೋಳಾದ ಕಾಂಗ್ರೆಸ್–ಎನ್‌ಸಿಪಿ ಮೈತ್ರಿ ಕೂಟ

ಕಳೆದ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅನುಭವಿಸಿದ ಭಾರೀ ಸೋಲು ಎನ್‌ಸಿಪಿಯೊಂದಿಗಿನ ಅದರ ಮೈತ್ರಿಯ ಚರಮ ಗೀತೆಯಾಗಿತ್ತು. ಮಹಾರಾಷ್ಟ್ರದ 48 ಲೋಕ ಸಭಾ ಸ್ಥಾನಗಳಲ್ಲಿ ಕಾಂಗ್ರೆಸ್–ಎನ್‌ಸಿಪಿ ಮೈತ್ರಿ ಕೂಟ ಗಳಿಸಿದ್ದು ಕೇವಲ ಆರು ಸೀಟು– ಕಾಂಗ್ರೆಸ್‌ಗೆ 2 ಮತ್ತು ಎನ್‌ಸಿಪಿಗೆ 4 ಸೀಟು. ಕಾಂಗ್ರೆಸ್‌ನೊಂದಿಗಿನ ಮೈತ್ರಿಯಿಂದಾಗಿ ತಾನು ಭಾರಿ ಸೋಲು ಅನುಭವಿಸಿದ್ದಾಗಿ ಎನ್‌ಸಿಪಿ ಭಾವಿಸಿತು. ಹಾಗಾಗಿ, ಅದು ಒಂಟಿಯಾಗಿ ಚುನಾವಣೆಗೆ ಹೋಗಲು ನಿರ್ಧರಿಸಿತ್ತು.

ಕಾಂಗ್ರೆಸ್–ಎನ್‌ಸಿಪಿ ಮೈತ್ರಿ ಕೂಟ ಹೋಳಾಗಲು ಇನ್ನೊಂದು ಕಾರಣವೆಂದರೆ ಅದು ಅಜಿತ್ ಪವಾರ್. ಆತ ಮುಖ್ಯಮಂತ್ರಿಯಾಗಲು ಹಂಬಲಿಸುತ್ತಿದ್ದುದು ಎಲ್ಲರಿಗೂ ಗೊತ್ತಿರುವ ವಿಷಯ. ಅಜಿತ್ ಪವಾರ್ ಮುಖ್ಯಮಂತ್ರಿಯಾಗಲು ಕಾಂಗ್ರೆಸ್ ಅಡ್ಡಿಯಾಗಿದೆ ಎಂದು ಎನ್‌ಸಿಪಿ ಬಡಬಡಿಸುತ್ತಿತ್ತು. ಪೃಥ್ವಿ ರಾಜ್ ಚವಾಣ್ ಮುಖ್ಯಮಂತ್ರಿ ಆದ ಮೇಲೆ ಅವರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿದ್ದ ಅಜಿತ್ ಪವಾರ್ ನೀರಾವರಿ ಹಗರಣ ಮತ್ತು ಸಹಕಾರಿ ಬ್ಯಾಂಕುಗಳ ಹಗರಣದಲ್ಲಿ ಭಾಗಿಯಾಗಿದ್ದಾರೆ–ಂದು ಅವರ ಮೇಲೆ ತನಿಖೆಗೆ ಆದೇಶಿಸಿದ ನಂತರ ಎರಡೂ ಪಕ್ಷಗಳ ನಡುವೆ ಇದ್ದ ಬಾಂಧವ್ಯ ಹಳಸಿತು. ತರುವಾಯ ಕಾಂಗ್ರೆಸ್ ಮತ್ತು ಎನ್‌ಸಿಪಿ ಮುಖಂಡರು ಪರಸ್ಪರ ಆರೋಪ ಮಾಡುವುದರಲ್ಲಿ ನಿರತರಾದರು.

2009ರ ಚುನಾವಣೆಯಲ್ಲಿ ಕಾಂಗ್ರೆಸ್ 174 ಮತ್ತು ಎನ್‌ಸಿಪಿ 114 ಸ್ಥಾನಗಳಲ್ಲಿ ಸ್ಪರ್ಧಿಸುವುದೆಂದೂ ಉಭಯತರೂ ಒಪ್ಪಿಕೊಂಡಿದ್ದರು. ಈಗ, ಎನ್‌ಸಿಪಿ ತನಗೆ 144 ಸ್ಥಾನಗಳು ಮತ್ತು ಮುಖ್ಯಮಂತ್ರಿ ಹುದ್ದೆಯನ್ನು ಒಬ್ಬರಾದ ನಂತರ ಇನ್ನೊಬ್ಬರು ನಿಭಾಯಿಸುವುದು ಎಂದು ಬೇಡಿಕೆ ಇಟ್ಟು ಸ್ವಲ್ಪ ಮಟ್ಟಿನ ಚೌಕಾಸಿ ನಡೆಸಿತಾದರೂ ಕಾಂಗ್ರೆಸ್ ಬಿಗಿ ಪಟ್ಟು ತಾಳಿದ್ದರಿಂದ ಮೈತ್ರಿ ಕುಸಿದು ಬಿತ್ತು. ಕಾಂಗ್ರೆಸ್ ಬಯಸಿದ್ದೂ ಅದನ್ನೇ.

ನಾಮಪತ್ರ ಸಲ್ಲಿಸಲು ಕೇವಲ ಮೂರು ದಿನ ಬಾಕಿ ಇರುವಾಗ, ಮೈತ್ರಿ ಕೂಟಗಳು ಒಡೆದು ಹೋದ ಕೂಡಲೇ, ಬೂರ್ಜ್ವಾ ಪಕ್ಷಗಳ ಟಿಕೆಟ್ ಪಡೆಯಲು ನೂಕು ನುಗ್ಗಲು ಶುರುವಾಗಿದೆ. ತತ್ವ ಸಿದ್ಧಾಂತಗಳನ್ನೆಲ್ಲಾ ಮೂಲೆಗೆ ತಳ್ಳಿರುವ 'ಆಯಾ ರಾಂ; ಗಯಾ ರಾಂ'ಗಳ ಬಯಲಾಟ ಜೋರಾಗಿ ನಡೆಯುತ್ತಿದೆ.

ಪ್ರಗತಿಪರ ಶಕ್ತಿಗಳಿಗೆ ಅನುಕೂಲಕರವಾಗಿರುವ ಪರಿಸ್ಥಿತಿ

ಹದಿನೈದು ವರ್ಷಗಳ ಕಾಲ ಆಡಳಿತ ನಡೆಸಿರುವ ಕಾಂಗ್ರೆಸ್–ಎನ್‌ಸಿಪಿ ಮೈತ್ರಿಕೂಟ ಅನುಸರಿಸಿದ ಜನ–ವಿರೋಧಿ ನೀತಿಗಳು ಮತ್ತು ಅವರ ಮಿತಿಮೀರಿದ ಲಂಚಗುಳಿತನದಿಂದಾಗಿ ಚುನಾವಣೆಯಲ್ಲಿ ಎರಡು ಪಕ್ಷಗಳಿಗೂ ಭಾರಿ ಹೊಡೆತ ಬೀಳುವುದು ಖಚಿತವಾಗಿದೆ. ಬಿಜೆಪಿ ಈ ಪಕ್ಷಗಳಿಗಿಂತ ಭಿನ್ನವೇನಿಲ್ಲ ಎಂಬುದನ್ನು ಜನರು ಕ್ರಮೇಣವಾಗಿ ಅರ್ಥಮಾಡಿಕೊಳ್ಳುತ್ತಿದ್ದಾರೆ. ಬಿಜೆಪಿಯ ನಾಲ್ಕು ತಿಂಗಳ ಆಡಳಿತದಲ್ಲಿ ಬೆಲೆ ಏರಿಕೆ, ನಿರುದ್ಯೋಗ, ರೈತರ ಆತ್ಮಹತ್ಯೆ, ಶ್ರಮಜೀವಿಗಳ ಶೋಷಣೆ ಮತ್ತು ಇಂತಹ ಅನೇಕ ಜನವಿರೋಧಿ ನಿಲುವುಗಳಲ್ಲಿ ಜನ ಯಾವುದೇ ಬದಲಾವಣೆ ಕಂಡಿಲ್ಲ. ವಿಷ ಕಾರುವ ಅದರ ಕೋಮುಪಿತೂರಿಗಳ ಬಗ್ಗೆಯೂ ಜನರಿಗೆ ಅರಿವಿದೆ.

ಇಂತಹ ರಾಷ್ಟ್ರ ಮಟ್ಟದ ಸಮಸ್ಯೆಗಳೇ ಅಲ್ಲದೆ ಮಹಾರಾಷ್ಟ್ರದ ಸಾಮಾಜಿಕ–ಆರ್ಥಿಕ ಬೆಳವಣಿಯ ಪಥ ಹೇಗಿರಬೇಕೆಂಬುದನ್ನು ಚುನಾವಣಾ ಪ್ರಚಾರದಲ್ಲಿ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಪಕ್ಷಗಳು ಹುರುಪಿನಿಂದ ಪ್ರಚಾರಮಾಡುತ್ತಿವೆ. ಪ್ರಸಕ್ತ ಪರಿಸ್ಥಿತಿಯು ಪ್ರಗತಿಪರ ಶಕ್ತಿಗಳಿಗೆ ಅನುಕೂಲಕರವಾಗಿದೆ. ಎಡ ಶಕ್ತಿಗಳು ಎಲ್ಲೆಲ್ಲಿ ನಿರಂತರ ಹೋರಾಟಗಳ ಮೂಲಕ ತಮ್ಮ ನೆಲೆ ಮತ್ತು ಸಂಘಟನೆ ಹೊಂದಿವೆಯೋ ಅಲ್ಲೆಲ್ಲಾ ಒಳ್ಳೆಯ ಚುನಾವಣಾ ಫಲಿತಾಂಶ ಪಡೆಯುವ ಸಾಧ್ಯತೆಗಳಿವೆ.

ಈ ಚುನಾವಣೆಯಲ್ಲಿ ಸಾವಿರಾರು ಸಿಪಿಐ(ಎಂ) ಕಾರ್ಯಕರ್ತರು ಪಕ್ಷಕ್ಕೆ ಕೀರ್ತಿ ತರುವಂತಹ ಫಲಿತಾಂಶ ಪಡೆಯಲು ಹಗಲಿರುಳೂ ಶ್ರಮಿಸುತ್ತಿದ್ದಾರೆ.

ಉಂಡ್ರಾಲ ದೊಡ್ಡಿಯಲ್ಲಿ ಅರಣ್ಯಭೂಮಿ ಸಾಗುವಳಿದಾರರ ಸಮಾವೇಶ



ಆಂಧ್ರ ಪ್ರದೇಶದ ಗಡಿಗೆ ಹತ್ತಿಕೊಂಡಿರುವ ಉಂಡ್ರಾಲದೊಡ್ಡಿ ಎಂಬ ಪುಟ್ಟ ಗ್ರಾಮ ರಾಯಚೂರು ತಾಲೂಕಿನ ಕೊನೆಯ ಗ್ರಾಮ. ಅದರ ಅಕ್ಕಪಕ್ಕದಲ್ಲಿರುವ ಬಾಪೂರು, ಬಾಪೂರು ತಾಂಡಾ, ಬಾಯಿದೊಡ್ಡಿ, ಸಿಂಗನೋಡಿ, ಸಿಂಗನೋಡಿ ತಾಂಡಾ, ಮಂಡಲಗೇರಾ, ಅರಸಿಕೇರಾ, ಅರಸಿಕೇರಾ ತಾಂಡಾ, ಚಂದ್ರಬಂಡ, ಬಿಜನಗೇರಾ, ಅಯಜಾಪುರ, ಮಾಸದೊಡ್ಡಿ, ಜುಲುಂಗೇರಾ ಕೊತ್ತದೊಡ್ಡಿ, ಎಲ್.ಕೆ. ದೊಡ್ಡಿ, ಜಂಬಲ್‌ದಿನ್ನಿ, ಪುಚ್ಚಲದಿನ್ನಿ, ಯರಗೇರಾ ಗುಂಜಳ್ಳಿ, ಮಿಟ್ಟಮಲ್ಕಾಪುರ, ಗೋನವಾರ, ಅನ್ವಾರ್, ಗದಾರ್, ಮಂಜರ್ಲ, ಇಡಪನೂರ, ಕಲ್ಮಾರಿ, ಯಾಪಲದಿನ್ನಿ, ಕಲ್ವಲದೂಡ್ಡಿ, ಗಾಜರಾಳ ಮೊದಲಾದ ಗ್ರಾಮಗಳ ಜನ ತೆಲುಗು ಭಾಷಿಕರು. ಈ ಗ್ರಾಮಗಳ ನಿವಾಸಿಗಳಲ್ಲಿ ಬಹುಸಂಖ್ಯಾತರು ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದು ಸ್ವಂತ ಭೂಮಿ ಇಲ್ಲದವರು ಅಥವ ಅತಿ ಚಿಕ್ಕ ಹಿಡುವಳಿದಾರರು ಆಗಿರುತ್ತಾರೆ.

ರಾಯಚೂರು ಜಿಲ್ಲೆಯ ಈ ಪ್ರದೇಶ ನಿರಂತರವಾಗಿ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶವಾಗಿದೆ. ಅಪರೂಪಕ್ಕೆ ಒಮ್ಮೆ ಮಳೆ ಬಂದಾಗ ಇಲ್ಲಿಯ ಜನ ತಮ್ಮ ಗ್ರಾಮಗಳ ಸುತ್ತಲೂ ಇರುವ ಸರ್ಕಾರಿ ಬಂಜರು ಭೂಮಿಯಲ್ಲಿ ಉಳುಮೆಮಾಡಿ ಬೆಳೆ ಬೆಳೆಯುತ್ತಾ ಬಂದಿದ್ದಾರೆ. ಇವರಲ್ಲಿ ಕೆಲವರಿಗೆ ಐದಾರು ದಶಕಗಳ ಹಿಂದೆ-ಯೇ ಸರ್ಕಾರದಿಂದ ಸಾಗುವಳಿ ಚೀಟಿ ದೊ-ರೆತಿದೆ. ಕೆಲವರಿಗೆ ಆ ದಿನಗಳಲ್ಲಿ ನಿಗದಿತ ದಂಡ ತುಂಬಲಾಗದೆ ಸಾಗುವಳಿ ಚೀಟಿ ಪಡೆಯಲು ಸಾಧ್ಯವಾಗಿಲ್ಲ. ಸಾಗುವಳಿ ಚೀಟಿಗಾಗಿ ಸರ್ಕಾರ-ಕ್ಕೆ ಇವರು ಅರ್ಜಿಗಳನ್ನು ಸಲ್ಲಿಸುತ್ತಾ ಬಂದಿದ್ದಾರೆ. ಅನಕ್ಷರಸ್ತ ತೆಲುಗು ಭಾಷಿಕರನ್ನು ಅಧಿಕಾರಿಗಳು ಕಡೆಗಣಿಸುತ್ತಾ ಬಂದಿದ್ದಾರೆ. ಅವರ ಬಗರ್ ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸುವ ಭರವಸೆ ನೀಡಿ ರೆವಿನ್ಯೂ ಹಾಗೂ ಅರಣ್ಯ ಇಲಾಖಾ ಅಧಿಕಾರಿಗಳು ಇವರಿಂದ ನಿರಂತರವಾಗಿ ಲಂಚ ಪಡೆಯುತ್ತಾ ಮೋಸ ಮಾಡಿದ್ದಾರೆ. ಈ ನಡುವೆ ಇವರು ಸಾಗುವಳಿ ಮಾಡಿಕೊಂಡು ಬಂದಿರುವ ಜಮೀನುಗಳೆಲ್ಲಾ ಅರಣ್ಯ ಇಲಾಖೆಗೆ ವರ್ಗಾಯಿಸಲ್ಪಟ್ಟಿದ್ದು ಈ ಬಡಪಾಯಿಗಳು ಅರಣ್ಯ ಇಲಾಖೆಯವರ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಈಗ ಅನಧಿಕೃತ ಸಾಗುವಳಿದಾರರನ್ನು ಒಕ್ಕಲೆಬ್ಬಿಸಲು ರಾಜ್ಯ ಸರ್ಕಾರ ಕ್ರಮಕೈಗೊಂಡಿರುವುದರಿಂದ ಇವರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಅರಣ್ಯ ಇಲಾಖೆ ಹಾಗೂ ರೆವಿನ್ಯೂ ಇಲಾಖೆಯ ಮೂಲಕ ಇವರಿಗೆ ನೋಟಿಸ್ ನೀಡಲಾಗುತ್ತಿದೆ. ಬೆಳೆದ ಬೆಳೆಗಳನ್ನು ನಾಶಮಾಡಿ ಒಕ್ಕಲೆಬ್ಬಿಸಲಾಗುತ್ತಿದೆ. ಒಬ್ಬೊಬ್ಬರನ್ನು ಹಿಡಿದು-

ಪುಟ 15 ಕ್ಕೆ

ಅರಣ್ಯ ಭೂಮಿ ಸಾಗುವಳಿ ಸಕ್ರಮಕ್ಕಾಗಿ...

ಪುಟ 2 ರಿಂದ

ಷರತ್ತಿದೆ. ಈ ಷರತ್ತು ಪೂರೈಸುವುದು ಕಷ್ಟದ ಕೆಲಸ. ಮೂರು ತಲೆಮಾರು ಅಂದರೆ ಅದು ಬ್ರಿಟಿಷ್ ಆಡಳಿತದ ಅವಧಿಗೆ ಹೋಗುತ್ತದೆ. ಅಷ್ಟು ದೀರ್ಘ ಅವಧಿಯ ದಾಖಲೆಗಳು ನಾಶವಾಗಿರುವ ಸಾಧ್ಯತೆ ಇರುತ್ತದೆ. ಸಿಗುವುದು ಕಷ್ಟದ ಕೆಲಸ. ಹಿರಿಯ ವ್ಯಕ್ತಿಗಳ ಮೌಖಿಕ ಹೇಳಿಕೆಗಳನ್ನು ಪರಿಗಣಿಸಬೇಕೆಂದಿದ್ದರೂ ಸಹ ಎಲ್ಲ ಪ್ರಕರಣಗಳಲ್ಲೂ ಹಿರಿಯ ವ್ಯಕ್ತಿಗಳು ಸಾಗುವಳಿದಾರರ ಪರ ವಹಿಸುವರೆಂಬುದಕ್ಕೆ ಖಾತ್ರಿಯೇನು ಇಲ್ಲ.

ಇಂತಹ ಕಠಿಣ ಷರತ್ತುಗಳ ಪರಿಣಾಮವಾಗಿ ಶೇ. 98 ರಷ್ಟು ಅರ್ಜಿಗಳು ತಿರಸ್ಕೃತಗೊಳ್ಳುತ್ತಿವೆ. ಹಾಗಾಗಿ 75 ವರ್ಷಗಳ ಸ್ವಾಧೀನತೆಯ ಆ ಧಾರ ಕೇಳುವ ಬದಲಿಗೆ ಆದಿವಾಸಿಗಳಿಗೆ ಇರುವಂತೆ ಡಿಸೆಂಬರ್ 13, 2005 ರಲ್ಲಿ ಭೂಮಿ ರೈತರ ಸ್ವಾಧೀನದಲ್ಲಿದ್ದಿರಬೇಕು ಎಂಬ ಷರತ್ತು ಸಾಕು ಎಂದು ಜನಚಳುವಳಿ ಆಗ್ರಹಿಸಬೇಕಿದೆ.

ಷರತ್ತುಗಳು ಸಡಿಲಗೊಳ್ಳಲಿ- ಕಡಿತಗೊಳ್ಳಲಿ

ಉತ್ತರ ಕನ್ನಡ ಜಿಲ್ಲಾಡಳಿತವು ಅರಣ್ಯ ಭೂಮಿಯ ಹಕ್ಕು ಮಾನ್ಯತೆಗೆ ಸಂಬಂಧಿಸಿ ಒಟ್ಟು 19 ಷರತ್ತುಗಳನ್ನು ವಿಧಿಸಿ ಸುತ್ತೋಲೆ ಹೊರಡಿಸಿದೆ. ಈ ಷರತ್ತುಗಳನ್ನು ಪೂರೈಸುವ ಸಲುವಾಗಿ ಕಚೇರಿ, ಕಚೇರಿ ಅಲೆಯುವ ಬದಲಿಗೆ ಭೂಮಿ ಹಕ್ಕಿನ ಗೊಡವೆಯೇ ಬೇಡ ಎಂದು ರೈತರು-ಆದಿವಾಸಿಗಳು ತೀರ್ಮಾನಕ್ಕೆ ಬರಬಹುದು. ಸರ್ಕಾರಕ್ಕೆ ಅದೇ ಬೇಕಾಗಿದೆ. ಈ ಅರಣ್ಯ ಭೂಮಿಯೇ ಕುಟುಂಬದ ಏಕೈಕ ಆ ಧಾರ ಎಂದು ದಾಖಲೆ ಕೊಡಿ. ಕುಟುಂಬಕ್ಕೆ ಬೇರೆ ಜಮೀನು ಇಲ್ಲ ಕಂದಾಯ ಇಲಾಖೆಯಿಂದ ದೃಢೀಕರಣ ದಾಖಲೆ ಕೊಡಿ.. ಸಾಗುವಳಿ ಭೂಮಿಯ ಸುತ್ತಮುತ್ತ ಏನಿದೆ, ಭೂಮಿ ಎಲ್ಲಿದೆ, ಎಂದು ಜಿಪಿಎಸ್ ಮಾಡಿಸಿರಬೇಕು. ಏನು ಬೆಳೆಯಲಾಗುತ್ತಿದೆ ದಾಖಲೆಯ ಆ ಧಾರ ಕೊಡಿ..ಭೂಮಿ ಮಂಜೂರಾತಿಗೆ ಸಂಬಂಧಿಸಿ ಗ್ರಾಮ ಸಭೆ ಅನುಮೋದನೆ ಬೇಕು. ಆ ಸಭೆಯಲ್ಲಿ ಅರಣ್ಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಮತ್ತು ಕಂದಾಯ ಇಲಾಖೆಗಳ ಅಧಿಕಾರಿಗಳು ಇರುವುದು ಖಾತ್ರಿಪಡಿಸಿ.. ಅರ್ಜಿಗಳ ಪರಿಶೀಲನೆ ನಡೆಯುವಾಗಲೂ ಈ ಅಧಿಕಾರಿಗಳ ಹಾಜರಾತಿ ಖಾತ್ರಿ ಪಡಿಸಿ.. .. ಇತ್ಯಾದಿ ಇತ್ಯಾದಿ ಷರತ್ತುಗಳಿವೆ. ಇವುಗಳಲ್ಲಿ ಎಷ್ಟೋ ಷರತ್ತುಗಳನ್ನು ಆದಿವಾಸಿಗಳು ಅಥವಾ ರೈತರು ಪೂರೈಸುವುದು ಸಾಧ್ಯವಿಲ್ಲ. ಏಕೆಂದರೆ ಗ್ರಾಮಸಭೆಯೋ, ಅರ್ಜಿ ಪರಿಶೀಲನಾ ಸಭೆಯೋ ನಡೆಯುವಾಗ ನಾನಾ ಇಲಾಖೆಗಳ ಅಧಿಕಾರಿಗಳ ಹಾಜರಾತಿ ಖಾತ್ರಿ ಮಾಡುವುದಕ್ಕೆ ರೈತರು ಅದಿವಾಸಿಗಳಿಗೆ ಅಧಿಕಾರವಿದೆಯೇ? ಷರತ್ತುಗಳಲ್ಲಿ ಪ್ರಾಯೋಗಿಕವಲ್ಲದ ಷರತ್ತುಗಳನ್ನು ಕಿತ್ತು ಹಾಕಿ ಪ್ರಕ್ರಿಯೆಯನ್ನು ಸರಳಗೊಳಿಸಬೇಕಿದೆ. ಷರತುಗಳ ಸಂಖ್ಯೆಯನ್ನು ಕಡಿತಗೊಳಿಸಬೇಕಿದೆ.

ಕಣ್ಣಿಗೆ ಮಣ್ಣೆರಚುವ ಕೆಲಸ

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಲ್ಲಿ 'ಗೊಂಡ' ಎಂಬ ಆದಿವಾಸಿಗಳಿದ್ದಾರೆ. ಈ ಗೊಂಡ ಕುಟುಂಬವೊಂದು ತಮ್ಮ ಸಾಗುವಳಿ ಭೂಮಿ ಹಕ್ಕಿಗಾಗಿ ಅರ್ಜಿ ಹಾಕಿದೆ. ಅವರು ಜಿಪಿಎಸ್ ಮಾಡಿಸಿದ್ದಾರೆ. ಅರಣ್ಯ ಇಲಾಖೆಯಿಂದ ಜಮೀನಿನ ನಕ್ಷೆ ಮಾಡಿಸಬೇಕು ಎಂದಾಗ ಅದನ್ನೂ ಮಾಡಿಸಿ ಸಲ್ಲಿಸಿದ್ದಾರೆ. ಜಮೀನು ಮಹಜರು ಮಾಡಲಾಗಿದೆ. ಮಹಜರು ದಾಖಲೆಯಲ್ಲಿ ಭೂಮಿ ಇದೇ ಆದಿವಾಸಿಗಳ ಸ್ವಾಧೀನದಲ್ಲಿದೆ ಎಂಬುದು ದಾಖಲಾಗಿದೆ. ಅರ್ಜಿ ಗ್ರಾಮ ಸಮಿತಿಯಿಂದ ಎ.ಸಿ.ಗೆ ಹೋಗಿದೆ. ಅಲ್ಲಿಂದ ಅರ್ಜಿ ವಾಪಾಸ್ ಅಗಿದೆ. ಏಕೆಂದು ಕೇಳಿದರೆ ಮಹಜರು



ವರದಿಯಲ್ಲಿ ವಿಸ್ತೀರ್ಣದ ವಿವರಗಳಿಲ್ಲ ಎಂಬ ಕಾರಣ ನೀಡಲಾಗಿದೆ. ಮಹಜರಿನಲ್ಲಿ ವಿಸ್ತೀರ್ಣದ ವಿವರ ಇಲ್ಲದಿರುವುದನ್ನೇ ನೆಪ ಮಾಡಿಕೊಂಡು ಅರ್ಜಿ ವಾಪಾಸ್ಸು ಮಾಡುವ ಬದಲಿಗೆ ಸಮಿತಿಗೆ ಬೇರೆ ಆಯ್ಕೆ ಇರಲಿಲ್ಲವೇ. ಇಲ್ಲಿ ರೈತ ವಿರೋಧಿ-ಆದಿವಾಸಿ ವಿರೋಧಿ ಮನಸ್ಥಿತಿಗಳು ಕೆಲಸ ಮಾಡುತ್ತಿರುವುದು ಸ್ಪಷ್ಟ. ಈ ಅಧಿಕಾರಶಾಹಿ ಮನೋಭಾವದ ವಿರುದ್ಧವೂ ಜನಚಳುವಳಿ ಕೆಲಸ ಮಾಡಬೇಕಿದೆ. ಈಗ 'ಗೊಂಡ' ಆದಿವಾಸಿ ಕುಟುಂಬ ಮೇಲ್ಮನವಿ ಸಲ್ಲಿಸುತ್ತಿದೆ. ಆದ-ರೆ ಎಲ್ಲರಿಗೂ ಮೇಲ್ಮನವಿ ಸಲ್ಲಿಸುವ ತಿಳುವಳಿಕೆ, ಧೈರ್ಯ, ಅನುಕೂಲ ಇರುವುದಿಲ್ಲ. ಅಂಥವರು ಏನು ಮಾಡಬೇಕು.??

ಚುನಾವಣಾ ಕಾಲದ ಮಂಕುಬೂದಿ

ಕಳೆದ ಲೋಕಸಭಾ ಚುನಾವಣೆಯ ಕಾಲದಲ್ಲಿ ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ರಾಜಕಾರಣಿ ಆರ್. ವಿ. ದೇಶಪಾಂಡೆಯವರು ಜಿಲ್ಲೆಯ ಒಂದು ಪ್ರಧಾನ ಪ್ರಶ್ನೆಯಾದ ಅರಣ್ಯ ಭೂಮಿ ಸಾಗುವಳಿ ವಿಷಯದಲ್ಲಿ ತಾವು ಏನೋ ಗಂಭೀರವಾಗಿ ಮಾಡುತ್ತಿರುವಂತೆ ಪ್ರಚಾರ ಮಾಡಿಕೊಂಡು ಓಡಾಡಿದ್ದಾರೆ. ಆಮೇಲೆ ಆ ಪ್ರಶ್ನೆ ಕೈಬಿಟ್ಟಿದ್ದಾರೆ. 75 ವರ್ಷಗಳ ಸ್ವಾಧೀನತೆಗೆ ಆಧಾರವಾಗಿ ಹಿರಿಯ ನಾಗರೀಕರ ಹೇಳಿಕೆಯನ್ನು ಸಾಕ್ಷಿಯಾಗಿ ಬಳಸಿಕೊಂಡು ಸಮಸ್ಯೆ ಬಗೆಹರಿಸಬಹುದು ಎಂಬುದು ದೇಶಪಾಂಡೆ ಮತ್ತು ಅವರ ಗುಂಪಿನ ಪ್ರಚಾರ. ಆದರೆ ಅಂತಹ ಹಿರಿಯರ ಹೇಳಿಕೆ ಪಡೆದುಕೊಳ್ಳುವುದು ಸಹ ಸರಳವಲ್ಲ. 75 ವರ್ಷಗಳ ಭೂಮಿ ಸ್ವಾಧೀನತೆ ಕಂಡಿದ್ದೇನೆ ಎನ್ನಬೇಕಾದಲ್ಲಿ ಕನಿಷ್ಟ ವ್ಯಕ್ತಿಗೆ 85 ವರ್ಷ ವಯಸ್ಸಾದರೂ ಆಗಿರಬೇಕು. ಅಂತಹವರು ಎಲ್ಲ ಕಡೆ ಸಿಗಲೇಬೇಕೇಂದೇನೂ ಇಲ್ಲ. ಸಿಕ್ಕರೂ ಹೇಳಿಕೆ ನೀಡಲು ಒಪ್ಪಲೇ ಬೇಕೆಂದೇನೂ ಇಲ್ಲ. ಅವರ ವಯಸ್ಸು, ವಾಸ ಇತ್ಯಾದಿಗಳಿಗೆ ಸಾಕ್ಷಿ ಆ ಧಾರ ಏನೇನೋ ಬೇಕಾಗುತ್ತವೆ. ಒಟ್ಟಾರೆ ಕಠಿಣ ಷರತ್ತುಗಳನ್ನು ಸಡಲಿಸಿ ಪ್ರಕ್ರಿಯೆಯನ್ನು ಸರಳ ಮಾಡಬೇಕೆಂದು ಚಳುವಳಿ ಗಮನ ನೀಡಬೇಕಿದೆ.

ತುರ್ತು ಪ್ರಶ್ನೆಗಳು

ಬಡವರ ಅದಿವಾಸಿಗಳ ಸಾಗುವಳಿ ಪ್ರಶ್ನೆಯನ್ನು ಸರ್ಕಾರಿ ಜಮಿನಿನ ಅಕ್ರಮ ಒತ್ತುವರಿ-ಕಬಳಿಕೆ ಎಂದು ನೋಡುವ ಕ್ರಮದಲ್ಲೇ ದೋಷವಿದೆ. ಇಂತಹ ದೋಷಪೂರಿತ ದೃಷ್ಟಿಯೊಂದಿಗೆ ನ್ಯಾಯಾಲಯಕ್ಕೆ ಮೊರೆ ಹೋಗುವವರಿದ್ದಾರೆ. ಈಗ ಈ ಸಂಬಂಧ ಹೈಕೋರ್ಟ್ ನಿರ್ದೇಶನ ಬಂದಿದೆ. ಆಳುವ ಸರ್ಕಾರಗಳು ಸೂಕ್ತ ಸಂದರ್ಭದಲ್ಲಿ ಮಾಡಬೇಕಾದ ಕರ್ತವ್ಯವನ್ನು ಮಾಡದೇ ದ್ರೋಹವೆಸಗಿವೆ. ಈಗ ಹೈಕೋರ್ಟ್ ನಿರ್ದೇಶನ ಪಾಲಿಸುವ ಹೆಸರಿನಲ್ಲಿ 23.12.2013 ರಂದು ಸುತ್ತೋಲೆಯೊಂದನ್ನು ಹೊರಡಿಸಿ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಲು ಸರ್ಕಾರ ಆದೇಶಿಸಿದೆ. ಬಿಬಿಎಂಪಿ, ಮಹಾನಗರಪಾಲಿಕೆ, ಪುರಸಭೆ, ನಗರ ಸಭೆ ವ್ಯಾಪ್ತಿಯೊಳಗೆ ಬರುವ ಬಗರ್ ಹುಕುಂ ಸಾಗುವಳಿ ಸಕ್ರಮದ ಅರ್ಜಿಗಳನ್ನು ಸಮಿತಿ ಸಭೆ ಕರೆದು ತಿರಸ್ಕರಿಸಿ ಎಂಬ ನಿರ್ದೇಶನವನ್ನೂ ನೀಡಲಾಗಿದೆ. ತನ್ನ ಕಾಳು ತಾನು ಹುಡುಕಿಕೊಂಡು ತಿನ್ನುವ ಕೋಳಿಯ ಕಾಲು ಮುರಿದಂತೆ ಸರ್ಕಾರದ ಕ್ರಮವು ದುಡಿದು ತಿನ್ನುವ-ಅನ್ನ ಬೆಳೆಯುವ ಬಡ ರೈತರು ಆದಿವಾಸಿ ಸಾಗುವಳಿದಾರರ ಮೇಲೆ ಎರಗಿದೆ.

'ಕಾನೂನು ತಿದ್ದುಪಡಿ'ಗಾಗಿ ಜನ ಚಳುವಳಿ ಬಲಗೊಳ್ಳಲಿ

ಈ ಒಟ್ಟು ಪ್ರಶ್ನೆ ಇತ್ಯರ್ಥವಾಗಬೇಕಾದಲ್ಲಿ ಜನಚಳುವಳಿಯೊಂದೇ ದಾರಿ. ಪ್ರಬಲವಾದ ಆಂದೋಲನವು ವಾಸ್ತವ ಸ್ಥಿತಿಯನ್ನು ಸಮಾಜದ ಮುಂದೆ ತಂದು ತೆರೆದಿಡುತ್ತದೆ. ನ್ಯಾಯಾಲಯಗಳಿಗೂ ವಸ್ತುಸ್ಥಿತಿ ಅರಿಯಲು ಸಹಾಯ ಮಾಡುತ್ತದೆ. ಸರ್ಕಾರಗಳ ಮೇಲೆ ಒತ್ತಡ ತಂದು ಸೂಕ್ತ ಆಡಳಿತಾತ್ಮಕ ಕ್ರಮಗಳು ಮತ್ತು ಕಾನೂನು ತಿದ್ದುಪಡಿಗಳು ಬರುವಂತೆ ಮಾಡುತ್ತದೆ. ಅಕ್ಟೋಬರ್ 13 ರಂದು ಬೆಂಗಳೂರಿನಲ್ಲಿ ಭೂಮಿ ಹಕ್ಕಿಗಾಗಿ ಆರಂಭವಾಗುವ ಅನಿರ್ಧಿಷ್ಟಾವಧಿ ಆಂದೋಲನ ಈ ನಿಟ್ಟಿನಲ್ಲಿ ಆಳುವವರ ಕಣ್ತೆರೆಸುವಂತಹ ದೃಢವಾದ ಚಳುವಳಿಯಾಗಬೇಕು.

ನಮ್ಮ ಆಳುವ ಸರ್ಕಾರಗಳ ಬಳಿ ಹುಲಿ ಸಂರಕ್ಷಣೆಗಾಗಿ 'ಹುಲಿ ಸಂರಕ್ಷಣಾ ಯೋಜನೆ' ಇದೆ. ಆನೆಗಳ ಸಂರಕ್ಷಣೆಗಾಗಿ 'ಆನೆಗಳ ಕಾರಿಡಾರ್' ರಚನೆ ಮುಂತಾದ ಯೋಜನೆ ಇದೆ. ಕರಡಿ ಧಾಮ, ನಾನಾ ಪಶು ಪಕ್ಷಿಗಳ ರಕ್ಷಣೆಯ ಯೋಜನೆಗಳು ಇವೆ. ರಾಷ್ಟ್ರೀಯ ಆಭಯಾರಣ್ಯದ ಯೋಜನೆ ಇದೆ. ಆದರೆ ಶತಶತಮಾನಗಳಿಂದ-ತಲೆತಲಾಂತರಗಳಿಂದ ಕಾಡನ್ನೇ ನಂಬಿ ಕಾಡಿನೊಂದಿಗೇ ಬೆರೆತು ಬದುಕುತ್ತಿರುವ ಆದಿವಾಸಿಗಳನ್ನು ಕಾಡು ಬಿಡಿ ಎಂದ-ರೆ ಮತ್ತೊಂದು ಬಗೆಯ ಜೀವನವೇ ಗೊತ್ತಿಲ್ಲದ ಅವರು ಏನು ಮಾಡುವುದು? ಸರ್ಕಾರ ನೀಡುವ ಕೆಲವು ಲಕ್ಷ ಪರಿಹಾರದ ಹಣ ತೆಗೆದುಕೊಂಡು ನಂತರ ದಿವಾಳಿಯಾಗುವ ದಾರಿಯಲ್ಲಿ ಈ ಆದಿವಾಸಿಗಳನ್ನು ದೂಡಲು ಯಾರಿಗೂ ಹಕ್ಕಿಲ್ಲ.

ಕಾಡು ಪ್ರಾಣಿಗಳ ಸಂರಕ್ಷಣೆ ಆಗಬೇಕಾದ ಕೆಲಸವೇ. ಅಮೂಲ್ಯ ಮರ ಗಿಡ, ಜೀವ ವೈವಿಧ್ಯವೂ ಉಳಿಯಬೇಕು. ಆದರೆ ಆದಿವಾಸಿಗಳನ್ನು ಕಾಡಿನಿಂದ ಆಚೆಗಟ್ಟುವ, ಬಡರೈತರನ್ನು ಒಕ್ಕಲೆಬ್ಬಿಸುವ ನೀತಿಗೆ ತಡೆ ಬೀಳಲೇ ಬೇಕು. ಆದಿವಾಸಿಗಳು ಪರಿಸರವನ್ನು ಎಂದೂ ಕಾಪಾಡುತ್ತ ಬಂದವರು. ಬಡರೈತರು ತಮ್ಮ ಕನಿಷ್ಟ ಬದುಕಿಗಾಗಿ ಎಷ್ಟು ಬೇಕೋ ಅಷ್ಟು ಮಾತ್ರ ಅರಣ್ಯವನ್ನು ಬಳಸುವವರು. ಇವರನ್ನು ಸರಕಾರಗಳು ಅರಣ್ಯ ಸಂರಕ್ಷಕರೆಂದು ಪರಿಗಣಿಸಬೇಕು. ಆಗ ಪರಿಸರವೂ ಉಳಿಯುತ್ತದೆ- ಜನರ ಬದುಕೂ ಉಳಿಯುತ್ತದೆ. ಕಾಂಟ್ರಾಕ್ಟುದಾರರ, ಗಣಿಲೂಟಿಕೋರರ ಮತ್ತು ದುರಾಸೆಯ ಉದ್ಯಮಿಗಳ ಲಾಬಿಯನ್ನು ಮಾತ್ರ ಹತ್ತಿಕ್ಕಬೇಕಾಗುತ್ತದೆ.

ಸಾರ್ವಜನಿಕ ವಲಯದ ಶೇರು ಮಾರಾಟ: ಬಿಜೆಪಿ ಮಂತ್ರಿಯಿಂದ ಕಾಂಗ್ರೆಸ್ ಉತ್ತರ

ಸಾರ್ವಜನಿಕ ವಲಯದ ಶೇರುಗಳ ಮಾರಾಟ ಒಂದು ವಿವೇಕಯುತ ಕೆಲಸ ಅಲ್ಲ, ಅದರಿಂದ ದೇಶದ ಬೊಕ್ಕಸಕ್ಕೆ ಬರುವ ಡಿವಿಡೆಂಡ್ ಆದಾಯ ತಪ್ಪಿ ಹೋಗುತ್ತದೆ, ಇಂತಹ ಶೇರು ಮಾರಾಟದಿಂದ ಬರುವ ಹಣ ಹೂಡಿಕೆಗೆ ಸಿಗುವುದಿಲ್ಲ, ಸರಕಾರದ ಖರ್ಚಿಗೇ ಹೋಗಿ ಬಿಡುತ್ತದೆ ಎಂದು ರಾಜ್ಯಸಭೆಯಲ್ಲಿ ಸಿಪಿಐ(ಎಂ) ಸದಸ್ಯರಾದ ಸೀತಾರಾಮ್ ಯೆಚುರಿಯವರು ಎತ್ತಿದ ಪ್ರಶ್ನೆಗೆ ಉತ್ತರಿಸುತ್ತ ಮೋದಿ ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ರಾಜ್ಯಮಂತ್ರಿಗಳು ಬರೆದ ಪತ್ರದಲ್ಲಿ ಅದೊಂದು ವಿವೇಕಯುತ ಕೆಲಸ, ಅದರಿಂದ ಕಂಪನಿಗಳ ದಕ್ಷ ನಿರ್ವಹಣೆಗೆ ಸಹಾಯವಾಗುತ್ತದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಅವರ ಪ್ರಕಾರ ಸರಕಾರ 51ಶೇ. ಶೇರುಗಳನ್ನು ಇಟ್ಟುಕೊಳ್ಳುವದರಿಂದ ಡಿವಿಡೆಂಡ್ ಹಣವೇನೂ ತಪ್ಪಿಹೋಗುವುದಿಲ್ಲ, ಶೇರು ಮಾರಾಟದಿಂದ ಬಂದ ಹಣವನ್ನು 'ರಾಷ್ಟ್ರೀಯ ಹೂಡಿಕೆ ನಿಧಿ'(ಎನ್‌ಐಎಫ್)ಯಲ್ಲಿ ಇಡಬೇಕೆಂದಿದೆಯಾದ್ದರಿಂದ ಸರಕಾರದ ಖರ್ಚಿಗೆ ಹೋಗಿ ಬಿಡುತ್ತದೆ ಎಂಬುದು ಸರಿಯಲ್ಲ.

ಆದರೆ ಅವರ ಪತ್ರದಲ್ಲಿ ತಿಳಿಸಿದ ಪ್ರಕಾರವೇ 2005ರಲ್ಲಿ ರಚಿಸಿದ ಈ ನಿಧಿಯ ವಾರ್ಷಿಕ ಆದಾಯದ 75ಶೇ.ವನ್ನು ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗಾವಕಾಶ ನಿರ್ಮಾಣದ ಆರಿಸಿದ ಸಾಮಾಜಿಕ ಪ್ರಾಜೆಕ್ಟುಗಳಿಗೆ ಬಳಸಬೇಕು, ಉಳಿದ 25ಶೇ.ವನ್ನು ಸಾರ್ವಜನಿಕ ವಲಯದ ಘಟಕಗಳ ಬಂಡವಾಳ ಅಗತ್ಯಗಳನ್ನು ಪೂರೈಸಲು ಬಳಸಬೇಕು ಎಂದಿದ್ದರೂ 2008–09ರ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಈ ನಿಧಿಯ ಹಣವನ್ನು ಬಳಸಿಕೊಳ್ಳಲು ಸರಕಾರಕ್ಕೆ ಮಾರ್ಚ್ 2012ರ ವರೆಗೆ ಮೂರು ವರ್ಷಗಳ ವಿನಾಯ್ತಿ ನೀಡಲಾಯಿತು. ಇದು ಒಂದೇ ಬಾರಿ ಕೊಡಬಹುದಾದ ವಿನಾಯ್ತಿ ಎಂದು ಹೇಳಿದರೂ ಮೊದಲು ಮಾರ್ಚ್ 2013 ರವರೆಗೆ ಈಗ ಮಾರ್ಚ್ 2014 ರವರೆಗೂ ಮುಂದುವರೆಸಲಾಗಿದೆ. ಬ್ಯಾಂಕುಗಳು, ವಿಮಾ ಕಂಪನಿಗಳು ಮತ್ತು ರೈಲ್ವೆಯ ಬಂಡವಾಳ ಅಗತ್ಯಗಳಿಗೆ ಸ್ವಲ್ಪ ಮಟ್ಟಿಗೆ ಬಳಸಲಾಗಿದೆಯಷ್ಟೇ ಎಂಬುದು ಮಂತ್ರಿಗಳ ಪತ್ರದಿಂದಲೇ ತಿಳಿದು ಬರುವ ಸಂಗತಿ.

ಅಂದರೆ ಈ ಎನ್‌ಐಎಫ್ ರಚನೆಗೊಂಡು ಎಂಟು ವರ್ಷಗಳಾದರೂ ಇನ್ನೂ ವಾಸ್ತವವಾಗಿ ಅದಕ್ಕೆ ವಿಧಿಸಿದ ಕೆಲಸವನ್ನು ಆರಂಭಿಸಿಯೇ ಇಲ್ಲ ಎಂದರ್ಥವಲ್ಲವೇ? ಇದರಿಂದ ಶೇರು ಮಾರಾಟದ ಹಣ ಸರಕಾರದ ಹಣಕಾಸು ಕೊರತೆಯನ್ನು ತುಂಬಲಷ್ಟೇ ಬಳಕೆಯಾಗಿದೆ ಎಂದೇ ಸಾಬೀತಾಗುವುದಿಲ್ಲವೇ ಎಂದು ಯೆಚೂರಿಯವರು ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಕೇಳಿದ್ದಾರೆ.

ಶೇರು ಮಾರಾಟದಿಂದ ಸರಕಾರಕ್ಕೆ ಬರುವ ಡಿವಿಡೆಂಡ್ ಹಣ ತಪ್ಪಿ ಹೋಗುತ್ತದೆ ಎಂದು ಹೇಳಿದ್ದೇ ವಿನಹ ಅದು ಸಂಪೂರ್ಣವಾಗಿ ನಿಂತು ಹೋಗುತ್ತದೆ ಎಂದೇನೂ ಹೇಳಿಲ್ಲ. ಆದರೆ ಶೇರು ಮಾರಾಟದಿಂದ ಹಣ ಬರುವುದು ಒಂದೇ ಬಾರಿ, ಆದರೆ ಅಷ್ಟು ಭಾಗಕ್ಕೆ ಪ್ರತಿವರ್ಷ ಬರುವ ಲಾಭಾಂಶ ಸಂಪೂರ್ಣವಾಗಿ ನಿಂತು ಹೋಗುತ್ತದೆ, ಇದನ್ನು ವಿವೇಕಯುತ ಕೆಲಸ ಎನ್ನಲು ಹೇಗೆ ಸಾಧ್ಯ?

ಅಲ್ಲದೆ ಶೇರು ಮಾರಾಟದಿಂದ ಬಂದ ಹಣವನ್ನು ಶಿಕ್ಷಣ, ಆರೋಗ್ಯ ಇತ್ಯಾದಿ ಸಾಮಾಜಿಕ ಪ್ರಾಜೆಕ್ಟುಗಳಿಗೆ ಬಳಸಲಾಗುತ್ತದೆ ಎಂದು ಮಂತ್ರಿಗಳು ಹೇಳುತ್ತಾರೆ. ಅದಿನ್ನೂ ಆಗಿಲ್ಲ. ಹಾಗೆ ಆದಾಗಲೂ ಕೂಡ ಇವೆಲ್ಲ ಮತ್ತೆ–ಮತ್ತೆ ಪ್ರತಿವರ್ಷ ಸರಕಾರ ಮಾಡಬೇಕಾದ ಖರ್ಚುಗಳು, ಆದರೆ ಶೇರು ಮಾರಾಟದಿಂದ ಹಣ ಸಿಗುವುದು ಒಂದೇ ಬಾರಿ, ಅಂದರೆ ಈ ಪ್ರತಿವರ್ಷ ಮಾಡಬೇಕಾದ ಈ ಖರ್ಚುಗಳನ್ನು ಪೂರೈಸಲಿಕ್ಕಾಗಿ ಶೇರು ಮಾರಾಟ ಮಾಡುತ್ತಲೇ ಇರಬೇಕಾಗುತ್ತದೆ, ಅಂದರೆ ಸರಕಾರ 51ಶೇ. ಶೇರುಗಳನ್ನು ತನ್ನ ಬಳಿಯೇ ಇಟ್ಟುಕೊಳ್ಳುತ್ತದೆ ಎಂಬ ಬಗ್ಗೆ ಭರವಸೆಯೇನಿದೆ?

ಆದ್ದರಿಂದ ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟ ವಿವೇಕಯುತ ಕೆಲಸ ಎಂದು ಒಪ್ಪಲು ಸಾಧ್ಯವಿಲ್ಲ ಎಂದು ಯೆಚೂರಿಯವರು ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ದಸರಾ ಉಡುಗೊರೆ: ರೈಲ್ವೆ ತತ್ಕಾಲ್ ದರಗಳಲ್ಲಿ ಏರಿಕೆ, ಮೊಬೈಲ್ ಇಂಟರ್ನೆಟ್ ದರಗಳಲ್ಲಿ ಏರಿಕೆ

ಆರೆಸ್ಸೆಸ್ ಮುಖ್ಯಸ್ಥರ ವಿಜಯದಶಮಿಯ ಸಂದೇಶದಲ್ಲಿ ಮೋದಿ ಸರಕಾರದ ಒಳ್ಳೆಯ ಆಡಳಿತದ ಪ್ರಶಂಸೆಗೆ ಪೂರ್ವಭಾವಿಯಾಗಿ ಮೋದಿ ಸರಕಾರದ ರೈಲ್ವೆ ಇಲಾಖೆ ತನ್ನ ಪ್ರಯಾಣಿಕರಿಗೆ ದಸರಾ ಶಾಕ್ ನೀಡಿದೆ. ಅಕ್ಟೋಬರ್ 1ರಿಂದ ತತ್ಕಾಲ್ ಅಡಿಯಲ್ಲಿ ಅರ್ಧದಷ್ಟು ಟಿಕೇಟುಗಳ ದರಗಳನ್ನು ಹೆಚ್ಚಿಸಿದೆ. ಅದಕ್ಕೆ ಕೊಟ್ಟಿರುವ ಹೆಸರು 'ಪ್ರೀಮಿಯಂ ತತ್ಕಾಲ್', ಇದು 'ಮಾರುಕಟ್ಟೆ ನಿರ್ಧರಿಸುವ' ದರ, ಅಂದರೆ ಇಲ್ಲಿ ನಿಶ್ಚಿತ ದರ ಇರುವುದಿಲ್ಲ, ಬೇಡಿಕೆ ಹೆಚ್ಚಿದ್ದಲ್ಲಿ ಹೆಚ್ಚು ದರ ತೆರಬೇಕು. ದೇಶಾದ್ಯಂತ ಸುಮಾರು 80 'ಜನಪ್ರಿಯ' ಎಕ್ಸ್‌ಪ್ರೆಸ್‌ಗಳಿಗೆ ಸದ್ಯಕ್ಕೆ ಇದು ಅನ್ವಯವಾಗುತ್ತದೆ.

ಮಧ್ಯವರ್ತಿಗಳಿಂದ ಪ್ರಯಾಣಿಕರನ್ನು ಉಳಿಸಲು ಈ ಕ್ರಮ ಎಂದು ಹೇಳಿದರೂ ವಾಸ್ತವವಾಗಿ ಇದು ರೈಲ್ವೆ ಇಲಾಖೆ ಮಾಡಿರುವ ಹಿಂಬಾಗಿಲ ದರ ಏರಿಕೆ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತ ಮಾಡುತ್ತಿದ್ದಾರೆ. ಅಮೆರಿಕಾದಲ್ಲಿ ನಮ್ಮ ಪ್ರಧಾನಿಗಳು ಅಮೆರಿಕಾದ ಕಂಪನಿಗಳ ಸಿಇಒಗಳಿಗೆ ತನ್ನ ಸರಕಾರ 'ಮಾರುಕಟ್ಟೆ' ಸುಧಾರಣೆಗಳನ್ನು ಮಾಡುತ್ತದೆ ಎಂದು ಭರವಸೆ ನೀಡಿದರ ಪರಿಣಾಮ ಇದಾಗಿರಬಹುದೇ ಎಂದೂ ಅವರು ಕೇಳುತ್ತಿದ್ದಾರೆ.

ಈ ನಡುವೆ 'ಡಿಜಿಟಲ್ ಇಂಡಿಯಾ'ದ 'ಒಳ್ಳೆಯ ದಿನಗಳ' ಜೀವಾಳವಾದ ಮೊಬೈಲ್ ಇಂಟರ್ನೆಟ್ ದರಗಳನ್ನೂ ಮೂರು ಪ್ರಮುಖ ಖಾಸಗಿ ಕಂಪನಿಗಳು ಈ ಮೂರು ತಿಂಗಳಲ್ಲಿ 100ಶೇ. ದಷ್ಟು ಏರಿಸಿವೆ ಎಂದು ಪಿಟಿಐ ಅಕ್ಟೋಬರ್ 5ರಂದು ವರದಿ ಮಾಡಿದೆ. ವೊಡಾಫೋನ್ ಮತ್ತು ಐಡಿಯಾ ಈಗಾಗಲೇ ತಮ್ಮ ಮೊಬೈಲ್ ದರಗಳನ್ನು ಏರಿಸಿದ್ದು ಈ ವಾರ ಏರ್‌ಟೆಲ್ ಕೂಡ ಅವರನ್ನು ಅನುಕರಿಸಿದೆ.

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



'ಹೆಚ್ಚುವರಿ ಗಳಿಕೆ'ಯಿದ್ದರೂ ಡೀಸೆಲ್ ಬೆಲೆ ಇಳಿಸಲು ನಿರಾಕರಣೆ!

ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ಪೆಟ್ರೋಲಿಯಂ ಬೆಲೆಗಳು ಬ್ಯಾರಲ್‌ಗೆ 100 ಡಾಲರಿಗಿಂತಲೂ ಹೆಚ್ಚಾಗಿರುವುದರಿಂದ ದರ ಏರಿಸಬೇಕಾಗಿದೆ ಎಂದು ಹೇಳುತ್ತ ಬಂದಿರುವ ಸರಕಾರ ಮತ್ತು ತೈಲ ಕಂಪನಿಗಳು ಈಗ ಅದು ಬ್ಯಾರೆಲ್‌ಗೆ 92 ಡಾಲರಿಗೆ ಇಳಿದರೂ ಡೀಸೆಲ್ ಬೆಲೆ ಇಳಿಸಲು ನಿರಾಕರಿಸುತ್ತಿವೆ.

ತೈಲ ಕಂಪನಿಗಳಿಗೆ ವಾಸ್ತವದಲ್ಲಿ ನಷ್ಟವಾಗದಿದ್ದರೂ, ಅಂತರ್ರಾಷ್ಟ್ರೀಯ ಬೆಲೆಗಳಿಗೆ ಹೋಲಿಸಿದರೆ 'ಕಡಿಮೆ ಗಳಿಕೆ'(ಅಂಡರ್ ರಿಕವರಿ)ಯ ಹೆಸರಿನಲ್ಲಿ ದರಗಳನ್ನು ಏರಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಜನವರಿ 2013ರಿಂದ ಯುಪಿಎ–2 ಸರಕಾರ ಡೀಸೆಲ್ ದರಗಳನ್ನು ಪ್ರತಿ ತಿಂಗಳು ಲೀಟರಿಗೆ 50 ಪೈಸೆಯಂತೆ ಏರಿಸಲು ನಿರ್ಧರಿಸಿತು. ಆಗ ಬಿಜೆಪಿ ಪ್ರತಿಪಕ್ಷವಾಗಿ ಅದಕ್ಕೆ ವಿರೋಧ ವ್ಯಕ್ತಪಡಿಸಿದ್ದರೂ, ತಾನು ಅಧಿಕಾರಕ್ಕೆ ಬಂದ ಮೇಲೆ ಅದನ್ನು ಮೌನವಾಗಿ ಮುಂದುವರೆಸಿತು. ಈಗ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಕುಸಿದು ಅದು ಅಂತರ್ರಾಷ್ಟ್ರೀಯ ಡೀಸೆಲ್ ದರಗಳಿಗೆ ಹೋಲಿಸಿದಾಗಲೂ ಲೀಟರಿನಲ್ಲಿ ರೂ.1.90 ರಷ್ಟು 'ಹೆಚ್ಚುವರಿ ಗಳಿಕೆ'(ಓವರ್ ರಿಕವರಿ) ಮಾಡುತ್ತಿದ್ದರೂ ಡೀಸೆಲ್ ದರಗಳನ್ನು ಇಳಿಸುವ ಬಗ್ಗೆ ದಿವ್ಯಮೌನ ತಳೆದಿದೆ.


ತನ್ನ ಈ ನಿಷ್ಕ್ರಿಯತೆಯ ಮೂಲಕ ಮೋದಿ ಸರಕಾರ ಜನತೆಯ ಮೇಲೆ ಹೊರೆ ಹಾಕುತ್ತಿದೆ, ವಿಶೇಷವಾಗಿ ರೈತರು, ಸಣ್ಣ ಪ್ರಮಾಣದ ಉದ್ದಿಮೆಗಳು ಮತ್ತು ಸರಕು ಸಾಗಾಣಿಕೆಯ ಮೇಲೆ ಹೊರೆ ಹಾಕುತ್ತಿದೆ ಎಂದು ಖಂಡಿಸಿರುವ ಸಿಪಿಐ(ಎಂ) ತಕ್ಷಣವೇ ಡೀಸೆಲ್ ದರಗಳನ್ನು ಇಳಿಸಬೇಕು ಎಂದು ಆಗ್ರಹಿಸಿದೆ.

"ಮೇಕ್ ಇನ್........" ಮೇಲಾಟ

ನಮ್ಮ ಪ್ರಧಾನಿಗಳು 'ರಾಕ್ ಸ್ಟಾರ್' ಭೇಟಿಯಿಂದ ಮರಳಿದಾಗ ಅವರು ತಮ್ಮ 'ಮೇಕ್ ಇಂಡಿಯಾ' ಕರೆಯಿಂದ ಅಮೆರಿಕಾವನ್ನು ಗೆದ್ದು ಬಿಟ್ಟರು ಎಂದು ಡಂಗೂರ ಸಾರಲಾಯಿತು. ಆದರೆ ಅಧ್ಯಕ್ಷ ಒಬಾಮ ತನ್ನ ಈ ವಾರದ ರೇಡಿಯೋ ಭಾಷಣದಲ್ಲಿ "ಜಗತ್ತಿನಲ್ಲಿ ಹೂಡಿಕೆಗಳಿಗೆ ಅತ್ಯಂತ ಆಕರ್ಷಕ ಸ್ಥಳ ಭಾರತವೂ ಅಲ್ಲ, ಚೀನಾವೂ ಅಲ್ಲ ಅಮೆರಿಕಾವೇ" ಎಂದು ಸಾರಿದ್ದಾರೆ.

ಇಲ್ಲಿ ಭಾರತದ ಹಣಕಾಸು 'ರಾಜಧಾನಿ' ಮುಂಬೈಯಲ್ಲೂ ಇಂತಹುದೇ ಮೇಲಾಟ ನಡೆದಿದೆ. 25 ವರ್ಷಗಳ ಕಾಲ ಬಿಜೆಪಿಯೊಂದಿಗೆ ಕೈಮಿಲಾಯಿಸಿದ್ದ ಶಿವಸೇನೆಯ ಎರಡೂ ವಿಭಾಗಗಳ ಮುಖ್ಯಸ್ಥರುಗಳು ಮೋದಿಯವರು ಭಾರತದ ಪ್ರಧಾನಿಗಳೇ ಅಥವ ಗುಜರಾತಿನ ಪ್ರಧಾನಿಯೋ ಎಂದು ಪ್ರಶ್ನಿಸುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಗುಜರಾತಿನ ಬಿಜೆಪಿ ಮುಖ್ಯಮಂತ್ರಿಗಳು ಮುಂಬಯಿಯಲ್ಲಿ ಅಲ್ಲಿನ ಗುಜರಾತಿ ವ್ಯಾಪಾರಸ್ಥರನ್ನು ಭೇಟಿ ಮಾಡಿ 'ಇಲ್ಲಿ ಅರ್ಧದಿನವನ್ನು ಬರೀ ಓಡಾಟದಲ್ಲೇ ಕಳೆಯುವ ಬದಲು ಗುಜರಾತಿಗೆ ಬನ್ನಿ, ಅಲ್ಲಿ ವ್ಯವಹಾರ ನಡೆಸಿ' ಎಂದು ಹೇಳಿರುವ ವರದಿಯ ಬಗ್ಗೆ ಸಹಜವಾಗಿಯೆ 'ಪ್ರಾದೇಶಿಕತೆ'ಯನ್ನೇ ಬಂಡವಾಳ ಮಾಡಿಕೊಂಡಿರುವ ಆ ಮಾಜೀ ಮಿತ್ರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ದೇಶ ಕಾಂಗ್ರೆಸ್ ನೇತೃತ್ವದಲ್ಲಿ ನವ–ಉದಾರವಾದದ ದಾರಿ ಹಿಡಿದಂದಿನಿಂದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ನೀಗಿಸುವ ತತ್ವವನ್ನು ಕೈಬಿಟ್ಟು ಈ ರೀತಿ ರಾಜ್ಯ–ರಾಜ್ಯಗಳ ನಡುವೆ ಉದ್ದಿಮೆದಾರರನ್ನು ಆಕರ್ಷಿಸಲು ರಿಯಾಯ್ತಿ–ವಿನಾಯ್ತಿಗಳನ್ನು ಸುರಿಯುವ ಮೇಲಾಟ ಆರಂಭವಾಗಿತ್ತು. ಮೋದಿ ಸರಕಾರ ಅದೇ ದಾರಿಯಲ್ಲಿ ಇನ್ನೂ ರಭಸದಿಂದ ಮುಂದೊತ್ತಲು ನಿರ್ಧರಿಸುವಾಗ ಇಂತಹ ಮೇಲಾಟ ಹೊಲಸು ಮಟ್ಟಗಳನ್ನು ತಲುಪುವುದು ಸ್ವಾಭಾವಿಕವೇ ಅಲ್ಲವೇ?



ಮೇಕ್ ಇನ್ ಇಂಡಿಯಾ

ಮೇಕ್ ಇನ್ ಜರ್ಮನಿ ಯುಕೆ ಅಮೆರಿಕ ಜಪಾನ್ ಚೀನಾ


ಬಿಹಾರ್ ಯುಪಿ ತೆಲಂಗಾಣಾ.. ಆಂಧ್ರ ಎಂ.ಪಿ.

ಕೃಪೆ: ಸತೀಶ ಆಚಾರ್ಯ

'ಅಭಿವೃದ್ಧಿ' ಅಜೆಂಡಾದ ಆಚೆ

'ಒಳ್ಳೆಯ ದಿನ'ಗಳ ವಿಜಯ ದಶಮಿ ಕೊಡುಗೆ ಆಕಾಶವಾಣಿ–ದೂರದರ್ಶನ ಹಂಚಿಕೊಂಡ ಸರ್ಕಾರ್–ಪರಿವಾರ್

ಪ್ರಧಾನ ಮಂತ್ರಿಗಳು ಅಮೆರಿಕಾದಿಂದ ವಿಜಯದುಂದುಭಿ ಮೊಳಗಿಸಿ ಮರಳುತ್ತಿದ್ದಂತೆ ಆಕಾಶವಾಣಿಯಲ್ಲಿ ಗಳಿಗೆಗೊಮ್ಮೆ ಅವರ 'ಮನಕೀ ಬಾತ್'ನ ಪ್ರಸಾರದ ಜಾಹೀರಾತು. ಅಧಿಕೃತವಾಗಿ ಈ ರೇಡಿಯೋ ಪ್ರಸಾರ ಭಾಷಣ ಗಾಂಧಿ ಜಯಂತಿ ಪ್ರಯುಕ್ತ. ಆದರೆ ನಡೆದದ್ದು ಮರುದಿನ. ಅದು ವಿಜಯ ದಶಮಿಯ ದಿನ. ಅದೇ ದಿನ ಸದ್ದಿಲ್ಲದೆ ದೂರದರ್ಶನದಲ್ಲಿ ನಾಗಪುರದಿಂದ ಒಂದು ಗಂಟೆ ಕಾಲ ಆರೆಸ್ಸೆಸ್‌ನ ಮುಖ್ಯಸ್ಥರ ಸಾಂಪ್ರದಾಯಿಕ ವಿಜಯದಶಮಿ 'ಸಂದೇಶ'ದ ನೇರಪ್ರಸಾರ. ಇದು ಕಾಕತಾಳೀಯ ಅಲ್ಲ ಎನ್ನುತ್ತಾರೆ ರಾಜಕೀಯ ವೀಕ್ಷಕರು. ವಿಜಯದಶಮಿ ಆರೆಸ್ಸೆಸ್ ಮುಖ್ಯಸ್ಥರ ದಿನ, ಆ ದಿನ ಆರೆಸ್ಸೆಸ್‌ನ ಕೇವಲ ರಾಜಕೀಯ ಅಂಗವಾದ ಬಿಜೆಪಿಯ ಸರಕಾರದ ಮುಖ್ಯಸ್ಥರ ಸಂದೇಶ ಮಾತ್ರ ದೇಶವ್ಯಾಪಿಯಾಗುವುದು ಸರಿಯಲ್ಲ, ಎಂದು ಸರಕಾರೀ ಒಡೆತನದ ದೂರದರ್ಶನ ನಾಚಿಕೆಯಿಲ್ಲದೆ ನೇರಪ್ರಸಾರಕ್ಕೆ ಒಪ್ಪಿತು ಎನ್ನಲಾಗಿದೆ.



ಇದಕ್ಕೆ ರಾಜಕೀಯ ಪಕ್ಷಗಳಿಂದ ಮಾತ್ರವಲ್ಲ, ಸ್ವತಂತ್ರ ವೀಕ್ಷಕರಿಂದಲೂ ಪ್ರತಿಭಟನೆ ಬಂದಿದೆ. ಸಾರ್ವಜನಿಕರ ಹಣವನ್ನು ಬಳಸುವ ಸಾರ್ವಜನಿಕ ಪ್ರಸಾರ ಸಂಸ್ಥೆ ಒಂದು ಸ್ವಯಂಸೇವಿ ಸರ್ಕಾರೇತರ ಸಂಘಟನೆಯ ಕಾರ್ಯಕ್ರಮವನ್ನು ಒಂದು ಗಂಟೆಗೂ ಹೆಚ್ಚು ಕಾಲ ನೇರಪ್ರಸಾರ ಮಾಡುವುದಾದರೆ, ಇತರ ಸರ್ಕಾರೇತರ ಸಂಘಟನೆಗಳ ಕಾರ್ಯಕ್ರಮಗಳ ನೇರಪ್ರಸಾರ ಏಕೆ ಮಾಡಬಾರದು ಎಂದು ಪುಣೆ ವಿಶ್ವವಿದ್ಯಾಲಯದ ರಾಜಕೀಯ ವಿಜ್ಞಾನದ ಪ್ರಾಧ್ಯಾಪಕ ಸುಹಾಸ್ ಪಲ್ಶೀಕರ್ ಕೇಳಿದ್ದಾರೆ.

ನಮಗೆ ಇದೊಂದು ಸುದ್ದಿ ಘಟನೆ ಮಾತ್ರ, ಸುದ್ದಿಯೋಗ್ಯ ಅನಿಸಿತು, ಪ್ರಸಾರ ಮಾಡಿದ್ದೇವೆ ಎಂದು ದೂರದರ್ಶನದ ನಿರ್ದೇಶಕರು ಇದನ್ನು ಸಮರ್ಥಿಸಿಕೊಂಡಿದ್ದಾರೆ. ಹಾಗಿದ್ದರೆ ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ದಿಲ್ಲಿಗೆ ಬಂದು ದೇಸದ ಸಂಸತ್ತಿನೆದುರು ಸಭೆ ನಡೆಸಿದರೆ ಅದು ಏಕೆ ಸುದ್ದಿಯೋಗ್ಯವಾಗುವುದಿಲ್ಲ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಅಷ್ಟೊಂದು ಸುದ್ದಿಯೋಗ್ಯ

ಪುಟ 15 ಕ್ಕೆ

ಜಗದಗಲ

ಶರತ್‌ಚಂದ್ರ

ಅಮೆರಿಕದ ಆಕ್ರಮಣದ ವಿಷವರ್ತುಲ



ಅಮೆರಿಕ ಒಂದು ದೇಶದ ಮೇಲೆ ಆಕ್ರಮಣ ಮಾಡಿತೆಂದರೆ, ಆ ದೇಶದ ಕತೆ ಮುಗಿಯಿತೆಂತಲೇ ಲೆಕ್ಕ. ಯಾಕೆಂದರೆ ಯಾವ 'ಸಮಸ್ಯೆ' 'ಪರಿಹರಿಸಲು' (ಅಮೆರಿಕನ್ ಸರಕಾರದ ಪ್ರಕಾರ) ಅದು ಆಕ್ರಮಣ ಮಾಡಿತ್ತೋ ಅದಂತೂ ಬಗೆಹರಿಯುವುದಿಲ್ಲ. ಬದಲಿಗೆ ಇನ್ನಷ್ಟು ಉಲ್ಬಣಗೊಳ್ಳುತ್ತದೆ. ಇನ್ನಷ್ಟು ಹೊಸ ಸಮಸ್ಯೆಗಳು ಹುಟ್ಟಿಕೊಂಡು, ಅಮೆರಿಕ ಮತ್ತು ಆ ದೇಶದ ಜನತೆ ಇಬ್ಬರೂ ಏನು ಮಾಡಲು ಆಗದ ಸ್ಥಿತಿ ಮುಟ್ಟುತ್ತಾರೆ. ಇಬ್ಬರಿಗೂ ಅಮೆರಿಕದ ಸೈನ್ಯ ಆ ದೇಶ ಬಿಡಬೇಕೆಂದು ಮನಸ್ಸಿದ್ದರೂ ಅದು ಸಾಧ್ಯವಾಗುವುದಿಲ್ಲ. 21ನೇ ಶತಮಾನದಲ್ಲಿ ಅಮೆರಿಕ 'ಮಾನವೀಯ ಕಾರಣಗಳಿಗೆ' ಆಕ್ರಮಣ ಮಾಢಿದ ದೇಶಗಳಲ್ಲಿ – ಅಫ್ಘಾನಿಸ್ತಾನ, ಇರಾಕ್, ಲಿಬ್ಯಾ– ಎಲ್ಲಾ ಇದೇ ಕತೆ. ಈಗ ಅದು ಸಿರಿಯಾದಲ್ಲೂ ಮುಂದೆ ಆಗುವ ಹಾಗೆ ಕಾಣುತ್ತಿದೆ. ಇದು ಯಾಕೆ ಹೀಗಾಗುತ್ತದೆ?

ಮಾನವೀಯ ಆಕ್ರಮಣದ ವಿಷವರ್ತುಲ

ಇರಾಕಿನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. 2003ರಲ್ಲಿ 'ದುಷ್ಟ ಪ್ರಜಾಪೀಡಕ ಅಮಾನವೀಯ ರಾಕ್ಷಸಿ ಸರ್ವಾಧಿಕಾರಿ' ಸದ್ದಾಂ ಹುಸೇನನ ದುರಾಡಳಿತದಲ್ಲಿ ನರಳುತ್ತಿರುವ ಇರಾಕಿ ಜನತೆಯನ್ನು 'ರಕ್ಷಿಸಲು' ಮತ್ತು 'ಪ್ರಜಾಪ್ರಭುತ್ವ' ಸ್ಥಾಪಿಸಲು ಆಕ್ರಮಣ ಮಾಡಲಾಯಿತು. ಈ 'ಮಾನವೀಯ ಆಕ್ರಮಣ' ಮತ್ತು ಆ ಮೇಲಿನ 'ಮಾನವೀಯ ಅಡಳಿತ' ಮತ್ತು 'ಪ್ರಜಾಪ್ರಭುತ್ವ'ದಲ್ಲಿ ಸುಮಾರು 6 ಲಕ್ಷ ಇರಾಕಿಗಳು ಸತ್ತರು. ಜನರ ಪರಮಾಡಳಿತ ಇರುವ ಪ್ರಜಾಪ್ರಭುತ್ವ ಒತ್ತಟ್ಟಿಗಿರಲಿ, ಕನಿಷ್ಟ ಭದ್ರತೆ, ಶಾಂತಿಯೂ ಇಲ್ಲವಾಗಿದೆ. ಯಾವುದೇ ಮಾನದಂಡ ಬಳಸಿದರೂ ಪರಿಸ್ಥಿತಿ ಸದ್ದಾಂ ಹುಸೇನನ 'ದುರಾಡಳಿತ'ಕ್ಕಿಂತಲೂ ಹದಗೆಟ್ಟಿದೆ.

ಇರಾಕಿನಲ್ಲಿ ಕಾಲಕಾಲಕ್ಕೆ ಚುನಾವಣೆ ನಡೆದು 'ಚುನಾಯಿತ' ಸರಕಾರಗಳು ಬಂದರೂ ಅಮೆರಿಕನ್ ಸೈನ್ಯ ಇಲ್ಲದೆ ಅವಕ್ಕೇ ಆಳಲು ಸಾಧ್ಯವಾಗಿಲ್ಲ. ಅಮೆರಿಕನ್ ಸೈನ್ಯದ ಯಮಬಲದೊಂದಿಗೂ ದೇಶದ ಬಹುಭಾಗ ಅದರ ನಿಯಂತ್ರಣದಲ್ಲಿ ಎಂದೂ ಇರಲಿಲ್ಲ. ದೇಶದ ಬಹುಭಾಗವನ್ನೂ ಸುನ್ನಿ, ಶಿಯಾ, ಕುರ್ದಿಶ್ ಸರಕಾರೇತರ ಪಡೆಗಳು ಆಳುತ್ತಿವೆ. ಸುನ್ನಿ, ಶಿಯಾ, ಕುರ್ದಿಶ್ ಜನತೆ ಪರಸ್ಪರ ಕಾದಾಡುವಂತೆ ಮಾಡಲಾಗಿದೆ. ರಾಜಧಾನಿ ಬಾಗ್ದಾದಿನಲ್ಲೂ ಸರಕಾರಕ್ಕೆ ಪೂರ್ತಿ ನಿಯಂತ್ರಣವಿಲ್ಲ. ಈ ಸರಕಾರಗಳು ಅಮೆರಿಕದ ಕೈಗೊಂಬೆಗಳಾಗಿವೆ. ಇರಾಕಿನಲ್ಲಿ ಅಡ್ರೆಸ್ಸೆ ಇಲ್ಲದಿದ್ದ ಅಲ್–ಖೈದಾದಂತಹ ಉಗ್ರಗಾಮಿ ಪಡೆಗಳು ಅಗಾಧವಾಗಿ ಬೆಳೆದಿವೆ. ಅಮೆರಿಕನ್ ತರಬೇತಿ ಪಡೆದ ಇರಾಕಿ ಸೈನ್ಯ ಮತ್ತು ಪೋಲಿಸುಗಳಿಗೆ ಕಾನೂನು ಮತ್ತು ಸು(ಅ)ವ್ಯವಸ್ಥೆಯ ಜವಾಬ್ದಾರಿ ವಹಿಸಿ ಅಮೆರಿಕನ್ ಸೈನ್ಯ ವಾಪಸಾದ ಮೇಲಂತೂ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ತೈಲ ಸ್ಥಾವರಗಳು ಮತ್ತು ಇತರ ಅಮೆರಿಕನ್ ಆರ್ಥಿಕ ಹಿತಾಸಕ್ತಿಗಳು ಬಿಟ್ಟರೆ ಇನ್ಯಾವುದಕ್ಕೂ ಭದ್ರತೆ ಇಲ್ಲ. ಇದು ಆಕಸ್ಮಿಕವೇನಲ್ಲ. ಅಮೆರಿಕದ ಆಕ್ರಮಣದ ಉದ್ದೇಶವಿದ್ದದ್ದೇ ಅದು.


ಕಳೆದ ವಾರ ಇರಾಕಿನ ಮೇಲೆ ಅಧ್ಯಕ್ಷ ಒಬಾಮ ವಿಮಾನದಾಳಿ ಘೋಷಿಸಿದ್ದಾರೆ. ಸಿರಿಯಾದ 5 ಸಾವಿರ 'ವಿರೋಧಿ ಪಡೆ'ಗಳನ್ನು ಸೌದಿ ಅರೇಬಿಯಾದಲ್ಲಿ ತರಬೇತಿ ಕೊಟ್ಟು ಸಜ್ಜುಗೊಳಿಸಲು 50 ಶತಕೋಟಿ ಡಾಲರು ಮಂಜೂರು ಮಾಡಿದ್ದಾರೆ. ಯಾಕೆ? ಇರಾಕಿನ ಬಹುಭಾಗ ಆಕ್ರಮಿಸಿಕೊಂಡು ಇನ್ನೊಂದು ದುಷ್ಟ ಶಕ್ತಿ 'ಇಸ್ಲಾಮಿಕ್ ಪ್ರಭುತ್ವ' ಸ್ಥಾಪಿಸಲು ಹೊರಟಿದೆಯಂತೆ. ಇದು ಇರಾಕಿಗೂ ಇಡೀ ಜಗತ್ತಿನ ಶಾಂತಿಗೂ ಅಪಾಯಕಾರಿಯಂತೆ. ಅರರೆ!! 2003ರ 'ಮಾನವೀಯ ಆಕ್ರಮಣ'ದ ನಂತರ ಎಲ್ಲವೂ ಸರಿಹೋಗಿತ್ತಲ್ಲ. ಆದ್ದರಿಂದ ಅಮೆರಿಕನ್ ಮಿಲಿಟರಿ ವಾಪಸು ಬೇರೆ ಹೋಗಿತ್ತಲ್ಲ. ಈ ದುಷ್ಟಶಕ್ತಿ ಎಲ್ಲಿಂದ ಹುಟ್ಟಿಕೊಂಡಿತು? ಇದರೊಂದಿಗೆ ಅಮೆರಿಕದ ಮಾನವೀಯ ಆಕ್ರಮಣದ ವಿಷವರ್ತುಲ ಒಂದು ಪೂರ್ಣ ಸುತ್ತು ಬಂದಂತಾಗಿದೆ.

ಯಾರಿವರು ಐಸ್ ಪಡೆಗಳು?

ಇದು ಇರಾಕಿನಲ್ಲಿ ಅಮೆರಿಕ ಮತ್ತು ಅದರ ಕೃಪಾಪೋಷಿತ ಸರಕಾರಗಳ ದುರಾಡಳಿತದ ಮತ್ತು ಸಿರಿಯಾದ ದುಷ್ಟ ಅಧ್ಯಕ್ಷನನ್ನು ಅಧಿಕಾರದಿಂದ ಇಳಿಸಲು ಹೊಸ ರೀತಿಯ ಪರೋಕ್ಷ 'ಮಾನವೀಯ ಆಕ್ರಮಣ'ದ ಕೂಸು. ಅಲ್–ಖೈದಾದ ದಾಯಾದಿಗಳಂತೆ ಕಾಣುವ ತಮ್ಮನ್ನು 'ಇಸ್ಲಾಮಿಕ್ ಪ್ರಭುತ್ವ' (ಅಥವಾ ಐಸಿಸ್ ಅಥವಾ ಈಗ ಐಎಸ್) ಎಂದು ಕರೆದುಕೊಳ್ಳುವ ಗೆರಿಲ್ಲಾ ಗುಂಪು ಇರಾಕಿನ ದೊಡ್ಡ ಭಾಗವನ್ನು ಅದರಲ್ಲೂ ಸುನ್ನಿ ಬಹುಸಂಖ್ಯಾತ ಪ್ರದೇಶವನ್ನು ಮಿಂಚಿನ ವೇಗದಿಂದ ಆಕ್ರಮಿಸಿಕೊಂಡಿದ್ದಾರೆ. ಸಿರಿಯಾದ ದೊಡ್ಡ ಭಾಗವನ್ನೂ ಆಕ್ರಮಿಸಿಕೊಂಡಿದ್ದಾರೆ. ಆದರೆ ಅವರು ಕಳೆದ ಕೆಲವು ವಾರಗಳಿಂದಲೇ ಇದನ್ನು ಮಾಡುತ್ತಿದ್ದಾಗ ಅಮೆರಿಕ ಸುಮ್ಮನೆ ಇತ್ತು. ಅವರು ತೈಲ ಸ್ಥಾವರಗಳು (ಮತ್ತು ಇರಾಕಿನಲ್ಲಿ ಅಮೆರಿಕನ್ ಹಿತಾಸಕ್ತಿ) ಇರುವ ಕುರ್ದಿಶ್ ಪ್ರದೇಶಕ್ಕೆ ಲಗ್ಗೆ ಇಡುತ್ತಿದ್ದಂತೆ ಎಚ್ಚತ್ತುಕೊಂಡು ವಿಮಾನ ದಾಳಿ ಘೋಷಿಸಿದೆ. ಮಾತ್ರವಲ್ಲ ಕುರ್ದಿಶ್ ಪ್ರದೇಶಕ್ಕೆ ನೀರು ಮತ್ತು ವಿದ್ಯುತ್ ಸರಬರಾಜು ಮಾಡುವ ಮೊಸುಲ್ ಅಣೆಕಟ್ಟು ಐಸ್ ವಶಕ್ಕೆ ಹೋಗುವುದರಲ್ಲಿತ್ತು.

ಐಸ್ ಪಡೆಗಳು ಅತ್ಯಂತ ಕ್ರೂರ ಮತ್ತು ಮಧ್ಯಮ ಯುಗೀನ ಮೌಲ್ಯಗಳಿರುವ ಮತಾಂಧ ಗುಂಪು ಎಂಬ ಬಗ್ಗೆ ಸಂಶಯವಿಲ್ಲ. ಅವರು ಈ ವರೆಗೆ ಸುನ್ನಿಯೇತರ ಮುಸ್ಲಿಮರು ಮತ್ತು ಇತರ ಧರ್ಮಿಯರ ಮೇಲೆ ನಡೆಸಿರುವ ಕ್ರೌರ್ಯ–ಕ್ಕೆ ಮಿತಿಯೇ ಇಲ್ಲ. ಬ್ರಿಟಿಶ್ ಮತ್ತು ಅಮೆರಿಕನ್ ನಾಗರಿಕರ ಕ್ರೂರ ಹತ್ಯೆ ಸಹ ಭೀಷಣವಾದ್ದು. ಇಂತಹ ಗುಂಪಿಗೆ ಸಿರಿಯಾ, ಇರಾಕಿ ದೊಡ್ಡ ದೇಶಗಳ ಮಿಲಿಟರಿಯ ವಿರುದ್ಧ ಸೆಣಸಾಡಿ ಗೆಲ್ಲಲು ಬೇಕಾದ ಹಣ, ಅತ್ಯಾಧುನಿಕ ಶಸ್ತ್ರಾಸ್ತ್ರ, ತರಬೇತಿ ಹೋರಾಟಗಾರರ ಪಡೆ ಎಲ್ಲಿಂದ ಬಂತು? ಇದು ಯಾವುದೇ ದೇಶದ ಸರಕಾರದ ಬೆಂಬಲ ಇಲ್ಲದೆ ಸಾಧ್ಯವಿಲ್ಲ. ಇದು ಯಾವ ಸರಕಾರಗಳಿಂದ ಮತ್ತು ಯಾಕೆ ಬಂದಿದ್ದು ಎಂಬುದು ಈಗ ಸಾರ್ವಜನಿಕ ಗುಟ್ಟು.

ಇದು ಸಿರಿಯಾದಲ್ಲಿ ಅಧ್ಯಕ್ಷ ಬಶಾರ್ ಅಲ್–ಅಸಾದ್ ಸರಕಾರ ಉರುಳಿಸಲು ವಿರೋಧಿ 'ರಾಷ್ಟ್ರೀಯ ಉದಾರವಾದಿ' ಶಕ್ತಿಗಳಿಗೆ ಕೊಡಲಾದ 'ಮಾನವೀಯ ಬೆಂಬಲ'ದಿಂದ ಬಂದಿದ್ದು. ಇದನ್ನು ಕೊಟ್ಟವರು ಅಮೆರಿಕ, ಯುರೊಪಿಯನ್ ಕೂಟ, ಸೌದಿ ಅರೇಬಿಯ, ಕತಾರ್, ತುರ್ಕಿ ಸರಕಾರಗಳು. ಇದರ ಸಂಯೋಜಕ ಅಮೆರಿಕದ ಸಿಐಎ. ಐಸ್ ಪಡೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಮೆರಿಕನ್, ಬ್ರಿಟಿಶ್ ಮತ್ತಿತರ ಯುರೋಪಿಯನ್ ಕೂಟದ ನಾಗರಿಕರು ಇರುವುದು ಆಶ್ಚರ್ಯವೇನಲ್ಲ. ಇವರಲ್ಲಿ ಬಹುಪಾಲು ಸಿಐಎ ಕಳಿಸಿದ ಮಿಲಿಟರಿ ಪರಿಣತ–ರೇ ಇರಬಹುದು. ಕೆಲವರು ಮಾತ್ರ ಪಾಶ್ಚಿಮಾತ್ಯ ಸರಕಾರ ಮತ್ತು ಸಮಾಜಗಳಲ್ಲಿ ಮುಸ್ಲಿಂ–ದ್ವೇಷದಿಂದ ಕುಪಿತರಾದವರು. ಅಮೆರಿಕನ್, ಬ್ರಿಟಿಶ್ ನಾಗರಿಕರನ್ನು ಲೈವ್ ವಿಡಿಯೋಗಳಲ್ಲಿ ಹತ್ಯೆಗೈದವರು ಐಸ್ ಪಡೆಗಳಲ್ಲಿರುವ ಇಂತಹ ಅಮೆರಿಕನ್, ಬ್ರಿಟಿಶ್ ನಾಗರಿಕರೇ.



ಅಮೆರಿಕದ ಹೊಸ ಭಯೋತ್ಪಾದಕ ಪ್ರಾಡಕ್ಟ್!

ಸಿರಿಯಾದ ಸರಕಾರದ ವಿರುದ್ಧ ಹೋರಾಡುತ್ತಿದ್ದ ಯಾವ ಗುಂಪೂ ಸಹ 'ರಾಷ್ಟ್ರೀಯ ಉದಾರವಾದಿ' ಅಲ್ಲ ಎಂದು ಹಲವು ವರದಿಗಳು ಹೇಳಿವೆ. 1980ರ ದಶಕದಲ್ಲಿ ಸೋವಿಯೆಟ್ ಸೈನ್ಯದ ವಿರುದ್ಧ ಅಫ್ಘಾನಿಸ್ತಾನದಲ್ಲಿ ಹೋರಾಡಲು ಸೈದ್ಧಾಂತಿಕ–ಮಿಲಿಟರಿ ತರಬೇತಿ ಕೊಟ್ಟು ಅಮೆರಿಕ ಮತ್ತು ಪಶ್ಚಿಮ ಏಶ್ಯಾದ ಮಿತ್ರದೇಶಗಳು ಸಂಘಟಿಸಿದ ಅಲ್–ಖೈದಾದ ಜೆಹಾದಿ ಗೆರಿಲ್ಲಾಗಳು. ಅವರಲ್ಲಿ ಹಲವರು ಲಿಬ್ಯಾ, ಯೆಮೆನ್, ಸಿರಿಯಾಗಳಲ್ಲಿ ಹೋರಾಟಕ್ಕೆ ಇಳಿದಿದ್ದು ಅಲ್ಲದೆ, ಹೊಸ ಅಲ್–ಖೈದಾದ ದಾಯಾದಿಗಳಂತಿರುವ ಹಲವು ಪಡೆಗಳು ಇಲ್ಲಿ ಸೇರಿಕೊಂಡವು. ಇಂತಹ ಪಡೆಗಳಿಗೆ ಅಮೆರಿಕ ಮತ್ತು ಈ ಪ್ರದೇಶದ ಮಿತ್ರದೇಶಗಳ ಸರಕಾರಗಳು ಎಲ್ಲಾ ರೀತಿಯ ಬೆಂಬಲ ಕೊಟ್ಟಿವೆ. ಸಿರಿಯಾದ ಮೇಲೆ ದಾಳಿ ಮಾಡಲು ತುರ್ಕಿ ತನ್ನ ಗಡಿ ಪ್ರದೇಶಗಳಲ್ಲಿ ನೆಲೆಗಳನ್ನು ನಿರ್ಮಿಸಿತ್ತು. ಇರಾಕಿನಲ್ಲಿ ಅಮೆರಿಕನ್ ಆಕ್ರಮಣದ ನಂತರ ಅದರ ಅತಿಕ್ರಮಣದ ವಿರುದ್ಧ ನಡೆದ ಪ್ರತಿರೋಧದಲ್ಲಿ ಅಲ್–ಖೈದಾ ಮತ್ತಿತರ ಸುನ್ನಿ ಜೆಹಾದಿ ಗುಂಪಿಗಳಿಗೆ ಕುಮ್ಮಕ್ಕು ಸಿಕ್ಕಿತ್ತು. ಅಮೆರಿಕನ್ ಕೈಗೊಂಬೆ ಸರಕಾರಗಳು ಸುನ್ನಿ ಅಲ್ಪಸಂಖ್ಯಾತರ ವಿರುದ್ಧ ತೀವ್ರ ಪಕ್ಷಪಾತ ತೋರಿಸಿದ್ದೂ ಇದಕ್ಕೆ ಪೂರಕವಾಯಿತು. ಸಿರಿಯಾದಲ್ಲಿ ಹೋರಾಡುತ್ತಿದ್ದ ಮತ್ತು ಈ ಇರಾಕಿ ಗುಂಪುಗಳೂ ಸೇರಿಕೊಂಡೇ ಐಸ್ ರೂಪುಗೊಂಡದ್ದು.

ಆದರೆ ಈಗ (ಹಿಂದೆ ಅಫ್ಘಾನಿಸ್ತಾನದಲ್ಲಿ ಸೋವಿಯೆಟ್ ವಿರುದ್ಧ ಹುಟ್ಟು ಹಾಕಿದ ಒಸಾಮ ಬಿನ್ ಲಾಡೆನ್ ಮತ್ತು ಅಲ್–ಖೈದಾ ಅಮೆರಿಕದ ಮೇಲೆ ತಿರುಗಿ ಬಿದ್ದಂತೆ) ಐಸ್ ಪಡೆ ಅಮೆರಿಕದ ವಿರುದ್ಧ ತಿರುಗಿ ಬಿದ್ದಿದೆ. ಇರಾಕ್, ಸಿರಿಯಾ ಐಕ್ಯಗೊಳಿಸಿ ಮಧ್ಯಯುಗೀನ ಖಲೀಫರಂತೆ ಆಳಹೊರಟಿದೆ. ಮುಂದೆ ಪಶ್ಚಿಮ ಏಶ್ಯಾದ ಎಲ್ಲಾ ಅರಬ್ ದೇಶಗಳನ್ನು ಈ 'ಖಲಿಫತ್'ನಲ್ಲಿ ಸೇರಿಸುವ ಭಾರೀ ಕನಸು ಹೊತ್ತಿದೆ. ಇದು ಇಡೀ ಪಶ್ಚಿಮ ಏಶ್ಯಾ ಪ್ರದೇಶಕ್ಕೆ ಮತ್ತು ವಿಶ್ವಶಾಂತಿಗೆ ಮಾರಕ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಅದನ್ನು ಬಗ್ಗು ಬಡಿಯುವುದು ಹೇಗೆ? ಅದನ್ನು ಹುಟ್ಟಿಸಿದವರು ಅದನ್ನು ಬಗ್ಗು ಬಡಿಯುತ್ತಾರೆ ಎಂದರೆ ನಂಬಬಹುದೆ?

ಐಸ್ ಬಗ್ಗು ಬಡಿಯುವುದು ಹೇಗೆ?

ಐಸ್ ವಿರುದ್ಧ ನಿಜವಾಗಿಯೂ ಹೋರಾಡುತ್ತಿರುವುದು ಸಿರಿಯಾದ ಸರಕಾರ, ಲೆಬನಾನಿನ ಹಿಜಬುಲ್ಲಾ, ತುರ್ಕಿ ಮತ್ತು ಇರಾಕಿನ ಕುರ್ದಿಶ್ ಪಡೆಗಳು, ಈ ನಾಲ್ಕು ಗುಂಪುಗಳಲ್ಲಿ ಮೊದಲ ಮೂರನ್ನು ಅಮೆರಿಕ ಮತ್ತು ಅದರ ಮಿತ್ರದೇಶಗಳು 'ಭಯೋತ್ಪಾದಕ' ಎಂಬ ಲೇಬಲ್ ಹಚ್ಚಿವೆ. ಇರಾಕಿನ ಕುರ್ದಿಶ್ ಪಡೆಗಳು ಮಾತ್ರ ಐಸ್ ಪಡೆಗಳನ್ನು ಸೋಲಿಸಲು ಸಾಧ್ಯವಿಲ್ಲ. ಉಳಿದ ಮೂರೂ ಶಕ್ತಿಗಳಿಗೆ ಅಂತರ್ರಾಷ್ಟ್ರೀಯ ಬೆಂಬಲ ಕೊಡಬೇಕು. ಮುಖ್ಯವಾಗಿ ಇರಾನ್, ರಶ್ಯಾದ ಜತೆ ಮಾತುಕತೆ ನಡೆಸಬೇಕು. ಇದರ ಬದಲಾಗಿ ಸಿರಿಯಾದ ಐಸ್ ಸೋಲಿಸಲು ಸಿರಿಯಾದ ಮೇಲೆ 'ವಿಮಾನ ಹಾರಾಟ' ನಿಷೇಧಿಸಬೇಕು ಎಂದು ತುರ್ಕಿ, ಅಮೆರಿಕಗಳು ಯೋಜಿಸುತ್ತಿವೆ. ಐಸ್ ಪಡೆಗಳ ಬಳಿ ಯಾವುದೇ ವೈಮಾನಿಕ ಪಡೆ ಇಲ್ಲ. ಸಿರಿಯಾದ ಮೇಲೆ 'ವಿಮಾನ ಹಾರಾಟ' ನಿಷೇಧದಿಂದ ಕಷ್ಟಕ್ಕೊಳಗಾಗುವುದು ಐಸ್ ವಿರುದ್ಧ ಹೋರಾಡುತ್ತಿರುವ ಸಿರಿಯಾದ ಸರಕಾರಕ್ಕೆ ಮಾತ್ರ. ಇದು ಐಸ್ ಪಡೆಗಳನ್ನು ಸಬಲೀಕರಿಸಿದಂತೆ, ಬೆಂಬಲಿಸಿದಂತೆ.

ಅಮೆರಿಕ ಮತ್ತು ಅದರ ಮಿತ್ರದೇಶಗಳು ಯಾಕೀ ಧೋರಣೆ ಅನುಸರಿಸುತ್ತಿವೆ. ಇರಾಕಿ, ಸಿರಿಯಾ ಮತ್ತು ಅರಬ್ ದೇಶಗಳನ್ನು ಒಡೆದು ಒಡೆದು ದುರ್ಬಲ ಕೈಗೊಂಬೆ ಸರಕಾರಗಳಿರುವ ಸಣ್ಣ ಸಣ್ಣ ದೇಶಗಳಾಗಿಸಿ ತೈಲ ಮತ್ತಿತರ ➥

ಉಂಡ್ರಾಲ ದೊಡ್ಡಿಯಲ್ಲಿ......

ಪುಟ 12 ರಿಂದ

ಕೊಂಡು ಹೋಗಿ, ಅವರ ಮೇಲೆ ಹಲ್ಲೆ ಮಾಡಿ ಕೇಸ್ ಹಾಕಲಾಗುತ್ತಿದೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಡಿಯಲ್ಲಿ ಸಂಘಟಿತರಾಗಿರುವ ಇವರು ಈ ದೌರ್ಜನ್ಯಗಳ ವಿರುದ್ಧ ಇತ್ತೀಚೆಗೆ ಉಂಡ್ರಾಲದೊಡ್ಡಿ ಗ್ರಾಮದಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಬೃಹತ್ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ್ದರು. ಉಂಡ್ರಾಲದೊಡ್ಡಿ ಗ್ರಾಮದ ಸುತ್ತಲಿನ ಗ್ರಾಮಗಳ ಸುಮಾರು ಒಂದು ಸಾವಿರ ಜನ ಈ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯನ್ನು ಉದ್ದೇಶಿಸಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಮಾತನಾಡುತ್ತಾ ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಕ್ರಮವನ್ನು ಎಲ್ಲ ಗ್ರಾಮಗಳ ಸಾಗುವಳಿದಾರರು ಒಗ್ಗಟ್ಟಾಗಿ ಎದುರಿಸಬೇಕು ಎಂದು ಕರೆ ನೀಡಿದರು. ಗ್ರಾಮಸ್ಥರೆಲ್ಲರೂ ಬಡವರ ಈ ಹೋರಾಟವನ್ನು ಬೆಂಬಲಿಸಬೇಕೆಂದು ಮನವಿ ಮಾಡಿದ ಅವರು ಭೂರಹಿತ ಬಡವರಿಗೆ ಭೂಮಿ ದೊರೆಯುವಂತಾದರೆ ಗ್ರಾಮಗಳ ಅಭಿವೃದ್ಧಿ ಸಹಜವಾಗಿ ಆಗುತ್ತದೆ ಎಂದು ವಿವರಿಸಿದರು. ಪ್ರಾಂತ ರೈತ ಸಂಘದ ಮುಖಂಡರಾದ ಕೆ.ಜಿ. ವೀರೇಶ್ ತೆಲುಗು ಭಾಷೆಯಲ್ಲಿ ಮಾತನಾಡಿ ಭೂ ಹೋರಾಟದ ಮಹತ್ವವನ್ನು ಅವರ ಮನಮುಟ್ಟುವಂತೆ ವಿವರಿಸಿದರು. ವಿವಿಧ ಗ್ರಾಮಗಳ ಮುಖ್ಯಸ್ಥರೂ ಸಹ ಮಾತನಾಡಿದರು. ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಮುಖಂಡರಾದ ಕರಿಯಪ್ಪ ಅಚ್ಚೊಳ್ಳಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಉಂಡ್ರಾಲದೊಡ್ಡಿಯ ಮುದ್ದಪ್ಪ, ಬಾಪೂರಿನ ಸತ್ಯಪ್ಪ, ಉಂಡ್ರಾಲ ದೊಡ್ಡಿಯ ಈಶ್ವರಪ್ಪ, ಸಿಂಗನೋಡಿಯ ರಾಮಯ್ಯ, ಚಂದ್ರಬಂಡಾ ಗ್ರಾಮದ ಬಸವರಾಜ ಹಡಪದ, ಅಯಜಪುರದ ಭೀಮಣ್ಣ ಮತ್ತು ಮಂಡಲಗೇರಾದ ಈರಣ್ಣ ವಡ್ಡರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಅಕ್ಟೋಬರ್ 13 ರಿಂದ ಬೆಂಗಳೂರಿನಲ್ಲಿ ಆರಂಭವಾಗಲಿರುವ ಬಗರ್‌ಹುಕುಂ ಸಾಗುವಳಿದಾರರ ಮತ್ತು ನಿವೇಶನರಹಿತರ ಅನಿರ್ದಿಷ್ಟ ಸಾಮೂಹಿಕ ಧರಣಿಯಲ್ಲಿ ಈ ಪ್ರದೇಶದಿಂದ ಕನಿಷ್ಠ 500 ಜನ ಕೂಲಿಕಾರರು ಭಾಗವಹಿಸಲು ತೀರ್ಮಾನ ಮಾಡುವುದರೊಂದಿಗೆ ಸಮಾವೇಶವನ್ನು ಮುಕ್ತಾಯಗೊಳಿಸಲಾಯಿತು.

– ಕರಿಯಪ್ಪ ಅಚ್ಚೊಳ್ಳಿ

ಕಲಘಟಗಿ: ಬಗರ್‌ಹುಕುಂ.....

ಪುಟ 4 ರಿಂದ

ಮುಂತಾದವರು ಪಾದಯಾತ್ರೆ, ಧರಣಿಯನ್ನು ಬೆಂಬಲಿಸಿ ಮಾತನಾಡಿದರು. ಧರಣಿಯಲ್ಲಿ ಧಾರವಾಡ ತಾಲೂಕಿನ ವಿವಿದ ಗ್ರಾಮಗಳ ರೈತರು ಭಾಗವಹಿಸಿದ್ದರು. ಪಾದಯಾತ್ರೆಯ ನೇತೃತ್ವವನ್ನು ಹೋರಾಟ ಸಮಿತಿ ಸಂಚಾಲಕರಾದ ಬಸನಗೌಡ ಕೋಣನತಂಬಿಗಿ, ದೊಡ್ಡೇಶಪ್ಪ ಕುರಬರ, ಚನ್ನಯ್ಯ ಹೀರೆಮಠ, ಈಶ್ವರಪ್ಪ ಜಾವೂರ, ರಮೇಶ ಭರ್ಗೆ, ಬಸಪ್ಪ ಸಾದರ, ಬಸಪ್ಪ ಬಡಿಗೇರ, ಬಸವರಾಜ ಬೆಳ್ಳಿಗಟ್ಟಿ, ನಾಗಪ್ಪ ಹಿರೆಬೈಲ, ಬಸಪ್ಪ ಜಾವಾಯಿ ಮುಂತಾದವರು ವಹಿಸಿದರು.

ಚರ್ಚೆ ನಡೆಸದ ಜಿಲ್ಲಾಡಳಿತ

ಬಗರ್‌ಹುಕುಂ ಸಾಗುವಳಿದಾರರ ಸಮಸ್ಯೆಗಳ ಕುರಿತು ಸಭೆ ನಡೆಸಿ ಚರ್ಚಿಸುವುದಾಗಿ ತಿಳಿಸಿದ್ದ ಜಿಲ್ಲಾಡಳಿತ ಯಾವುದೇ ಚರ್ಚೆ ಮಾಡದೇ ಸುಪ್ರಿಂ ಕೋರ್ಟ್ ನಿರ್ದೇಶನದ ನೆಪವೊಡ್ಡಿ ಧಾರವಾಡ ಹಾಗೂ ಕಲಘಟಗಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ವ್ಯವಸ್ಥಿತವಾಗಿ ಒಕ್ಕಲೆಬಿಸುವ ತಂತ್ರ ಅನುಸರಿಸಿತು. ಆತಂಕದಲ್ಲಿರುವ, ಯಾವ ಸಂದರ್ಭದಲ್ಲಿ ಏನಾಗುವದೋ ಎಂಬ ಚಿಂತೆಯಲ್ಲಿರುವ ಬೀದಿ ಪಾಲಾಗುತ್ತಿರುವ ರೈತರು ಸೆಪ್ಟೆಂಬರ್–29, 2014 ರಂದು ಕಲಘಟಗಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಬಗರ್‌ಹುಕುಂ ಸಾಗುವಳಿದಾರರ ಹೋರಾಟ ಸಮಿತಿಯ ಸಭೆಯನ್ನು ನಡೆಸಿ ಅಂದು ಕಲಘಟಗಿ ತಹಶೀಲ್ದಾರ ಎದುರು ತಕ್ಷಣಕ್ಕೆ ತೆರವು ಕಾರ್ಯಾಚರಣೆ ನಿಲ್ಲಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿ ಮನವಿ ನೀಡಿದರು. ಇಲ್ಲದೆ ಹೋದರೆ ಅಕ್ಟೋಬರ್ 13, 2014 ರಂದು ವಿಧಾನ ಸೌಧದ ಎದುರು ಅನಿರ್ದಿಷ್ಟಾವದಿ ಬೃಹತ್ ಧರಣಿ ನಡೆಸುವುದಾಗಿ ಸರಕಾರವನ್ನು ಎಚ್ಚರಿಸಿದರು.

–ಮಾರುತಿ ಅಂಬಿಗೇರ

➥

ಆರ್ಥಿಕ ಹಿತಾಸಕ್ತಿ ಕಾಪಾಡಿಕೊಳ್ಳುವುದು, ಅಲ್ಲಿನ ಸಂಪತ್ತು ಲೂಟಿ ಹೊಡೆಯುವುದು ಅಮೆರಿಕ ಮತ್ತು ಯುರೋಪಿಯನ್ ಸಾಮ್ರಾಜ್ಯಶಾಹಿ ದೇಶಗಳ ಹುನ್ನಾರ. ಇರಾಕನ್ನು ಸುನ್ನಿ, ಶಿಯಾ, ಕುರ್ದಿಶ್ ದೇಶಗಳಾಗಿ ಒಡೆಯಬೇಕು ಎಂಬ ಅಮೆರಿಕದ ಯೋಜನೆ ಜಾರಿಗೊಳಿಸಲೆಂದೇ ಇರಾಕಿ ಸರಕಾರ ಮತ್ತು ಸೈನ್ಯವನ್ನು ಬೇಕೆಂತಲೇ ದುರ್ಬಲಗೊಳಿಸಲಾಗಿತ್ತು. ಹಾಗೇನೇ ಲಿಬ್ಯಾ, ಸಿರಿಯಾಗಳನ್ನು ಒಡೆದು ಒಡೆದು ಚೂರು ಮಾಡಬೇಕು ಎಂಬ ಯೋಜನೆ ಇನ್ನೇನು ಸಫಲಗೊಳ್ಳುವುದರಲ್ಲಿ ಇತ್ತು. ಐಸ್ ಪಡೆಗಳು ಅಮೆರಿಕದ 'ಪಶ್ಚಿಮ ಏಶ್ಯಾ ಸ್ಕ್ರಿಪ್ಟ್' ಗೆ 'ಕಟ್ ಕಟ್' ಅಂತ ಹೇಳಿವೆ.

ಅಮೆರಿಕ ತನ್ನ 'ಸ್ಕ್ರಿಪ್ಟ್' ಪೂರ್ತಿ ಬಿಸಾಕಿದರೇ ಮಾತ್ರ ಐಸ್ ಪಡೆಗಳನ್ನು ಸೋಲಿಸಲು ಸಾಧ್ಯ. ಐಸ್ ಪಡೆಗಳನ್ನು ನಿಜವಾಗಿ ಸೋಲಿಸುವ ಉದ್ದೇಶದ ಅಮೆರಿಕದ ಪ್ರಾಮಾಣಿಕತೆ ಸಂಶಯಾಸ್ಪದ. ಅಮೆರಿಕ ಐಸ್ ಪಡೆಗಳನ್ನು ಸೋಲಿಸುವ ಪ್ರಯತ್ನದಲ್ಲಿ ವೈಮಾನಿಕ ಬಾಂಬ್ ದಾಳಿಯಿಂದ ಲಕ್ಷಾಂತರ ಇರಾಕಿಗಳ ನರಮೇಧ ನಡೆಸುವ, ಪುನಃ (ಈಗ ಅದನ್ನು ನಿರಾಕರಿಸಿದ್ದರೂ) ಪುನಃ ಭೂಸೈನ್ಯ ಬಳಸಿ ವಶಪಡಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಆಗ ಮೇಲೆ ವಿವರಿಸಿದ ವಿಷವರ್ತುಲ ಪೂರ್ಣ ಸುತ್ತು ಬಂದಿರುತ್ತದೆ. ಇನ್ನಷ್ಟು ಮತ್ತಷ್ಟು ವಿನಾಶ ಬಿಟ್ಟರೆ ಇರಾಕಿ ಜನತೆಗೆ ಇನ್ನೇನೂ ದಕ್ಕಿರುವುದಿಲ್ಲ. ●

ಈ ವಾರ........

ಪುಟ 3 ರಿಂದ

ರೂಪಿಸಲಾದ ಕಾನೂನಂತೆ(ಮಸೂದೆ2007) ಯಾರೇ ಭೂಮಿ ಅತಿಕ್ರಮಿಸಿದ್ದಾರೆಂದು ಗುರುತಿಸಲಾಗಿದೆಯೋ ಅವರನ್ನೆಲ್ಲಾ ಒದ್ದೋಡಿಸಿ ಭೂಮಿ ವಶಪಡಿಸಿಕೊಳ್ಳಲು ಸರಕಾರಕ್ಕೆ ಅಧಿಕಾರವನ್ನು ನೀಡುತ್ತದೆ. ಒಂದೆಡೆ ನ್ಯಾಯಾಲಯದ ನಿರ್ದೇಶನಗಳು, ಮತ್ತೊಂದೆಡೆ ಕಾನೂನಿನ ಕತ್ತಿಗಳು. ಇವುಗಳಿಂದಾಗಿ ಅಂತಿಮವಾಗಿ ಬಲಿಯಾಗುವವರು ಸಣ್ಣ ಹಿಡುವಳಿದಾರರು, ಭೂರಹಿತರು. ಇಲ್ಲಿ ಸಿದ್ದರಾಮಯ್ಯನವರು 10 ಎಕರೆವರೆಗೂ ಹೊಂದಿದ ಸಣ್ಣ ಹಿಡುವಳಿದಾರರ ರಕ್ಷಣೆಗೆ ತಾನು ಬದ್ಧನೆಂದು ಹೇಳುತ್ತಿದ್ದರೂ ವಾಸ್ತವದಲ್ಲಿ ಅದು ಸಾಧ್ಯವೇ ಇಲ್ಲ. ಹಾಗಾಗಬೇಕಾದರೆ ಈಗಿನ ಕಾನೂನು ತಿದ್ದುಪಡಿಯಾಗಲೇಬೇಕು. ಆದರೇನು ಮಾಡುವುದು ಅದು ರಾಷ್ಟ್ರಪತಿಗಳ ಕಪಾಟಿನಲ್ಲಿ ಭದ್ರವಾಗಿ ಮಲಗಿದೆ. ಮೇಲಾಗಿ ಸಹಿ ಹಾಕಿದ ಮೇಲೆಯೇ ಏನಾದರೂ ತಿದ್ದುಪಡಿ ತರಬಹುದು. ಸದನ ಅಂಗೀಕರಿಸಿರುವುದರಿಂದ ಮತ್ತೆ ಸದನವೇ ತಿದ್ದುಪಡಿ ಮಾಡಬೇಕು. ಈಗ ಸಾಮಾನ್ಯರ ಪರವೆಂದು ನಾಟಕವಾಡುವ ಬಿಜೆಪಿ, ಜೆಡಿ(ಎಸ್), ಕಾಂಗ್ರೆಸ್ ಪಕ್ಷಗಳು ಒಪ್ಪಬೇಕು!

ಅಂತೂ 'ದೊಡ್ಡವರಿಗೆ' ನಿರಾಂತಕ!
ಸಾಮಾನ್ಯರಿಗೆ ನಿತ್ಯ ಆತಂಕ, ಬದುಕು ನರಕ! ●

ಆಕಾಶವಾಣಿ–ದೂರದರ್ಶನ : ಸರ್ಕಾರ್–ಪರಿವಾರ್

ಪುಟ 13 ರಿಂದ

ಎನಿಸಿದ ಈ ನೇರಪ್ರಸಾರ ನೀಡಿದ ಅಮೋಘ 'ಸಂದೇಶ'ವಾದರೂ ಏನು?–ಬಾಂಗ್ಲಾದೇಶಿ ವಲಸಿಗರು, ಮಾಂಸಾಹಾರ, ಚೀನಾದಲ್ಲಿ ತಯಾರಾದ ವಸ್ತುಗಳು ಇತ್ಯಾದಿ. ಆರೆಸ್ಸೆಸ್ ಒಂದೊಮ್ಮೆ ಮಹಾತ್ಮ ಗಾಂಧಿಯವರ ಹತ್ಯೆಯ ಹಿನ್ನೆಲೆಯಲ್ಲಿ ನಿಷೇಧಕ್ಕೆ ಒಳಗಾದ ಸಂಘಟನೆ. ಅದೇ ರೀತಿ ಜಮಾತ–ಎ–ಇಸ್ಲಾಮಿ, ಖಾಲಿಸ್ತಾನೀ ಸಂಘಟನೆಗಳು ವಿಭಜನಕಾರೀ ಕೃತ್ಯಗಳಲ್ಲಿ ತೊಡಗಿವೆ ಎಂದು ನಿಷೇಧಿಸಲ್ಪಟ್ಟಿದ್ದವು. ಅವರ ಮುಖಂಡರ ಭಾಷಣಗಳೂ ಸುದ್ದಿಯೋಗ್ಯವೆನಿಸಬಹುದಲ್ಲವೇ?. ಅಂದರೆ ಅವುಗಳನ್ನೂ ಪ್ರಸಾರ ಮಾಡಲಾಗುತ್ತದೆಯೇ? ನಾವು ನಮ್ಮ ಜಾತ್ಯಾತೀತ ಸಂವಿಧಾನಕ್ಕೆ ಬದ್ಧರಾಗಿರುವ ವರೆಗೆ ಇದು ಸಾಧ್ಯವೇ ಎಂದು ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚೂರಿ ಪ್ರಶ್ನಿಸಿದ್ದಾರೆ.

ಹತ್ತು ವರ್ಷ ಕೋಮುಗಲಭೆಗಳು ಬೇಡವೆಂದ ಪ್ರಧಾನಿಗಳ ಕ್ಷೇತ್ರದಲ್ಲೇ ಕೋಮು ಗಲಭೆ

ಗುಜರಾತಿನ 2002ರ ಹತ್ಯಾಕಾಂಡದ ಹಿನ್ನೆಲೆಯಲ್ಲಿ ವೀಸಾ ನಿರಾಕರಿಸಲ್ಪಟ್ಟಿದ್ದ ಮೋದಿಯವರು ಪ್ರಧಾನ ಮಂತ್ರಿಯಾಗಿ ಅದೇ ಅಮೆರಿಕಾದಲ್ಲಿ ವಿಜಯದುಂದುಭಿ ಮೊಳಗಿಸುತ್ತಿದ್ದಾರೆ ಎನ್ನುತ್ತಿದ್ದಾಗಲೇ ನಾಲ್ಕುತಿಂಗಳ ಹಿಂದಷ್ಟೇ ಅವರನ್ನು ಭಾರೀ ಬಹುಮತದಿಂದ ಗೆಲ್ಲಿಸಿದ ವಡೋದರಾ ಕೋಮು ಗಲಭೆಗೆ ತುತ್ತಾಗಿ ಎರಡು ಜೀವಗಳ ಬಲಿ ತೆಗೆದುಕೊಂಡಿತು. 140 ಮಂದಿಯನ್ನು ಗುಜರಾತ್ ಪೋಲೀಸರು ಬಂಧಿಸಿದರು.

ನೋಡಿ ನಾವು ಅಧಿಕಾರ ನಡೆಸುವಲ್ಲಿ ಕೋಮು ಗಲಭೆಗಳೇ ನಡೆಯುವುದಿಲ್ಲ ಎಂದು ಹೇಳಿಕೊಳ್ಳುವುದು ಇದುವರೆಗೆ ಬಿಜೆಪಿಯವರ ಚಾಳಿಯಾಗಿತ್ತು. ಸ್ವತಃ ಪ್ರಧಾನಿಯವರೇ ಇನ್ನು ಹತ್ತು ವರ್ಷಗಳ ಕಾಲ ಕೋಮುಗಲಭೆಗಳಿಗೆ ವಿರಾಮ ಕೊಡಿ ಎಂದರೂ ಕೇಳದೆ ಈ ಗಲಭೆ ನಡೆದಿದೆ. ಮುಸ್ಲಿಮರ ಭಾವನೆಯನ್ನು ಕೆದಕುವ ಸುಳ್ಳು ಚಿತ್ರವೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರಿಂದ ಈ ಗಲಭೆ ನಡೆಯಿತು ಎನ್ನಲಾಗಿದೆ. ಅಲ್ಲದೆ ಗುಜರಾತ್ ರಾಜ್ಯವಿಡೀ ನವರಾತ್ರಿ ಉತ್ಸವ ಸಂದರ್ಭದಲ್ಲಿ ಸಂಘಪರಿವಾರದವರು ನಡೆಸಿದ 'ಲವ್‌ಜಿಹಾದ್' ಪ್ರಚಾರ ಇಂತಹ ವಾತಾವರಣ ನಿರ್ಮಿಸಿದೆ ಎಂದೂ ಹೇಳಲಾಗಿದೆ.

ಈ ವಾರ ಈದ್ ಹಬ್ಬದ ಹಿಂದಿನ ದಿನ ದೇಶದ ರಾಜಧಾನಿಯಲ್ಲೇ, ಕೋಮು ಗಲಭೆಗಳನ್ನು ಎಬ್ಬಿಸಬೇಡಿ ಎಂದು ಪ್ರಧಾನ ಮಂತ್ರಿಗಳು ಕರೆ ನೀಡಿದ ಕೆಂಪುಕೋಟೆಯಿಂದ ಕೆಲವೇ ಮೈಲಿಗಳ ದೂರದಲ್ಲಿ ರುವ ಬವನಾ ಪುನರ್ವಸತಿ ಕಾಲನಿಯಲ್ಲಿ ಗಲಭೆ ಸೃಷ್ಟಿಸುವ 'ಹಿಂದೂ ಕ್ರಾಂತಿಕಾರಿ ಸೇನೆ' ಎಂಬ ಪರಿವಾರಸ್ಥ ಸಂಘಟನೆಯ ಪ್ರಯತ್ನವನ್ನು ಆ ಪ್ರದೇಶದ ಜನತೆಯ ಐಕ್ಯತೆ ಮತ್ತು ಸಿಪಿಐ(ಎಂ)ನ ಮಧ್ಯಪ್ರವೇಶದಿಂದಾಗಿ ವಿಫಲಗೊಳಿಸ ಸಾಧ್ಯವಾಯಿತು.

ಬಡ ಮುಸ್ಲಿಮರು ಗಮನಾರ್ಹ ಸಂಖ್ಯೆಯಲ್ಲಿ ಇರುವ ಈ ಕಾಲನಿಯಲ್ಲಿ ಮುಸ್ಲಿಮರ ಹಬ್ಬದ ದಿನ ದನಗಳನ್ನು ಕಡಿಯಲಾಗುತ್ತದೆ ಎನ್ನುವ ಪುಕಾರು ಎಬ್ಬಿಸಿ ಗಲಭೆ ನಡೆಸುವುದು ಈ 'ಸೇನೆ'ಯ ಹುನ್ನಾರವಾಗಿತ್ತು. ಆದರೆ ಈ ಕಾಲನಿಯ ಜನ ಕೋಮು ಬೇಧ–ಭಾವವಿಲ್ಲದೆ ಒಟ್ಟಾಗಿ ನಿಂತುದರಿಂದ ಹಾಗೂ ಸಿಪಿಐ(ಎಂ)ನ ಉತ್ತರ ದಿಲ್ಲಿ ಜಿಲ್ಲಾಸಮಿತಿಯ ಕಾರ್ಯದರ್ಶಿ ಹಾಗೂ ದಿಲ್ಲಿ ರಾಜ್ಯಸಮಿತಿಯ ಸದಸ್ಯರ ನೇತೃತ್ವದಲ್ಲಿ ಒಂದು ಸಿಪಿಐ(ಎಂ) ನಿಯೋಗ ಅಲ್ಲಿಗೆ ಭೇಟಿ ನೀಡಿದುದರಿಂದ ಹಾಗೂ ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾದ ಸೀತಾರಾಂ ಯೆಚೂರಿ ಸ್ಪೆಶಲ್ ಕಮಿಶನರ್ ಆಫ್ ಪೋಲೀಸ್ ರವರನ್ನು ಸಂಪರ್ಕಿಸಿದ ಹಿನ್ನೆಲೆಯಲ್ಲಿ ಗಲಭೆಕೋರರ ಹುನ್ನಾರ ಫಲಿಸಲಿಲ್ಲ.

ದಿಲ್ಲಿಯಲ್ಲೂ ಕೋಮುಗಲಭೆಯ ಪ್ರಯತ್ನ


ಗಾಂಧೀಜಿ ಈಗ 'ಸ್ವಚ್ಛ ಭಾರತದ ಬ್ರಾಂಡ್ ರಾಯಭಾರಿ', ಅಷ್ಟೇ!

ಈ ಬಾರಿಯ ಗಾಂಧೀಜಯಂತಿಯ ಆಚರಣೆಯ ಪರಿಯನ್ನು ನೋಡಿದಾಗ ಹಲವರಲ್ಲಿ ಎದ್ದಿರುವ ಪ್ರಶ್ನೆಯಿದು. ಪ್ರಧಾನ ಮಂತ್ರಿಗಳು ಅಂದು 'ಸ್ವಚ್ಛತಾ ಅಭಿಯಾನ' ಉದ್ಘಾಟಿಸಿದರು. ಎಲ್ಲೆಲ್ಲೂ ಎಂದೂ ಪೊರಕೆ ಹಿಡಿಯದವರು ಪೊರಕೆ ಹಿಡಿದ ಫೋಟೋಗಳೇ. ಪ್ರಧಾನ ಮಂತ್ರಿಗಳು ಇಂತಹ ಒಂದು ಆಂದೋಲನವನ್ನು ಆರಂಭಿಸುತ್ತಾರೆ ಎಂಬ ಸುದ್ದಿ ಕೇಳಿಯೇ ದಿಲ್ಲಿ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶ ಮತ್ತು ದೇಶದಲ್ಲಿ ಮುಸ್ಲಿಮ್ ಅಲ್ಪಸಂಖ್ಯಾತರ ಸ್ಥಿತಿ–ಗತಿಯ ಬಗ್ಗೆ ಒಂದು ಕಣ್ಣು ತೆರೆಸುವ ವರದಿ ನೀಡಿದ ರಾಜೇಂದ್ರ ಸಚಾರ್ ಸ್ವಚ್ಛತೆಯ ಗೀಳು ಗಾಂಧೀ ಜಯಂತಿಯ ಗಂಭೀರತೆಯನ್ನು ಕೆಡಿಸದಿರಲಿ ಎಂದು ಎಚ್ಚರಿಸಿದ್ದರು. ಆದರೆ ಅವರ ಎಚ್ಚರಿಕೆಯ ಹೊರತಾಗಿಯೂ ಅದೇ ಸಂಭವಿಸಿದೆ.

ಪ್ರಧಾನ ಮಂತ್ರಿಗಳಿಂದ ಹಿಡಿದು, ಅವರ ಸಂಪುಟದ ಇತರ ಮಂತ್ರಿಗಳು, ಅವರ ಪಕ್ಷದ ಮುಖಂಡರುಗಳು, ಮಾಧ್ಯಮಗಳು, ಕಲಾವಿದರೂ ಸೇರಿದಂತೆ ಬುದ್ಧಿಜೀವಿಗಳ ಅಬ್ಬರದ ಮಾತುಗಳಲ್ಲಿ ಗಾಂಧೀಜಿಯವರ ಗಂಭೀರ ವಿಚಾರಗಳ ಕಿಂಚಿತ್ತೂ ಪ್ರಸ್ತಾಪವಿರಲಿಲ್ಲ, ಈ ಅಕ್ಟೋಬರ್ 2ರಂದು ನಮ್ಮ ದೇಶದ ಸಾಮೂಹಿಕ ಪ್ರಜ್ಞೆ ಗಾಂಧೀಜಿಯವರ ಧಾರ್ಮಿಕ ಸಾಮರಸ್ಯ, ಎಲ್ಲ ಧಾರ್ಮಿಕ ಸಮುದಾಯಗಳ ಸಮಾನತೆ ಮತ್ತು ವೈವಿಧ್ಯತೆ ನಮ್ಮ ರಾಷ್ಟ್ರೀಯತೆಯ ಆಧಾರ ಎಂಬ ಸಂಗತಿಯ ಸ್ವೀಕಾರ ಇವನ್ನೆಲ್ಲ ಉಪೇಕ್ಷಿಸಲು ನಿರ್ಧರಿಸಿದಂತಿತ್ತು ಎಂದು ಸಾವಿತ್ರಿ ಫುಲೆ ಪುಣೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸುಹಾಸ್ ಫಲ್ಶೀಕರ್ ಹೇಳುತ್ತಾರೆ.

2019ರಲ್ಲಿ ಗಾಂಧೀಜಿಯ 150ನೇ ಜನ್ಮದಿನಾಚರಣೆಯ ವರೆಗೂ ಇದನ್ನು ಆಚರಿಸಲಾಗುವುದು ಎಂದು ಪ್ರಧಾನಿಗಳು ಸಂಕೇತ ನೀಡಿದ್ದಾರೆ. ಆ ವೇಳೆಗೆ ನಮ್ಮ ಮುಂದಿನ ಪೀಳಿಗೆ ಗಾಂಧೀಜಿಯೆಂದರೆ ಸ್ವಚ್ಛತೆ ಮಾತ್ರ ಎಂದು ನಂಬುವಂತಾಗಬಹುದೇ ಎಂಬ ಭಯವನ್ನು ಫಲ್ಶೀಕರ್ ವ್ಯಕ್ತ ಪಡಿಸುತ್ತಾರೆ.

ಗಾಂಧಿಜಿಯ ಹತ್ಯೆಯ ನಂತರವೂ ಗಾಂಧೀಜಿಯ ಬಗ್ಗೆ ಶತ್ರುತ್ವದ ಭಾವನೆಯಿಂದಲೇ ಮಾತಾಡುತ್ತಿದ್ದವರ ಸರಕಾರ ಬಂದಾಗ ಇದ್ದಕ್ಕಿದ್ದಂತೆ ಅವರೇ ಅಧಿಕೃತ ಪ್ರತಿಮೆಯಾಗಿ ಬಿಟ್ಟಿದ್ದಾರೆ ಏಕೆ? ಹೊಸ ಸರಕಾರ ಗಾಂಧೀಜಿಯ ಮರುನಿರೂಪಣೆಗೆ ಮುಂದಾದಂತಿದೆ, ಅದು ಗಾಂಧೀಜಿಯನ್ನು ಸ್ವಚ್ಛತೆಯ 'ಬ್ರಾಂಡ್ ರಾಯಭಾರಿ' ಮಟ್ಟಕ್ಕೆ ಅಪಮೌಲ್ಯ ಮಾಡಿ ಇದನ್ನು ಸಾಧಿಸಬೇಕೆಂದಿರಬೇಕು. ಬಹುಶಃ 'ಸ್ವಚ್ಛತಾ ಅಭಿಯಾನ'ದ ನಿಜ ಆಶಯ ಇದೇ ಇದ್ದಿರಬೇಕು ಎನ್ನುತ್ತಾರೆ ಪ್ರೊ. ಸುಹಾಸ್ ಫಲಿಶ್ಕರ್.




ಕೃಪೆ : ಕೇಶವ್, ದಿ ಹಿಂದೂ ●


JANASHAKTHI KANNADA VARA PATRIKE OCT 19, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಮಹತ್ವದ ಸಂಶೋಧನೆಗಳಿಗೆ ನೊಬೆಲ್ ಪ್ರಶಸ್ತಿ:

ಭೌತ ವಿಜ್ಞಾನ: ವಿದ್ಯುತ್ ಉಳಿಸುವ ನೀಲಿ ವರ್ಣದ ಬೆಳಕಿನ ಆವಿಷ್ಕಾರ



ಕಡಿಮೆ ವಿದ್ಯುತ್‌ನಿಂದ ಹೆಚ್ಚಿನ ಬೆಳಕು ನೀಡುವ ದೀಪಗಳಿಗಾಗಿ ಶೋಧನೆ ನಿರಂತರವಾಗಿ ನಡೆಯುತ್ತಲೇ ಇದೆ. 20ನೇ ಶತಮಾನದಲ್ಲಿ ಇನ್‌ಕ್ಯಾಂಡಿಸೆಂಟ್ ಎಂದು ಕರೆಯಲಾಗುವ ಬಲ್ಬ್ ಗಳದೇ ಪಾರುಪತ್ಯ. ಇಂದಿಗೂ ನಮ್ಮ ಬಹುತೇಕ ಮನೆಗಳಿಂದ ಇವು ಕಣ್ಮರೆಯಾಗಿಲ್ಲ. ಇದರಲ್ಲಿ ಟಂಗಸ್ಟನ್ ಲೋಹದ ಫಿಲಮೆಂಟ್ ಎಂಬ ತಂತಿ ಇದ್ದು, ಫಿಲಮೆಂಟ್ ಕಾದ ನಂತರ ಬೆಳಕನ್ನು ನೀಡಲಾರಂಭಿಸುತ್ತವೆ. ಆಮೇಲೆ ಟ್ಯೂಬ್‌ಲೈಟ್(ಪ್ಲೋರೋಸೆಂಟ್) ದೀಪಗಳು ಬಂದವು. ಇದರಲ್ಲಿ ಪಾದರಸದ ಅನಿಲದ ಬಾಷ್ಪಗಳು ವಿದ್ಯುತ್ ಸರಬರಾಜಿನಿಂದ ಕಾದು ರಂಜ–ಕದ ಲೇಪನವನ್ನು ಬೆಳಗಿಸಿ, ಬೆಳಕು ಹರಿಸುತ್ತದೆ. ನಂತರದಲ್ಲಿ, ತಮ್ಮ ಕಡಿಮೆ ವಿದ್ಯುತ್‌ನಿಂದ ಹೆಚ್ಚಿನ ಬೆಳಕು ನೀಡುವ ಸಿಎಫ್‌ಎಲ್ ಬಲ್ಬ್‌ಗಳು(ಇವು ಟ್ಯೂಬ್‌ಲೈಟ್‌ನ ಸುದ–ರಿತ ತಳಿಗಳು) ನಿಧಾನವಾಗಿ ಆವರಿಸಿಕೊಳ್ಳುತ್ತಿದ್ದು, ಇನ್‌ಕ್ಯಾಂಡಿಸೆಂಟ್ ಬಲ್ಬ್‌ಗಳು ವಿದಾಯ ಹೇಳುತ್ತಿವೆ. ಇದೀಗ 21 ನೇ ಶತಮಾನದಲ್ಲಿ ಬೆಳಕು ನೀಡುವ ದೀಪಗಳಾಗಿ ಪ್ರವರ್ಧಮಾನಕ್ಕೆ ಬರುತ್ತಿರುವವೆಂದರೆ ಎಲ್.ಇ.ಡಿ ದೀಪಗಳು(ಲೈಟ್ ಎಮಿಟಿಂಗ್ ಡಯೋಡ್).



ಈ ವರ್ಷದ ಭೌತವಿಜ್ಞಾನದ ನೊಬೆಲ್ ಪಾರಿತೋಷಕವನ್ನು ನೀಲಿ ವರ್ಣದ ಎಲ್.ಇ.ಡಿ ದೀಪಗಳನ್ನು ಶೋಧಿಸಿದ ಜಪಾನಿನ ವಿಜ್ಞಾನಿಗಳಾದ ಇಸಮು ಅಕಸಕಿ, ಹಿರೊಶಿ ಅಮನೊ ಮತ್ತು ಕ್ಯಾಲಿಪೋರ್ನಿಯಾದಲ್ಲಿ ಸಂಶೋಧನೆ ನಡೆಸುತ್ತಿರುವ ವಿಜ್ಞಾನಿ ಶುಜು ನಕಮುರ ಎಂಬುವರಿಗೆ ನೀಡಲಾಗಿದೆ. ಎಲ್.ಇ.ಡಿ. ದೀಪಗಳು ಯಾವುದೇ ಅನಿಲಗಳನ್ನಾಗಲಿ, ಫಿಲಮೆಂಟನ್ನಾಗಲಿ ಬಳಸುವುದಿಲ್ಲ, ಹಾಗಾಗಿ ಇವು ಪರಿಸರ–ಸ್ನೇಹಿ. ಅಲ್ಲದೆ, ಇನ್‌ಕ್ಯಾಂಡಿಸೆಂಟ್ ಮತ್ತು ಪ್ಲೋರೋಸೆಂಟ್ ದೀಪಗಳಿಗೆ ಹೋಲಿಸಿದರೆ, ಎಲ್.ಇ.ಡಿ. ದೀಪಗಳು ವಿದ್ಯುಚ್ಛಕ್ತಿಯನ್ನು ನೇರವಾಗಿ ಬೆಳಕಿನ ಕಣಗಳನ್ನಾಗಿ ಪರಿವರ್ತಿಸುತ್ತವೆ. ಅಲ್ಲದೆ, ಇವುಗಳಿಂದ ಹೊರಡುವ ಬೆಳಕು ಸುತ್ತಲೂ ಚದುರದಂತೆ ಒಂದೇ ದಿಕ್ಕಿನಲ್ಲಿ ಸಾಂದ್ರತೆಯಿಂದ ಹಾಯಿಸಬಹುದು. ಇದರಿಂದಾಗಿ ಬಹುತೇಕ ಪ್ರಮಾಣದ ವಿದ್ಯುತ್ ನಷ್ಟವಾಗದೆ ಶಾಖವಾಗಿ ಪರಿವರ್ತನೆಗೊಂಡು ಹೆಚ್ಚಿನ ಬೆಳಕು ನೀಡುತ್ತದೆ, ಹಾಗಾಗಿಯೇ ಹೆಚ್ಚು ಇಂಧನ–ಕ್ಷಮತೆ ಹೊಂದಿವೆ.

ಎಲ್.ಇ.ಡಿ. ಎಂದರೆ ಗಾಲಿಯಂ ಫಾಸ್ಫೈಡ್, ಗಾಲಿಯಂ ನೈಟ್ರೈಡ್ ನಂತಹ ರಾಸಾಯನಿಕಗಳಿಂದ ತಯಾರಿಸಿದ ಜಂಕ್ಷನ್ ಹೊಂದಿರುವ ಒಂದು ರೀತಿಯ ಅರೆವಾಹಕಗಳು. ಇವುಗಳ ಮೂಲಕ ವಿದ್ಯುತ್ತನ್ನು ಹಾಯಿಸಿದಾಗ, ಇವುಗಳಲ್ಲಿರುವ ಕುಳಿಗಳು ಮತ್ತು ಎಲೆಕ್ಟ್ರಾನ್‌ಗಳು ಜಂಕ್ಷನ್ ಪರಸ್ಪರ ಸೇರಿಕೊಳ್ಳುವಂತೆ ಉದ್ದಕ್ಕೂ ಹರಿಯುತ್ತವೆ, ಈ ಪ್ರಕ್ರಿಯೆಯಲ್ಲಿ ಬೆಳಕನ್ನು ಬಿಡುಗಡೆ ಮಾಡುತ್ತವೆ.

1950ರ ದಶಕದಲ್ಲಿಯೇ ಕೆಂಪು ಮತ್ತು ಹಸಿರು ವರ್ಣದ ಎಲ್.ಇ.ಡಿ. ದೀಪಗಳನ್ನು ಆವಿಷ್ಕರಿಸಲಾಗಿದ್ದು, ಅವುಗಳನ್ನು ಡಿಜಿಟಲ್ ಡಿಸ್‌ಪ್ಲೇಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಇದಕ್ಕೆ ನೀಲಿ ವರ್ಣವನ್ನು ಕೂಡ ಸೇರಿಸಿದಲ್ಲಿ ಹೆಚ್ಚು ಪ್ರಕಾಶಮಾನದ ಬಿಳಿ ಬೆಳಕನ್ನು ಪಡೆಯುವುದು ಸಾಧ್ಯ. ಆದರೆ, ನೀಲಿ ವರ್ಣದ ಎಲ್.ಇ.ಡಿ. ದೀಪದ ಆವಿಷ್ಕಾರ ಬಹಳ ಕಷ್ಟಕರವಾಗಿತ್ತು. ಪುಡಿ ರೂಪದಲ್ಲಿದ್ದ ಗಾಲಿಯಂ ನೈಟ್ರೈಡ್‌ನ್ನು ಹರಳಿನ ರೂಪಕ್ಕೆ ತಂದು ಅದರಿಂದ ಎಲ್.ಇ.ಡಿ. ತಯಾರಿಸುವುದು ಸವಾಲಿನದ್ದಾಗಿದ್ದರೆ, ಅದನ್ನು ವಿದ್ಯುತ್ ನಷ್ಟ ಮಾಡದ ಪದರುಗಳಾಗಿ ರೂಪಿಸಿ ಫ್ಯಾಬ್ರಿಕೇಟ್ ಅಂ–ದರೆ ಲೇಪನ ಮಾಡುವುದು ಮತ್ತೊಂದು ಸವಾಲಾಗಿತ್ತು. ಈ ಸವಾಲುಗಳನ್ನು ಎದುರಿಸಿ, ನೀಲಿ ವರ್ಣದ ಎಲ್.ಇ.ಡಿ. ದೀಪಗಳನ್ನು ಅವಿಷ್ಕರಿಸುವಲ್ಲಿ ಈ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ.



ಇದರಿಂದಾಗಿ, ಸಂಗೀತ, ಚಿತ್ರಗಳು, ಮತ್ತು ಚಲನಚಿತ್ರಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲು ಈ ತಂತ್ರಜ್ಞಾನ ನೆರವಾಗಿದೆ. ಇಂದು ಎಲ್.ಇ.ಡಿ. ದೀಪಗಳನ್ನು ಸ್ಮಾರ್ಟ್‌ಪೋನ್‌ಗಳು, ಟಾರ್ಚ್ ಲೈಟ್‌ಗಳು, ಇತ್ಯಾದಿಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಎಲ್.ಇ.ಡಿ. ಯಿಂದ ಬೆಳಗುವ ಬಿಳಿಯ ಬೆಳಕು ಇತ–ರೆ ಮೂಲಗಳಿಗಿಂತ ಹೆಚ್ಚು ಇಂಧನ–ಕ್ಷಮತೆ ಹೊಂದಿದೆ. ಟಂಗ್‌ಸ್ಟನ್ ಬಲ್ಬ್ ಸುಮಾರು 1,000 ಘಂಟೆ ಉರಿದರೆ, ಟ್ಯೂಬ್ ಲೈಟ್ ಸುಮಾರು 10,000 ಘಂಟೆ ಬೆಳಗಬಲ್ಲದು. ಆದರೆ ಎಲ್.ಇ.ಡಿ. ದೀಪ ಸುಮಾರು 1 ಲಕ್ಷ ಘಂಟೆ ಬೆಳಗಬಲ್ಲುದು. ಸೂರ್ಯ ಶಕ್ತಿಯಿಂದಲೂ ಇವುಗಳಿಗೆ ವಿದ್ಯುತ್ ಹಾಯಿಸಿ ಉರಿಸಬಹುದು.

******

ಮೆದುಳಿನಲ್ಲಿ 'ಜಿಪಿಎಸ್' ಸಿಸ್ಟಮ್!

ಶರೀರಶಾಸ್ತ್ರದ (ಅಥವಾ ವೈದ್ಯಕೀಯ) ಆವಿಷ್ಕಾರಕ್ಕೆ ಮೀಸಲಿರುವ ನೊಬೆಲ್ ಪ್ರಶಸ್ತಿಯನ್ನು ಈ ಸಲ "ನಮ್ಮ ಸ್ಥಾನ ವ್ಯವಸ್ಥೆ ಕುರಿತು ತಿಳಿಯಪಡಿಸುವ ಮೆದುಳಿನಲ್ಲಿರುವ ಕೋಶಗಳ" ಆವಿಷ್ಕಾರಕ್ಕಾಗಿ ನೀಡಲಾಗಿದೆ. ಲಂಡನ್‌ನ ವಿಜ್ಞಾನಿ ಜಾನ್ ಒ'ಕೀಫ್ ರವರು ಅರ್ಧ ಪ್ರಶಸ್ತಿಯನ್ನು, ಮತ್ತು ಇನ್ನರ್ಧವನ್ನು ನಾರ್ವೆಯ ವಿಜ್ಞಾನಿ ಮೇ–ಬ್ರಿಟ್ ಮೋಸರ್ ಮತ್ತು ಎಡ್ವರ್ಡ್ ಮೋಸರ್ ರವರುಗಳು ಹಂಚಿಕೊಂಡಿದ್ದಾರೆ. ಈ ಕೋಶಗಳು ನಾವು ಯಾವ ಪರಿಸರದಲ್ಲಿದ್ದೇವೆಂಬ ಕುರಿತು ನಮಗೆ ಅರಿವು ನೀಡುತ್ತವೆ ಮತ್ತು ಪಯಣ ನಡೆಸಲು ಸಾಮರ್ಥ್ಯ ನೀಡುತ್ತವೆ. ಸ್ಥಾನದ ಕುರಿತು ಅರಿವು ನೀಡುವ ಕೋಶಗಳಿಂದ ನಮಗೆ ಪರಿಸರಕ್ಕೆ ಸಂಬಂಧಿಸಿದಂತೆ ನಾವಿರುವ ಸ್ಥಾನದ ಕುರಿತು ತಿಳಿದರೆ, ಪಯಣದ ಸಾಮರ್ಥ್ಯದಿಂದಾಗಿ ಹಿಂದಿನ ಸ್ಥಾನದಿಂದ ನಮಗೆ ದಿಕ್ಕು ಮತ್ತು ದೂರದ ಅರಿವು ಉಂಟಾಗುತ್ತದೆ. ಇದನ್ನೇ ಮೆದುಳಿನಲ್ಲಿರುವ 'ಜಿಪಿಎಸ್' ವ್ಯವಸ್ಥೆ ಎನ್ನಬಹುದು!



1948ರಷ್ಟು ಹಿಂದೆಯೇ ಅಮೇರಿಕಾದ ಮನೋಶಾಸ್ತ್ರಜ್ಞ ಎಡ್ವರ್ಡ್ ತೋಲ್ಮನ್ ಎಂಬಾತ ನಮ್ಮ ಮೆದುಳಿನಲ್ಲಿ ನಕ್ಷೆ ರೀತಿಯ ಪರಿಕಲ್ಪನೆ ವ್ಯವಸ್ಥೆ ಇದೆ ಎಂದು ಪ್ರತಿಪಾದಿಸಿದ್ದ. ಆದರೆ ಈ ಕಾರ್ಯಗಳನ್ನು ನಡೆಸುವ ಕೋಶಗಳು ಮೆದುಳಿನ ಯಾವ ಭಾಗದಲ್ಲಿವೆ ಮತ್ತು ಅವು ಹೇಗೆ ಕಾರ್ಯನಿರ್ವಹಿಸುತ್ತವೆ ಎಂದು ಗೊತ್ತಿರಲಿಲ್ಲ.

ಸ್ಥಳ ಕೋಶಗಳು

ವಿಜ್ಞಾನಿ ಒ'ಕೀಫ್‌ನು ಮುಕ್ತವಾಗಿ ಚಲಿಸುವ ಪ್ರಾಣಿಗಳನ್ನು ಪ್ರಯೋಗಕ್ಕೆ ಬಳಸುವುದರ ಮೂಲಕ ಸ್ಥಳಕ್ಕೆ ಸಂಬಂಧಿಸಿದ ಇಂದ್ರಿಯ ಕೋಶದ ಅಸ್ತಿತ್ವದ ಕುರಿತು ಪ್ರತಿಪಾದಿಸಿದನು. ಪ್ರಾಣಿಗಳು ಚಲಿಸಿದಂತೆಲ್ಲ ಅವುಗಳ ಮೆದುಳಿನ ನರಕೋಶಗಳ ಚಟುವಟಿಕೆ ಯಿಂದಾಗಿ ಸ್ಥಳ ಕ್ಷೇತ್ರವನ್ನು ಕಂಡುಹಿಡಿ ಯುವುದಕ್ಕೂ ಮತ್ತು ಸ್ಥಳ ಕುರಿತಂತೆ ಇಂದ್ರಿಯಕ್ಕೆ ಸಂಬಂಧಿಸಿದ ನರತಂತುವಿನ ಚಟುವಟಿಕೆಯನ್ನು ಅರಿಯು ವುದಕ್ಕೂ ಸಾಧ್ಯವಾಯಿತು. ಮೆದುಳಿ ನಲ್ಲಿರುವ 'ಹಿಪ್ಪೊಕ್ಯಾಂಪಸ್' ಎಂಬ ಭಾಗದಲ್ಲಿ ಈ ನರ ಚಟುವಟಿಕೆಗಳಿರುವುದನ್ನು ಕಂಡುಹಿಡಿಯಲಾಯಿತು.

ಹೀಗೆ ಮೆದುಳಿನಲ್ಲಿರುವ ಹಿಪ್ಪೊಕ್ಯಾಂಪಸ್ ಭಾಗದಲ್ಲಿ ಸ್ಥಳ ಕೋಶಗಳಿರುವುದು, ಅವುಗಳಿಂದಾಗಿ ಮೆದುಳು–ನಕ್ಷೆ ಇರುವುದು ಸಾಬೀತಾಯಿತು. ಈ ಸ್ಥಳಕೋಶಗಳು ತಮ್ಮ ಅರಿವಿಗೆ ಬರುವ ಪರಿಸರದ ವಿವಿಧ ಸ್ಥಳಗಳನ್ನು ನೆನಪಿನ ಸೆಲೆಯಲ್ಲಿ ಕ್ರೋಢೀಕರಿಸುತ್ತಾ ಇರುತ್ತವೆ.

ಪಯಣದ ಕೋಶಗಳು

ಮೋಸರ್ ವಿಜ್ಞಾನಿಗಳು ಇನ್ನೂ ಮುಂದೆ ಹೋಗಿ, ಮೆದುಳಿನಲ್ಲಿ ಪಯಣದ ಕೋಶಗಳು (ಗ್ರಿಡ್ ಸೆಲ್‌ಗಳು) ಇರುವುದನ್ನು ಪತ್ತೆ ಹಚ್ಚಿದರು. ಸ್ಥಳ ಕೋಶಗಳು ಸ್ಥಳದ ನಕ್ಷೆಯನ್ನು ರೂಪಿಸಿದರೆ, ಗ್ರಿಡ್ ಕೋಶಗಳು ಹಾದಿಗೆ ಅನುವಾಗಲು ಪಯಣದ ವ್ಯವಸ್ಥೆಯನ್ನು ರೂಪಿಸುತ್ತವೆ. ಈ ಕೋಶಗಳು ತಲೆಯ ದಿಕ್ಕಿನ ಕೋಶಗಳು ಮತ್ತು ಗಡಿಯ ಕೋಶಗಳ ಜೊತೆಗೆ ಹೆಣೆದುಕೊಂಡಿವೆ. ಇವುಗಳ ಸಮಗ್ರ ಮತ್ತು ಐಕ್ಯ ಚಟುವಟಿಕೆಯಿಂದ ಪಯಣಕ್ಕೆ ಸಹಕಾರಿಯಾಗುತ್ತದೆ.

ಈ ಪ್ರಯೋಗಗಳನ್ನು ಇಲಿಗಳ ಮೇಲೆ ನಡೆಸಿ ದೃಢಪಡಿಸಿಕೊಂಡಿದ್ದರೂ, ಅಂತಹ ನರಕೋಶಗಳ ವ್ಯವಸ್ಥೆಯು ಮನುಷ್ಯರನ್ನು ಒಳಗೊಂಡಂತೆ ಇತರೆ ಪ್ರಾಣಿಗಳಲ್ಲಿಯೂ ಇದೆ. ಸಸ್ತನಿಗಳು ಮತ್ತು ಸಸ್ತನಿಯೇತರ ಪ್ರಾಣಿಗಳಲ್ಲಿಯೂ ಪಯಣ ಸಾಮರ್ಥ್ಯದೊಂದಿಗೆ ಹಿಪ್ಪೊಕ್ಯಾಂಪಸ್–ರೀತಿಯ ಆಕೃತಿಯನ್ನು ಕಾಣಬಹುದಾಗಿದೆ. ಇದರಿಂದ ಬೆನ್ನೆಲುಬಿರುವ ಪ್ರಾಣಿಗಳಲ್ಲಿ ಈ ಕೋಶ ವ್ಯವಸ್ಥೆ ಮತ್ತು ಕಾರ್ಯನಿರ್ವಹಣೆಗಳು ಅಭಿವೃದ್ಧಿಗೊಳ್ಳುತ್ತಾ ಬಂದಿವೆ.

ಮೆದುಳು ಶಸ್ತ್ರಚಿಕಿತ್ಸೆಗೊಳಪಟ್ಟ ರೋಗಿಗಳಲ್ಲಿಯೂ ಇದು ದೃಢಪಟ್ಟಿದ್ದು, ಈ ಆವಿಷ್ಕಾರದಿಂದ ಮರೆಗುಳಿತನ ಒಳಗೊಂಡಂತೆ ಹಲವು ರೋಗಗಳ ಚಿಕಿತ್ಸೆಗೆ ಸಹಕಾರಿಯಾಗುವುದು. ಮರೆಗುಳಿತನ ಇದ್ದವರಿಗೆ ಸ್ಥಳ ಮತ್ತು ಪಯಣದ ಕುರಿತು ಅರಿವು ನಶಿಸಿಹೋಗುತ್ತದೆ.

******

ಸೂಕ್ಷ್ಮದರ್ಶಕವು ನ್ಯಾನೋದರ್ಶಕವಾದದ್ದು ಹೇಗೆ?

ವಿಜ್ಞಾನದ ಹಿರಿಮೆ ಇರುವುದು–ಮನುಷ್ಯ ಯಾವುದನ್ನು ಮಿತಿ ಎಂದುಕೊಳ್ಳುತ್ತಾನೋ ನಿಸರ್ಗದ ನಿಯಮವನ್ನರಿತು ಅದನ್ನು ಮೀರುವುದೇ ಆಗಿದೆ. 17 ನೇ ಶತಮಾನದಲ್ಲಿ ಮೊದಲ ಬಾರಿಗೆ ಸೂಕ್ಷ್ಮ ದರ್ಶಕವೊಂದನ್ನು ಆವಿಷ್ಕರಿಸಿ ಅದರ ಮೂಲಕ ಕಣ್ಣಿಗೆ ಕಾಣದೇ ಇದ್ದ ಕೆಂಪು ರಕ್ತ ಕಣಗಳು, ಬ್ಯಾಕ್ಟೀರಿಯಾ, ಈಸ್ಟ್ ಕೋಶಗಳು, ಇತ್ಯಾದಿ ಸೂಕ್ಷ್ಮಾಣು ಜೀವಿಗಳನ್ನು ಕಾಣಲಾಯಿತು. 1873ರಲ್ಲಿ ಸೂಕ್ಷ್ಮದರ್ಶಕ ತಜ್ಞ ಅರ್ನ್ಸ್ಟ್ ಅಬ್ಬೆ ಎಂಬುವನು ಒಂದು ಸಮೀಕರಣವನ್ನು ಪ್ರಕಟಿಸಿ ಸೂಕ್ಷ್ಮದರ್ಶಕದ ಚಿತ್ರದ ಸ್ಪಷ್ಟತೆ(resolution) ಗೊಂದು ಮಿತಿಯಿದ್ದು ಇದಕ್ಕೆ ಪ್ರಧಾನವಾಗಿ ಬೆಳಕಿನ ತರಂಗಾಂತರ (ಅಲೆಯಗಲ)ವೇ ಕಾರಣ ಎಂದು ಹೇಳಿದ. ಹೀಗಾಗಿ 20ನೇ ಶತಮಾನದ ಪೂರಾ ವಿಜ್ಞಾನಿಗಳು ಏನೆಂದು ನಂಬಿದ್ದರೆಂದರೆ 0.2 ಮೈಕ್ರೋಮೀಟರ್ ಗಿಂತ ಸಣ್ಣವಿರುವ ವಸ್ತುಗಳನ್ನು ಸೂಕ್ಷ್ಮದರ್ಶಕಗಳಿಂದ ನೋಡಲು ಸಾಧ್ಯವೇ ಇಲ್ಲ ಎಂದು. ನಮ್ಮ ಒಂದು ತಲೆಗೂದಲ ದಪ್ಪ 100 ಮೈಕ್ರೋ ಮೀಟರ್ ಇದೆ. ಹೆಚ್ಚೆಂದರೆ ಕೂದಲಿಗಿಂತ 500 ಪಟ್ಟು ಕಡಿಮೆ ಗಾತ್ರವಿರುವ ವಸ್ತುಗಳನ್ನು ನೋಡಬಹುದಾಗಿತ್ತು. ಆದರೆ ಅದಕ್ಕಿಂತಲೂ ಸಣ್ಣವಿರುವ ವೈರಸ್, ಪ್ರೋಟೀನ್, ಸಣ್ಣ ಅಣುಗಳು ಕೂದಲಿಗಿಂತಲೂ ಸಾವಿರ, ಲಕ್ಷ ಪಟ್ಟು ಕಡಿಮೆ ಗಾತ್ರ ಇವೆ. ಕೋಶದೊಳಗಿನ ಪ್ರೋಟೀನನ್ನು ಕಾಣಬಹುದಾಗಿತ್ತೇ ಹೊರತು, ಪ್ರೋಟೀನ್ ಅಣುಗಳ ನಡುವಿನ ಅಂತರಕ್ರಿಯೆಯನ್ನು ನೋಡಲು ಸಾಧ್ಯವಿರಲಿಲ್ಲ.

ಇದೀಗ ಅಬ್ಬೆಯ ಸಮೀಕರಣವನ್ನು ಹಿಂದಿಕ್ಕಿ, ವಸ್ತುಗಳು ಅದೆಷ್ಟೇ ಸಣ್ಣಾತಿಸಣ್ಣ ಇದ್ದರೂ ಅವುಗಳನ್ನು ನೋಡಲು ಸಾಧ್ಯವಾಗುವಂತೆ ನ್ಯಾನೋ ದರ್ಶಕವನ್ನು ಆವಿಷ್ಕರಿಸಿರುವ ಎರಿಕ್ ಬೆಟ್ಜಿಗ್, ಸ್ಟೆಫನ್ ಹೆಲ್ ಮತ್ತು ವಿಲಿಯಮ್ ಮೊಯಿರ್ನರ್ ಎಂಬ ಮೂವರು ವಿಜ್ಞಾನಿಗಳಿಗೆ ಈ ಸಲದ ರಸಾಯನಶಾಸ್ತ್ರದ ನೊಬೆಲ್ ಪಾರಿತೋಷಕ ನೀಡಲಾಗಿದೆ.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**